
ನಮ್ಮ ಮಾನಸ

ಸಂಪುಟ : 4 ಜನವರಿ 2011 ಸಂಚಿಕೆ : 9



ಭಾಗ್ಯಲಕ್ಷ್ಮಿ

ವನಿತೆಯರ ಪಾಲಿಗೆ ವರದಾನ

ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನಕ್ಕೆ ಹೆಚ್ಚಿನ ಮನ್ನಣೆ ದೊರಕಿಸಿಕೊಡುವ ಸದುದ್ದೇಶದಿಂದ ಕರ್ನಾಟಕ ಸರ್ಕಾರವು ಕೈಗೊಂಡಿರುವ ಮಹತ್ವದ ಯೋಜನೆ-ಭಾಗ್ಯಲಕ್ಷ್ಮಿ. ಬಡತನದ ರೇಖೆಗಿಂತ ಕೆಳಗಿನ ಕುಟುಂಬದಲ್ಲಿ 31ನೇ ಮಾರ್ಚ್ 2006ರ ನಂತರ ಜನಿಸಿದ ಇಬ್ಬರು ಹೆಣ್ಣುಮಕ್ಕಳಿಗೆ, ಅವರು 18 ವರ್ಷ ವಯಸ್ಸು ತಲುಪಿದಾಗ ರೂ. 1,00,000/-ವನ್ನು ನೀಡುವುದು ಈ ಯೋಜನೆಯ ಸಾರಾಂಶ.

ಯೋಜನೆಯ ಮುಖ್ಯಾಂಶಗಳು

- **2006-07ನೇ ಸಾಲಿನಲ್ಲಿ ನೋಂದಾಯಿತರಾದ ಫಲಾನುಭವಿಗಳಿಗೂ ರೂ. 10,850/- ಠೇವಣಿ.**
- **2007-08ನೇ ಸಾಲಿನಲ್ಲಿ ನೋಂದಾಯಿತರಾದ ಫಲಾನುಭವಿಗಳಿಗೂ ರೂ.20,000/-ಠೇವಣಿ. 2008-09ನೇ ಸಾಲಿಗೆ ಇದನ್ನು ಇಮ್ಮಡಿಗೊಳಿಸಲಾಗಿದೆ.**
- **31ನೇ ಮಾರ್ಚ್ 2006ರ ನಂತರ ಬಿಪಿಎಲ್ ಕುಟುಂಬದಲ್ಲಿ ಜನಿಸಿದ ಎರಡು ಹೆಣ್ಣುಮಕ್ಕಳು ಈ ಯೋಜನೆಗೆ ಅರ್ಹರು. ಆ ಕುಟುಂಬ 3ಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರಬಾರದು.**
- **ಒಂದನೇ ತರಗತಿಯಿಂದ ಹತ್ತನೆಯ ತರಗತಿಯವರೆಗೆ, ರೂ.300/-ರಿಂದ ರೂ. 1000/-ವರೆಗಿನ ವಾರ್ಷಿಕ ವಿದ್ಯಾರ್ಥಿವೇತನ**
- **18 ವರ್ಷ ವಯಸ್ಸಿನವರೆಗೂ ರೂ. 25,000/-ದಷ್ಟು ಆರೋಗ್ಯವಿಮೆ.**
- **ದುಡಿಯುತ್ತಿರುವ ತಂದೆ, ತಾಯಿ ಅಥವಾ ಪೋಷಕರ ಸಾವು ಸಂಭವಿಸಿದಲ್ಲಿ ರೂ. ಒಂದು ಲಕ್ಷದವರೆಗೆ ಕುಟುಂಬ ವಿಮೆ.**

ಸ್ತ್ರೀ ಸಬಲೀಕರಣಕ್ಕೆ ವಿನೂತನ ಕ್ರಮ

ಕರ್ನಾಟಕ ವಾರ್ತೆ

ಮ್ಮ ಮಾನಸ

ವರಿ 2011
ಪುಟ : 4 ಸಂಚಿಕೆ : 9

tor, Printer and Publisher
eshwari H.S.,
114/5, 9th Cross, 2nd Main
umarajpet, Bangalore - 560 018.
bile : 9449345698

nted at
Mudrana
36, 40 Ft. Road, Raghavanagara,
v Timberyard Layout
ngalore-26.
26757159

ದಾ ವಿವರ
ಪ್ರತಿ 8–00 ರೂ.
ರ್ಷಿಕ ಚಂದಾ 100–00 ರೂ.
ಶೇಷ ಸಂಚಿಕೆಯೊಂದಿಗೆ)
ಷ್ಠೆಗಳಿಗೆ 150–00 ರೂ.

ಮ್ಮ ಮಾನಸ
/5, 9ನೇ ತಿರುವು, 2ನೇ ಮುಖ್ಯರಸ್ತೆ,
ಮರಾಜಪೇಟೆ, ಬೆಂಗಳೂರು – 560 018

ದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ
ತಿ. ಮೂಲಕ ಕಳಿಸಬಹುದು

– –

ಸೂರಿನಲ್ಲಿ ಓದುಗರು ಪ್ರತಿಗಳಿಗೆ ಹಾಗೂ
ದಾ ನವೀಕರಣಕ್ಕೆ ಸಂಪರ್ಕಿಸಿ

ಂ. ವನಜ
29, 12ನೇ ಮೈನ್, 2ನೇ ಹಂತ,
ಯನಗರ, ಮೈಸೂರು – 570 017

ಾರಂಭ : 'ಮಾನುಷಿ' (1985ರಲ್ಲಿ),
ಅನಂತರ 'ಮಾನಸ',
ಈಗ 'ನಮ್ಮ ಮಾನಸ'

ಸಂಪಾದಕೀಯ

ಮಾನಸಕ್ಕೆ ಇಪ್ಪತ್ತೈದರ ಹೊಸ್ತಿಲು ಸ್ವಾಯತ್ತತೆಗೆ ಸವಾಲುಗಳ ಸಾಲು ಸಾಲು

2011ರ ಹೊಸ ವರ್ಷದಲ್ಲಿ 'ನಮ್ಮ ಮಾನಸ' 25 ವರ್ಷಗಳನ್ನು ಪೂರೈಸಿ 26ನೆಯ ವರ್ಷಕ್ಕೆ ಕಾಲಿಡುತ್ತಿದೆ. 1986ರಲ್ಲಿ ಈ ಪತ್ರಿಕೆ 'ಮಾನವಿ' ಎಂಬ ಹೆಸರಿನಲ್ಲಿ ದ್ವೈಮಾಸಿಕ ಪತ್ರಿಕೆಯಾಗಿ ಪ್ರಾರಂಭವಾಯಿತು. 1987ರಿಂದ 'ಮಾನಸ' ತಿಂಗಳ ಪತ್ರಿಕೆಯಾಗಿ ರೂಪುಗೊಂಡಿತು. ಮೇ 2007ರಿಂದ 'ನಮ್ಮ ಮಾನಸ' ತಿಂಗಳ ಪತ್ರಿಕೆಯಾಗಿ ನಿರಂತರವಾಗಿ ಪ್ರಕಟಗೊಳ್ಳತೊಡಗಿದೆ. ಹೆಸರುಗಳ ಬದಲಾವಣೆ ಪತ್ರಿಕೆಯ ನೋಂದಾವಣೆಯ ತಾಂತ್ರಿಕ ಕಾರಣಗಳಿಂದಾಗಿ ಆದುದಷ್ಟೆ. 25 ವರ್ಷಗಳನ್ನು ಪೂರೈಸಿದ ಈ ಅವಧಿಯಲ್ಲಿ ಮಾನಸ ಪತ್ರಿಕೆಯ ಪ್ರಕಟಣೆಯಲ್ಲಿ ಹಿಂದೆ ಇದ್ದ ಸವಾಲುಗಳು ಹಾಗೂ ನಮ್ಮ ಮುಂದಿರುವ ಸವಾಲುಗಳನ್ನು ಅವಲೋಕಿಸುವುದು ಅರ್ಥಪೂರ್ಣ ಎಂದು ನಾವು ಭಾವಿಸುತ್ತೇವೆ. ಈ ಹಂತದಲ್ಲಿ ಸಣ್ಣ ಪತ್ರಿಕೆ ಎದುರಿಸುವ ಸವಾಲುಗಳನ್ನು ಗುರುತಿಸುವುದೂ ಕೂಡಾ ಇಲ್ಲಿ ಮುಖ್ಯವಾಗುತ್ತದೆ.

ತಾತ್ತ್ವಿಕ ದೃಷ್ಟಿಕೋನದಿಂದ ಸ್ವಾಯತ್ತತೆ ಮಾನಸ ಪತ್ರಿಕೆಯ ಆದ್ಯ ವಿಚಾರವಾಗಿದೆ. 1986ರಲ್ಲಿ 'ಮಾನಸ' ಪ್ರಾರಂಭವಾದಾಗಿನಿಂದಲೂ ಸರ್ಕಾರಿ, ವಿದೇಶೀ ಅಥವಾ ಇನ್ನಾವುದೇ ಏಜೆನ್ಸಿಯಿಂದ ಹಣದ ನೆರವನ್ನು ಪಡೆಯಬಾರದು ಎನ್ನುವ ನಿಲುವನ್ನು ಉಳಿಸಿಕೊಂಡೇ ಪತ್ರಿಕೆಯನ್ನು ನಡೆಸುತ್ತಾ ಬಂದಿದ್ದೇವೆ. ಚಳವಳಿಯ ಭಾಗವಾಗಿರುವ ಪತ್ರಿಕೆ ಯಾರ ಹಂಗಿಗೂ ಒಳಗಾಗದೇ 'ಸ್ವಾಯತ್ತತೆ' ಉಳಿಸಿಕೊಳ್ಳಬೇಕು ಎನ್ನುವ ಅಪೇಕ್ಷೆ ಒಂದು ಕಡೆಯಾದರೆ, 'ಮಾನಸ'ಕ್ಕಾಗಿ ಎತ್ತಿದ ಹಣದ ಸಂಗ್ರಹಣೆಯೇ ಸಮುದಾಯದ ಜೊತೆ ನಿರಂತರವಾಗಿ ನಡೆಯುವ ಒಂದು ಸಂವಾದದ ರೀತಿಯ ಚಟುವಟಿಕೆಯಾಗಬೇಕೆಂಬುದು ಇನ್ನೊಂದು ಆಶಯ. ಅಂದರೆ 1986ರಿಂದ ಇಲ್ಲಿಯವರೆಗೆ ಯಾವ ಧನಸಹಾಯವನ್ನು ನೆಚ್ಚಿಕೊಳ್ಳದೇ ಪತ್ರಿಕೆ ಸ್ವತಂತ್ರವಾಗಿ ಬೆಳೆದುಕೊಂಡು ಬಂದಿದೆ. ಚಂದಾಹಣ, ವೈಯಕ್ತಿಕ ದೇಣಿಗೆ, ಮಹಿಳೆಯರಿಗೆ ವಿರುದ್ಧವಲ್ಲದ ಸರ್ಕಾರಿ, ವೈಯಕ್ತಿಕ, ಸಾರ್ವಜನಿಕ ಜಾಹೀರಾತು ಇಂತಹ ಕ್ರಮಗಳಿಂದಲೇ ಹಣ ಸಂಗ್ರಹಣೆ ಮಾಡುತ್ತಿದ್ದೇವೆ. ಇಂದು ಪತ್ರಿಕೆಯ ಪ್ರಕಟಣೆ, ವಿಳಾಸ ಅಂಟಿಸುವ, ಪೋಸ್ಟ್ ಮಾಡುವ–ಎಲ್ಲಾ ಪ್ರಕ್ರಿಯೆಗಳಿಗೆ ನಮಗೆ 6000ದಿಂದ 7000ದ ರೂ.ಗಳವರೆಗೆ ಖರ್ಚು–ವೆಚ್ಚಗಳು ಆಗುತ್ತಿವೆ. ಪ್ರಕಟಣೆಯ ವೆಚ್ಚ ಭರಿಸಲು ಮಾನಸ ಬಳಗದ ಸದಸ್ಯರು ಆರಂಭದಿಂದಲೂ ವೈಯಕ್ತಿಕ ದೇಣಿಗೆ ನೀಡುತ್ತಾ ಬಂದಿದ್ದಾರೆ. ಈಗಲೂ ಸಹ ಇಂತಹ ಕ್ರಮವನ್ನು ಹಣ ಸಂಗ್ರಹಣೆಯ ಒಂದು ಭಾಗವಾಗಿ ನಾವು ವಿಸ್ತರಿಸಿಕೊಂಡಿದ್ದೇವೆ. ಪತ್ರಿಕೆಗೆ ನೀವೆಲ್ಲರೂ ನಿಮ್ಮದೇ ಆದ ರೀತಿಯಲ್ಲಿ ದೇಣಿಗೆ ನೀಡಿದ್ದೀರಿ. ಕೇಳಿದಾಗ ಇಲ್ಲವೆನ್ನದೇ ನಮ್ಮೊಡನೆ ಕೈ ಜೋಡಿಸಿದ್ದೀರಿ. ಹಾಗಾಗಿ ನಿಮ್ಮ ಸಹಾಯ–ಸಹಕಾರಕ್ಕೆ ನಾವು ಚಿರಋಣಿಗಳಾಗಿದ್ದೇವೆ. ಹೀಗೆಯೇ ನಿಮ್ಮ ಪ್ರೋತ್ಸಾಹ, ಸಹಕಾರ ನಮ್ಮ ಜೊತೆಗಿರಲಿ ಎಂದು ನಾವು ನಿರೀಕ್ಷಿಸುತ್ತೇವೆ.

ಸ್ವಾಯತ್ತತೆಯ ಇನ್ನೊಂದು ಅಂಶವೆಂದರೆ ಯಾವುದೇ ಪಕ್ಷಕ್ಕಾಗಲೀ, ಪಕ್ಷದ ನೀತಿಗಾಗಲಿ ಅಂಟಿಕೊಂಡು 'ನಮ್ಮ ಮಾನಸ' ಕೆಲಸ ಮಾಡಿಲ್ಲ. ಪಕ್ಷ ರಹಿತವಾದ ರಾಜಕೀಯ ಬದ್ಧತೆಯೇ ನಮ್ಮೆಲ್ಲರನ್ನು ಒಟ್ಟುಗೂಡಿಸಿ 'ಪತ್ರಿಕೆ'ಯ ಕೆಲಸಕ್ಕೆ ತೊಡಗಿಸುವಂತೆ ಪ್ರೇರಿಸಿದೆ. ಹಾಗಾಗಿ ನಮ್ಮ ನಿಲುವುಗಳಲ್ಲಿ ನಾವು ಯಾವುದೇ ಪಕ್ಷಕ್ಕಾಗಲೀ, ಯಾವುದೇ ಸರ್ಕಾರದ ರೀತಿ ರಿವಾಜುಗಳಿಗಾಗಲೀ ಶಾಮೀಲಾಗದೇ ಸ್ವಾಯತ್ತತೆಯನ್ನು ಎತ್ತಿ ಹಿಡಿಯುತ್ತಾ ಬಂದಿದ್ದೇವೆ.

ಪತ್ರಿಕೆಯ ಪ್ರಕಟಣೆಯಲ್ಲಿ ಕಲೆಕ್ಟೀವ್ ಅಂಶಕ್ಕೆ (ಸಾಮುದಾಯಿಕ ಪ್ರಯತ್ನ) ನಾವು ಎಂದಿಗೂ ಪ್ರಾಮುಖ್ಯ ನೀಡುತ್ತಲೇ ಬಂದಿದ್ದೇವೆ. ಜನವರಿ 1994ರ ಸಂಚಿಕೆಯಲ್ಲಿ ಮಾನಸದ 'ಅವಲೋಕನ'ದಲ್ಲಿ ಪತ್ರಿಕೆಯ ಸ್ವಾಯತ್ತತೆ, ಕಲೆಕ್ಟೀವ್‌ನೆಸ್, ಹಣಸಂಗ್ರಹಣೆ, ಪತ್ರಿಕೆಯ ವೈಚಾರಿಕ ಬದ್ಧತೆ, ಮಹಿಳಾ ಚಳವಳಿಯಲ್ಲಿ ಪತ್ರಿಕೆಯ ಪಾತ್ರ ಕುರಿತಾಗಿ ದೀರ್ಘವಾಗಿ ಚರ್ಚಿಸಿದ್ದೇವೆ. ಅದೇ ಧೋರಣೆ, ವೈಚಾರಿಕ ನಿಲುವುಗಳಿಗೇ ಬದ್ಧರಾಗಿ ಅವುಗಳನ್ನು ವಿಸ್ತೃತಗೊಳಿಸುತ್ತಾ ಅವುಗಳ ನಿಟ್ಟಿನಲ್ಲಿಯೇ 'ನಮ್ಮ ಮಾನಸ' ಮುಂದೆ ಹೆಜ್ಜೆ ಇಡುತ್ತಿದೆ.

ಸಮಾನವಾಗಿ ಜವಾಬ್ದಾರಿಗಳನ್ನು ಹಂಚಿಕೊಳ್ಳುವುದು, ಒಟ್ಟಿಗೆ ನಿರ್ಧಾರ ತೆಗೆದುಕೊಳ್ಳುವುದು ನಮಗೆ ಮುಖ್ಯವಾದ ವಿಚಾರ. ಸ್ತ್ರೀವಾದಿ ಚಳವಳಿಯ ಪ್ರಾರಂಭದಿಂದಲೂ ಈ ವಿಚಾರಗಳಿಗೆ

ಒಳಗಿನ ಪುಟಗಳಲ್ಲಿ....

ಸಾಕಷ್ಟು ಪ್ರಾಮುಖ್ಯ ನೀಡಲಾಗಿದೆ. ಹಾಗೆಯೇ ಶ್ರೇಣೀಕೃತ ವ್ಯವಸ್ಥೆಯನ್ನು ವಿರೋಧಿಸಿ ಕೆಲಸ ಮಾಡಬೇಕೆಂಬುದು ಮಹಿಳೆಯರು ಬದುಕಿನಿಂದ ಕಲಿತ ಪಾಠ. ರಾಜಕೀಯ ಪಕ್ಷಗಳ ರಚನೆಯ ತರಹ ಒಬ್ಬ ವ್ಯಕ್ತಿಯ ಅಥವಾ ಹಲವೇ ವ್ಯಕ್ತಿಗಳ ಅಧಿಕಾರಶಾಹಿತ್ವದ ಕೆಳಗೆ, ಅವರ ನಿರ್ಧಾರದ ಕೆಳಗೆ ನೂರಾರು ಜನ ಕಾರ್ಯಕರ್ತರು/ಕಾರ್ಯಕರ್ತೆಯರು ಕೆಲಸ ಮಾಡುವಂತಿರಬಾರದು. ಸಂಘಟನೆಯಲ್ಲಿ, ಚಳವಳಿಯಲ್ಲಿ ಭಾಗವಹಿಸುವ ಪ್ರತಿಯೊಬ್ಬ ಮಹಿಳೆಯೂ ಆಯಾ ಹಂತದ ಜವಾಬ್ದಾರಿ ಹಂಚಿಕೊಳ್ಳುವುದರ ಜೊತೆಗೆ ಪ್ರತಿಯೊಂದು ನಿರ್ಧಾರದ ಹಂತದಲ್ಲೂ ಸಮಾನವಾಗಿ ಭಾಗವಹಿಸಬೇಕು. ಶ್ರೇಣೀಕೃತ ವ್ಯವಸ್ಥೆಯೊಂದಿಗೆ ನಿರ್ದಿಷ್ಟ ಕೆಲಸಗಳ ಹಿಂದಿರುವ ಕೀಳರಿಮೆಯನ್ನು ಹೋಗಲಾಡಿಸಿಕೊಂಡು ಕೆಲಸ ಮಾಡುವುದು. ವೈಯಕ್ತಿಕ ನೆಲೆಯಲ್ಲಿ ಕೆಲವು ಶ್ರಮಗಳ ಹಿಂದಿರುವ ಕೀಳರಿಮೆಯ ಧೋರಣೆಯನ್ನು ಕಿತ್ತು ಹಾಕಿ ಎಲ್ಲಾ ಕೆಲಸ ಸಮಾನ ದೃಷ್ಟಿಯಿಂದ ಮಾಡುವುದು ಅಷ್ಟು ಸರಳವೇನಲ್ಲ. ಈ ಪ್ರಕ್ರಿಯೆಯ ಬಗ್ಗೆ ನಾವು ಜಾಗ್ರತರಾಗಿಯೇ ಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದೇವೆ.

ಸಣ್ಣ ಪತ್ರಿಕೆಗಳು ಎದುರಿಸುತ್ತಿರುವ ಹಲವಾರು ಆತಂಕ, ಸವಾಲುಗಳು 'ನಮ್ಮ ಮಾನಸ' ಪತ್ರಿಕೆಗೂ ಸಹ ಇವೆ. ಜಾಗತೀಕರಣದ ಈ ಹಂತದಲ್ಲಿ ಯುವಜನಾಂಗ ಗ್ಲ್ಯಾಮರ್‌ನಿಂದಾಗಿ ಕಳೆದು ಹೋಗುತ್ತಿರುವುದೇ ಹೆಚ್ಚು. ಹಣದ ಅಮಲಿನಲ್ಲಿ ಬದುಕಿನ ರಮ್ಯ (romanticized) ಜಗತ್ತನ್ನೇ ದೃಶ್ಯ ಮಾಧ್ಯಮ ನಮ್ಮ ಮುಂದೆ ಇಡುತ್ತಿದೆ. 'ಮಾನಸ'ದಂತಹ ಪತ್ರಿಕೆಗಳು ಪ್ರಕಟಿಸುವ ಮಹಿಳಾ ಸಮಸ್ಯೆಗಳನ್ನು ದೃಶ್ಯ ಮಾಧ್ಯಮದ ಹಲವಾರು ಚಾನೆಲ್ಲುಗಳು ಧಾರಾವಾಹಿಯಾಗಿಯೋ, ಜೀವನ ಕಥೆಯಾಗಿಯೋ ಅಥವಾ ಕ್ರೈಂ ಸ್ಟೋರಿಯ ವಸ್ತುವಾಗಿಯೋ ಬಿಂಬಿಸತೊಡಗಿವೆ. ದೃಶ್ಯ ಮಾಧ್ಯಮದ ರಂಜನೀಯತೆಯ ಮಿತಿಯಲ್ಲಿ ಮಹಿಳಾ ಸಮಸ್ಯೆಗಳ ಆಳವಾದ ಹರವು ಕೆಲವು ಸಲ ಕಳೆದು ಹೋಗಬಹುದು. ಅಥವಾ ಮೇಲ್ನೋಟಕ್ಕೆ ಮಹಿಳಾಪರ ಎನ್ನುವಂತಹ ವಿಚಾರಗಳು ಅಲ್ಲಿ ಮೂಡಿಯೂ ಬರಬಹುದು. ಅತಿ ರಂಜಕತೆಯ ನಿರ್ವಹಣೆಯಿಂದಾಗಿ ಮಹಿಳಾ ಸಮಸ್ಯೆಯ ಸಂಕೀರ್ಣತೆಯನ್ನು ಬಿಚ್ಚಿಡುವಲ್ಲಿ ಬಹಳಷ್ಟು ದೃಶ್ಯ ಮಾಧ್ಯಮಗಳು ಸೋಲುತ್ತಿವೆಯಾದರೂ ಇವು ಯುವ ಜನಾಂಗದ ಬದುಕನ್ನು ರೂಪಿಸುವ ಭಾಗಗಳಾಗಿವೆ. ಇದು ದೃಶ್ಯ ಮಾಧ್ಯಮದ ಕಾಲವಾದ್ದರಿಂದ ಜನಪ್ರಿಯತೆಯ ಮಾನದಂಡ ಮಹಿಳೆಯರ ಮೇಲೆ ಪ್ರಭಾವ ಬೀರುತ್ತಿದೆ. ಹೀಗೆ ಗ್ಲ್ಯಾಮರೈಸ್ಡ್ ಆದಂತಹ ವಸ್ತು ನಿರ್ವಹಣೆ ಜನಪ್ರಿಯ ಧಾಟಿಯಾದ್ದರಿಂದ ಸಮಸ್ಯೆಯ ಹರವನ್ನು ಗಂಭೀರವಾಗಿ ತೆರೆದಿಡಲು ಬಯಸುವ 'ಮಾನಸ'ದಂತಹ ಸಣ್ಣ ಪತ್ರಿಕೆಗೆ ಇವು ದೊಡ್ಡ ಸವಾಲನ್ನು ಎಸೆಯುತ್ತವೆ.

ಇಂದು ದೊಡ್ಡ ದಿನಪತ್ರಿಕೆಗಳ ಧೋರಣೆಗಳು ಕೂಡಾ ಸಣ್ಣ ಪತ್ರಿಕೆಗಳಿಗೆ ಆತಂಕ/ಸವಾಲು ಒಡ್ಡುತ್ತಿವೆ. ಇವುಗಳಲ್ಲಿ ಮಹಿಳೆಯ ಸಮಸ್ಯೆಯ ಹರವುಗಳನ್ನು ವಿಶ್ಲೇಷಿಸುವ ಕಾಲಂಗಳನ್ನು ಪರಿಚಯಿಸಲಾಗುತ್ತಿದೆ. ಇಲ್ಲಿಯೂ ಕೂಡಾ ಜನಪ್ರಿಯ ಧಾಟಿಯಲ್ಲಿಯೇ ಇಂತಹ ಸಮಸ್ಯೆಗಳ ಮೇಲೆ ಬೆಳಕು ಚಲ್ಲಲಾಗುತ್ತಿದೆ. ಭಾಷೆಯ ಸರಳೀಕರಣ, ಸಮಸ್ಯೆಗಳನ್ನು ಚಿಕ್ಕ ಕಾಲಂಗಳಲ್ಲಿ ತೆರೆದಿಡುವುದು, ಹಾಗೂ ಬರೆಯುವ ಲೇಖಕರನ್ನೆಲ್ಲ ಇಂತಹ ಪತ್ರಿಕೆಗಳಲ್ಲಿ ಜನಪ್ರಿಯ ಧಾಟಿಗೆ ಒಗ್ಗಿಸುತ್ತಿರುವುದರಿಂದ ದೊಡ್ಡ ಪತ್ರಿಕೆಗಳ ಧೋರಣೆ ಕೂಡಾ ಸಣ್ಣ ಪತ್ರಿಕೆಗಳ ಮೇಲೆ ಅಡ್ಡ ಪರಿಣಾಮ ಬೀರುತ್ತವೆ. ಜೊತೆಗೆ ಮಹಿಳೆಯ ಫಿಟ್‌ನೆಸ್, ಸೌಂದರ್ಯ, ಗಂಡಂದಿರನ್ನು ಹೇಗೆ ತೃಪ್ತಿಪಡಿಸಿ ಇಟ್ಟುಕೊಳ್ಳಬೇಕೆಂದು ರೋಚಕವಾಗಿ ವಿವರಿಸುವ ಮಹಿಳೆಯರಿಗೇ ಮೀಸಲಾದ ಕಮರ್ಶಿಯಲ್ ಪತ್ರಿಕೆಗಳು ಸಹ 'ನಮ್ಮ ಮಾನಸ'ಕ್ಕೆ ಸವಾಲುಗಳಾಗಿವೆ.

ದೇಹನಿಷ್ಠ ಪ್ರದರ್ಶಕ ಸಂಸ್ಕೃತಿ ವೈಭವೀಕೃತವಾಗುತ್ತಿರುವುದರಿಂದ ಅಂತರಂಗದ ಶಕ್ತಿ, ವ್ಯಕ್ತಿತ್ವದ ಸತ್ವಗಳು ಗೈರುಹಾಜರಾಗಿ ಪ್ರದರ್ಶನವೇ ಪ್ರಧಾನವಾಗುವುದರಿಂದ ಹೆಣ್ಣಿನ ಅಸ್ಮಿತೆಯ ಪ್ರಶ್ನೆ ಗೊಂದಲಕ್ಕೆ ಈಡಾಗಿದೆ.

ಹೀಗೆ ಹಲವಾರು ಆತಂಕ/ಸವಾಲುಗಳ ಮಧ್ಯೆ ನಮ್ಮ–ನಿಮ್ಮೆಲ್ಲರ ಧ್ವನಿಗಳು ಗಟ್ಟಿಯಾಗಬೇಕಿವೆ. ಮಹಿಳೆಯ ಸಮಸ್ಯೆಯ ಸಂಕೀರ್ಣತೆ ಜಾಗತೀಕರಣದ ಹಂತದಲ್ಲಿ ವಿಭಿನ್ನ ರೂಪದಲ್ಲಿ ವ್ಯಕ್ತವಾಗುತ್ತಿರುವುದನ್ನು ನಾವು ಗುರುತಿಸಿ ಹೋರಾಡಬೇಕಿದೆ. ಮಹಿಳೆಯ ಮೇಲಿನ ಹಿಂಸೆಯ ಕ್ರೌರ್ಯ ಬೇರೆ ಬೇರೆ ರೂಪಗಳಲ್ಲಿ ಅಭಿವ್ಯಕ್ತಿಗೊಳ್ಳುತ್ತಿರುವುದನ್ನು ಕೂಡಾ ಗುರುತಿಸಿ ಒಟ್ಟಾಗಿ ಹೋರಾಡಬೇಕಿದೆ. ಈ ಹಂತದಲ್ಲಿ 'ನಮ್ಮ ಮಾನಸ'ದಂತಹ ಪತ್ರಿಕೆಯ ಅಸ್ತಿತ್ವ ಚಾರಿತ್ರಿಕವಾಗಿ ಮುಖ್ಯ ಎಂದು ನಾವು ಭಾವಿಸುತ್ತೇವೆ. ಚಳವಳಿಯ ಭಾಗವಾಗಿ 'ನಮ್ಮ ಮಾನಸ'ವನ್ನು ಬೆಳೆಸುವ, ಉಳಿಸುವ ಜವಾಬ್ದಾರಿ ನಿಮ್ಮದೂ ಆಗಿರುವುದರಿಂದ ನೀವು ಸಹ ನಿರಂತರವಾಗಿ ನಮಗೆ ಸಹಕಾರ–ಸಲಹೆ–ಪ್ರೋತ್ಸಾಹ ನೀಡುತ್ತೀರೆಂದು ನಾವು ಆಶಿಸುತ್ತೇವೆ.

'ನಮ್ಮ ಮಾನಸ' ಓದುಗರೆಲ್ಲರಿಗೂ ಹೊಸ ವರ್ಷದ ಶುಭಾಶಯ ಕೋರುತ್ತೇವೆ. ●

ಓದುಗರಲ್ಲಿ ಮನವಿ

ಜಾಗತೀಕರಣದ ಇಂದಿನ ಸಂದರ್ಭದಲ್ಲಿ 'ನಮ್ಮ ಮಾನಸ'ದಂತಹ ಸಣ್ಣ ಪತ್ರಿಕೆಗೆ ಓದುಗರೇ ಜೀವಾಳ. ಪತ್ರಿಕೆಗೆ ಚಂದಾದಾರರಾಗುವ ಮೂಲಕ ಹಾಗೂ ಈ ವರ್ಷದ ಚಂದಾ ನವೀಕರಿಸುವ ಮೂಲಕ ಪತ್ರಿಕೆಯ ಪ್ರಕಟಣೆಗೆ ಸಹಕಾರ ನೀಡಿ.



ಮುಸ್ಲಿಂ ಮಹಿಳೆಯರ ಸಮಸ್ಯೆ ಹಾಗೂ ಪುರುಷ ಪ್ರಧಾನ ಮೌಲ್ಯಗಳು

■ ತಸ್ನೀಮ್

ಸಾಮಾನ್ಯವಾಗಿ ಸಾಮಾಜಿಕ ಮೌಲ್ಯಗಳು, ನಂಬಿಕೆ, ಕಂದಾಚಾರ, ಧಾರ್ಮಿಕ ಮೌಲ್ಯಗಳು, ಮಹಿಳೆಯರ ಜೀವನದ ಮೇಲೆ ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಇದು ಎಲ್ಲ ಧರ್ಮಕ್ಕೆ ಸೇರಿದ ಮಹಿಳೆಯರಿಗೂ ಅನ್ವಯವಾಗುತ್ತದೆ. ಮುಸ್ಲಿಂ ಮಹಿಳೆ ತನ್ನ ಸ್ವಂತ ಇಚ್ಛೆಯಿಂದ ತನ್ನ ಗಂಡನಿಂದ ಸಂಬಂಧವನ್ನು ಕಡಿದುಕೊಂಡರೆ ಅದನ್ನು **ಕುಲಾ** ಎಂದು ಕರೆಯುತ್ತಾರೆ. ಇಂತಹ ಸಂದರ್ಭದಲ್ಲಿ ಆಕೆ ತನ್ನ ಗಂಡನಿಂದ ಪರಿಹಾರ ಹಣವನ್ನು ಅಥವಾ ಜೀವನಾಂಶವನ್ನು ಪಡೆಯಲು ಸಾಧ್ಯವಿಲ್ಲ. ಆದರೆ ಬಹಳಷ್ಟು ಬಾರಿ ಗಂಡ ಹೆಂಡತಿಗೆ ಇಷ್ಟವಿಲ್ಲದಿದ್ದರೂ ಆಕೆಯ ತಪ್ಪು ಇಲ್ಲದಿದ್ದರೂ ತನ್ನ ವೈಯಕ್ತಿಕ ಆಕಾಂಕ್ಷೆಗಾಗಿ ಹೆಂಡತಿಗೆ ತಲಾಖ್ ನೀಡಿ, ಆಕೆಯನ್ನು ತ್ಯಜಿಸುತ್ತಾನೆ.

ಹೆಣ್ಣು ಮಕ್ಕಳನ್ನು ಚಿಕ್ಕವಯಸ್ಸಿನಲ್ಲಿ ಮದುವೆ ಮಾಡಿಕೊಡುವ ತಂದೆ ತಾಯಿಗಳು ಅವಳ ವಿದ್ಯಾಭ್ಯಾಸವನ್ನು ಅರ್ಧದಲ್ಲೆ ನಿಲ್ಲಿಸುತ್ತಾರೆ. ಆಕೆ ಹತ್ತು-ಹದಿನೈದು ವರ್ಷಗಳ ಕಾಲ ಗಂಡನೊಂದಿಗೆ ಸಂಸಾರ ಮಾಡಿ ಮಕ್ಕಳನ್ನು ಹೆತ್ತು ಸಂಸಾರದ ಜಂಜಡದಲ್ಲಿ ಮುಳುಗಿ ಹೋಗುತ್ತಾಳೆ. ಈ ಜಂಜಡದಲ್ಲಿ ಆಕೆ ತನ್ನ ಆಸೆ, ಆಕಾಂಕ್ಷೆ ಎಲ್ಲವನ್ನೂ ಹತ್ತಿಕ್ಕುವುದರ ಜೊತೆಗೆ ತನ್ನ ಸ್ವಂತ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ವಿಫಲಳಾಗುತ್ತಾಳೆ. ದೈಹಿಕವಾಗಿ, ಮಾನಸಿಕವಾಗಿ ಸಂಪೂರ್ಣವಾಗಿ ಜರ್ಜರಿತಳಾಗುತ್ತಾಳೆ. ಇಂತಹ ಮಹಿಳೆಗೆ ಗಂಡ ದಿಢೀರಾಗಿ ತಲಾಖ್ ಕೊಟ್ಟರೆ ಆಕೆಯ ಸ್ಥಿತಿ ಏನಾಗಬಹುದು? ಅವಳ ಮಕ್ಕಳಿಗೆ ಜೀವನಾಂಶ ದೊರೆತರೂ ಆಕೆಯ ಪಾಡೇನು? ಆಕೆ ಪುನಃ ತಂದೆ-ತಾಯಿಯರ ಆಶ್ರಯಕ್ಕೆ ಹೋಗಲು ಸಾಧ್ಯವೆ? ಬಡವರು ಹಾಗೂ ಮಧ್ಯಮ ವರ್ಗದವರು ಸಾಕಷ್ಟು ಸಾಲ ಸೋಲ ಮಾಡಿ ಮದುವೆ ಮಾಡಿರುತ್ತಾರೆ. ಇಂತಹ ಮದುವೆಯ ಪ್ರತಿಫಲ ತಲಾಖ್. ಇಸ್ಲಾಂ ಧರ್ಮದ ಹೇಳಿಕೆಯಲ್ಲಿ ಮದುವೆಯನ್ನು ತುಂಬಾ ಸರಳವಾದ ವಿಧಾನದಲ್ಲಿ ಮಾಡಿದರೆ, ಆ ದಂಪತಿಗಳ ಜೀವನದಲ್ಲಿ ದೇವರ ಕೃಪೆ ಮೂಡಿಬರುವುದು ಸತ್ಯ ಹಾಗೂ ಶಾಶ್ವತ ಎಂದು ಹೇಳಲಾಗಿದೆ. ಇಂತಹ ವಿಷಯಗಳನ್ನು ಸಾಕಷ್ಟು ತಿಳಿದುಕೊಂಡೂ ಧರ್ಮಾಧಿಕಾರಿಗಳು ದೊಡ್ಡ ಕಲ್ಯಾಣ ಮಂಟಪಗಳನ್ನು ಉದ್ಘಾಟನೆ ಮಾಡಿ, ಅತಿ ಶ್ರೀಮಂತರ ಮಕ್ಕಳ ಮದುವೆಗಳಲ್ಲಿ ಪಾಲ್ಗೊಂಡು ಅವರನ್ನು ಆಶೀರ್ವದಿಸಿ ಬರುವುದು ದಿನನಿತ್ಯದ ಸಂಗತಿಯಾಗಿದೆ. ಬಡ ಯುವಜನತೆ ಇಂತಹ ಕನಸುಗಳನ್ನು ಕಾಣುತ್ತಾ ಆಡಂಬರದ ಮದುವೆಗಾಗಿ ತಹತಹಿಸುತ್ತಾರೆ. ಇಂತಹ ಕನಸುಗಳ ಈಡೇರಿಕೆಗಾಗಿ ಬಡ ಹೆಣ್ಣುಮಕ್ಕಳನ್ನು ಬಲಿಪಶು ಮಾಡುತ್ತಾರೆ. ಹೆಣ್ಣು ಹೆತ್ತವರನ್ನು ಪೀಡಿಸುತ್ತಾರೆ. ಮುಸ್ಲಿಂರಲ್ಲಿ ತಲಾಖ್‌ಗೆ ಸಂಬಂಧಪಟ್ಟ ಹಾಗೆ ವೈವಾಹಿಕ ತೊಂದರೆಗೊಳಗಾದ ಹೆಣ್ಣುಮಕ್ಕಳಿಗೆ ನೆರವು ನೀಡಲು ಸಾಕಷ್ಟು ಸಂಘ ಸಂಸ್ಥೆಗಳಿದ್ದರೂ ಹೆಣ್ಣುಮಕ್ಕಳು ಬೇರೆಯದೇ ಆದ ಸಮಸ್ಯೆಯನ್ನು ಎದುರಿಸುತ್ತಾರೆ. ಶಬಾನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಮೆಟ್ಟಿಲು ಹತ್ತುವ ಧೈರ್ಯ, ಆತ್ಮಸ್ಥೈರ್ಯವನ್ನು ಆಕೆ ತೋರಿದ್ದಾರೆ. ಆದರೆ ಅವರು ಕ್ರಮೇಣ ಮುಜುಗರದ ಸ್ಥಿತಿಗೆ ಸಿಕ್ಕಿ ಹಾಕಿಕೊಳ್ಳುತ್ತಾರೆ. ಧರ್ಮ ಮತ್ತು ಧರ್ಮದ ನಿಯಮಗಳನ್ನು ರಕ್ಷಿಸಲು ಹಾಗೂ ಕಾಪಾಡಲು ಪ್ರಾರಂಭಿಸಲಾದ ಸಂಘ-ಸಂಸ್ಥೆಗಳು ತಾವೇ ನೊಂದ ಮಹಿಳೆಯರ ಮನೆಯ ಬಾಗಿಲಿಗೆ ಹೋಗಬೇಕಾಗುತ್ತದೆ. ಹೈಕೋರ್ಟು ಹಾಗೂ ಸುಪ್ರೀಂ ಕೋರ್ಟ್‌ನ ಮೆಟ್ಟಿಲುಗಳನ್ನು ಹತ್ತುವುದರಲ್ಲಿ ಮಹಿಳೆಯರ ಜೀವನದ ಅಮೂಲ್ಯವಾದ ಅವಧಿಯೇ ಕಳೆದು ಹೋಗುತ್ತದೆ. ಅವರು ಜೀವನದಲ್ಲಿ ಏನಾದರೂ ಸಾಧನೆ ಮಾಡಲು ಸಾಧ್ಯವಾಗುತ್ತದೆಯೇ ಎಂಬ ಪ್ರಶ್ನೆ ನನ್ನನ್ನು ಸದಾ ಕಾಡುತ್ತದೆ. ಸಾಧನೆ ಮಾಡಬೇಕೆನ್ನುವ ಆಯ್ಕೆಯ ಪ್ರಶ್ನೆ ಅವಳ ಬದುಕಿನಲ್ಲಿ ಎದುರಾಗಲು ಸಾಧ್ಯವೆ?

ಮುಸ್ಲಿಂ ಮಹಿಳೆಯರಿಗೆ ಬೇಕಾಗಿರುವುದು ನ್ಯಾಯವೇ ಹೊರತು ಸಹಾಯವಲ್ಲ. ಕೈ ಹಿಡಿದು ದೂರ ನಡೆಸುತ್ತೇವೆಂದು ನಂಬಿಸಿ, ನಡುದಾರಿಯಲ್ಲಿಯೆ ಕೈಬಿಟ್ಟು ಅವರನ್ನು ತುಳಿಯಲಾಗುತ್ತದೆ. ಇದು

ತೀರಾ ಸಹಜವೆಂಬಂತೆ ಭಾವಿಸಲಾಗುತ್ತಿದೆ. ಮುಸ್ಲಿಂ ಮಹಿಳೆಯರ ದುರ್ಗತಿ ಎಲ್ಲರಿಗೂ ತಿಳಿದ ವಿಷಯವಾಗಿದ್ದರೂ, ವಿವಿಧ ಮುಖದ ಸಮಸ್ಯೆಗಳ ಸಂಕೀರ್ಣತೆಯನ್ನು ಅವರೊಂದಿಗಿನ ಮುಖಾಮುಖಿ ಸಂಭಾಷಣೆಯಿಂದ ಮಾತ್ರ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಇಸ್ಲಾಂ ಧರ್ಮದಲ್ಲಿ ಆಕೆಗೆ ಸಾಕಷ್ಟು ಸ್ವಾತಂತ್ರ್ಯವನ್ನು ನೀಡಲಾಗಿದ್ದರೂ ಆಕೆ ಏನೂ ಇಲ್ಲದ ದುರ್ಗತಿಗೆ ಈಡಾಗಿದ್ದಾಳೆ. ಅವಳ ದುಸ್ಥಿತಿಯನ್ನು, ಅವಳ ಹಕ್ಕು ಬಾಧ್ಯತೆಗಳನ್ನು ಗುರುತಿಸುವುದಕ್ಕೆ ಅವಳ ಸಮಸ್ಯೆಗಳನ್ನು ಸರಿಪಡಿಸುವುದಕ್ಕೆ, ಆಕೆಯನ್ನು ಇನ್ನಷ್ಟು ಶಕ್ತಗೊಳಿಸುವುದಕ್ಕೆ ಹಲವಾರು ವಿಚಾರಗಳಿವೆ. ಧರ್ಮದ ವಲಯದಲ್ಲಿ ಇವುಗಳು ಚರ್ಚೆಯಾಗಬೇಕಾದ ಅವಶ್ಯಕತೆ ಹಾಗೂ ಅನಿವಾರ್ಯ ಎರಡೂ ಇದೆ.

ಧರ್ಮ ಮತ್ತು ರಾಜಕಾರಣದ ಮಧ್ಯೆ ಪರದಾಡುತ್ತಿರುವ ಮುಸ್ಲಿಂ ಮಹಿಳೆಯರ ಬಗ್ಗೆ ನನ್ನ ವಿಚಾರ ಹಾಗೂ ಆಲೋಚನೆಗಳನ್ನು ಹಂಚಿಕೊಳ್ಳುವ ಒಂದು ಸಣ್ಣ ಪ್ರಯತ್ನವೇ ಈ ಪುಟ್ಟ ಲೇಖನ. ಅಲ್ಪಸಂಖ್ಯಾತರಾಗಿರುವ ಮುಸ್ಲಿಂ ಜನಾಂಗ ಅದರಲ್ಲೂ ವಿಶೇಷವಾಗಿ ಮಹಿಳೆಯರು ಹಲವಾರು ರೀತಿಯ ಸಮಸ್ಯೆಗಳಿಂದ ಜರ್ಜರಿತರಾಗಿ ನರಳುತ್ತಿದ್ದಾರೆ. ವೈಯಕ್ತಿಕ ಸಮಸ್ಯೆಗಳು ಎದುರಾದಾಗ ಇವರು ಮೊದಲು ಸಂಪರ್ಕಿಸುವುದು ಮುಸ್ಲಿಂ ಮುಖಂಡರನ್ನು. ಧಾರ್ಮಿಕ ಮುಖಂಡರು ನೀಡಿದ ತೀರ್ಪೇ ಅಂತಿಮವಾದುದು. ತಲಾಖ್ ನೀಡಿದ ಮುಸ್ಲಿಂ ಪುರುಷನು ಹೆಂಡತಿಗೆ ಜೀವನಾಂಶ ನೀಡಬೇಕಾಗಿಲ್ಲವೆಂದು ಹಾಗೂ ಅದು ಧರ್ಮದ ವಿರುದ್ಧವೆಂದು ಧಾರ್ಮಿಕ ಮುಖಂಡರು ವಾದಿಸುತ್ತಾರೆ. ಮಕ್ಕಳಿಗೆ ಮಾತ್ರ ಜೀವನಾಂಶವನ್ನು ಕಡ್ಡಾಯವಾಗಿ ನೀಡಬೇಕೆಂದು ಅವರು ವಾದಿಸುತ್ತಾರೆ. ಮುಸ್ಲಿಂ ಮಹಿಳೆಯರಿಗೆ ದೇವರು ವೈಯಕ್ತಿಕವಾದ ನಂಬಿಕೆಯ ವಿಚಾರ. ದೇವರನ್ನು ಸ್ಪಂದಿಸುವುದಕ್ಕೆ ಯಾವ ಮಹಾಗುರುಗಳ ಆಶ್ರಯವು ಬೇಕಾಗಿಲ್ಲ. ತನ್ನ ಸಾಮಾನ್ಯ ಜ್ಞಾನದಿಂದ ಆಕೆ ತನ್ನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುತ್ತಾಳೆ. ದೇವರನ್ನು ನೇರವಾಗಿ ಸ್ಪಂದಿಸುವ ಮಾತು ಖುರ್–ಆನಿ–ಷರೀಫ್‌ನಲ್ಲೂ ಸಹ ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಖುರ್–ಆನಿ–ಷರೀಫ್ ನಿಜಕ್ಕೂ ಬರೇ ಒಂದು ದೇವರ ನುಡಿ, ಮಾತು ಅಲ್ಲ. ಈ ಗ್ರಂಥವು ಜೀವನ ನಡೆಸುವ ವಿಧಾನ, ರೀತಿ, ಜೀವನದ ರಹಸ್ಯ ಹಾಗೂ ಪರಿಹಾರಗಳನ್ನು ಒಳಗೊಂಡಿದೆ. ಜೀವನದ ಬಗ್ಗೆ ಮೂಲಭೂತವಾಗಿ ಚಿಂತಿಸಲಾಗಿದೆ ಹಾಗೂ ವ್ಯವಸ್ಥೆ ಹೇಗಿರಬೇಕೆಂಬುದನ್ನು ವಿಸ್ತಾರವಾಗಿ ಪರಿಶೀಲಿಸಲಾಗಿದೆ. ಈ ಪುರುಷಪ್ರಧಾನ ಸಮಾಜದಲ್ಲಿ ಮಹಿಳೆಗೆ ತಲಾಖ್ ಕೊಟ್ಟರೆ ಅವಳ ಜೀವನ ಹೇಗೆ ಸಾಗಬೇಕು, ಅವಳಿಗೆ ತಲಾಖ್ ಯಾವ ಸಂದರ್ಭದಲ್ಲಿ ಯಾವ ರೀತಿಯಲ್ಲಿ ಕೊಡಬೇಕು ಇದು ಮುಖ್ಯವಾದ ಪ್ರಶ್ನೆ. ಪುರುಷನ ದಬ್ಬಾಳಿಕೆಯಿಂದ ನಡೆದುಕೊಂಡು ಬಂದಿದೆ ಎಂಬುದಕ್ಕೆ ಷಂನಿಯಾಳ ನಿದರ್ಶನ ಸಾಕು. ಷಂನಿಯ ಎರಡು ಮಕ್ಕಳ ತಾಯಿ. ಆಕೆಯ ಗಂಡ ಮದುವೆಗೆ ಮುಂಚೆ ಬೇರೆ ಮಹಿಳೆಯೊಬ್ಬಳನ್ನು ಪ್ರೀತಿಸುತ್ತಿದ್ದ. ಮದುವೆಯ ನಂತರ ಆಕೆಗೆ ಎರಡು ಮಕ್ಕಳು ಆದವು. ಎರಡು ಮಕ್ಕಳು ಆದ ನಂತರ ಆಕೆಯ ಗಂಡ ಫ್ಯಾಮಿಲಿ ಪ್ಲಾನಿಂಗ್ ಆಪರೇಷನ್ ಮಾಡಿಸಿಕೊಂಡ. ಹೇಳಬೇಕೆಂದರೆ ಇದು ಧರ್ಮದ ವಿರುದ್ಧ. ಆದರೆ ಮಕ್ಕಳನ್ನು ಸಾಕುವ ಸಾಮರ್ಥ್ಯ ಇರದಿದ್ದರೂ ಮಕ್ಕಳನ್ನು ಹೆರಲೇಬೇಕೆಂದು ಧರ್ಮದಲ್ಲಿ ಹೇಳಿಲ್ಲ. ಷಂನಿಯಾಳ ಗಂಡ ಒಂದು ದಿನ ಒಂದು ಕ್ಷುಲ್ಲಕ ಕಾರಣ ಹುಡುಕಿದ. ಆಕೆ ಹೆಚ್ಚು ಹೆಚ್ಚು ಅಡಿಗೆ ಮಾಡಿ ದುಂದುವೆಚ್ಚ ಮಾಡುತ್ತಾಳೆ ಎಂಬ ಕಾರಣದಿಂದ ಒಂದೇ ಬಾರಿ ತಲಾಖ್ ಕೂಗಿ, ಮಸೀದಿಯಲ್ಲಿ ತಕ್ಷಣವೇ ಬರೆಸಿ ತರಾತುರಿಯಲ್ಲಿ ಆಕೆಯನ್ನು ತವರು ಮನೆಗೆ ಕಳಿಸಲಾಯಿತು. ಅವರ್ಯಾರೂ ಆಕೆಯ ಮುಂದಿನ ಜೀವನ, ಭವಿಷ್ಯ ಏನು ಎಂಬುದನ್ನು ಯೋಚಿಸಲಿಲ್ಲ, ಯಾವುದೇ ರೀತಿಯ ಕನಿಕರವೂ ಇಲ್ಲದೆ, ಆಕೆಯನ್ನು ಮನೆಯಿಂದ ಹೊರ ಕಳುಹಿಸಲಾಯಿತು.



ಫಿರ್ದೂಳ ಗಂಡ ಸರ್ಕಾರಿ ನೌಕರ. ತನ್ನ ಹೆಂಡತಿಗೆ ಇಲ್ಲದಿರುವ ಒಂದು ಖಾಯಿಲೆಯನ್ನು ಹುಡುಕಿ, ಅವಳಿಗೆ ವಾಸಿಯಾಗದ ಖಾಯಿಲೆಯಿದೆಯೆಂದು ಪ್ರಚಾರ ಮಾಡುತ್ತಿದ್ದ. ತನ್ನ ಮಕ್ಕಳನ್ನು ಆತ ಸರಿಯಾಗಿ ಓದಿಸಲಿಲ್ಲ. ಆತನಿಗೆ ಇನ್ನೊಬ್ಬ ಮಹಿಳೆಯೊಂದಿಗೆ ಸಂಬಂಧ ವಿತ್ತು. ಈ ಕಾರಣಕ್ಕೆ ಆತ ಹೆಂಡತಿ ಮಕ್ಕಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ಕುಟುಂಬದ ನೆಮ್ಮದಿಯನ್ನು ಬಲಿ ತೆಗೆದುಕೊಂಡ. ಗಂಡಸರಾಗಲಿ ಅಥವಾ ಹೆಂಗಸರಾಗಲಿ ಈ ರೀತಿಯ ವಿವಾಹಬಾಹಿರ ಸಂಬಂಧವನ್ನು ಹೊಂದಿದ್ದರೆ ಅದನ್ನು ಜಿನ್ನಾ ಎಂದು ಕರೆಯುತ್ತಾರೆ. ಇಂತಹ ಸಂಬಂಧವನ್ನು ಹೊಂದಿರುವ ಎಷ್ಟೋ ಪುರುಷರು ಕೌಟುಂಬಿಕ ನೆಮ್ಮದಿಯನ್ನು ಕೆಡಿಸಿ, ಮಕ್ಕಳ ಭವಿಷ್ಯಕ್ಕೂ ಕಲ್ಲುಹಾಕಿ, ಧರ್ಮದ ಚೌಕಟ್ಟಿನಲ್ಲಿ ಯಾವ ಶಿಕ್ಷೆಗೂ ಒಳಪಡದೆ ಹಾಯಾಗಿ ಜೀವನವನ್ನು ಮಾಡುತ್ತಿದ್ದಾರೆ. ಅವರ ಹೆಂಡತಿಯರು ಜೀವನ ಪರ್ಯಂತ ಮಕ್ಕಳಿಗೋಸ್ಕರ ದುಡಿದು ದುಡಿದು ಜೀವನ ಸಾಗಿಸಿ, ಅಂತ್ಯ ಕಂಡವರ ಉದಾಹರಣೆಗಳೂ ನಮ್ಮ ಮುಂದಿವೆ. ಆದರೆ ಧಾರ್ಮಿಕ ಮುಖಂಡರು ಇಂತಹ ಹೆಣ್ಣು ಮಕ್ಕಳಿಗೆ ತಾಳ್ಮೆಯಿಂದ ಜೀವನ ನಡೆಸಿ ಎಂಬ ಸಲಹೆಯನ್ನು ನೀಡುತ್ತಾರೆ. ತಲಾಖ್ ನೀಡಿದ ನಂತರ ಜೀವನಾಂಶ ಕೇಳುವ ಮಹಿಳೆಯರನ್ನು ಸಾಕಷ್ಟು ಮುಜುಗರಕ್ಕೆ ಒಳಪಡಿಸಲಾಗುತ್ತದೆ. ತಲ್ಲಾಖ್ ನಂತರ ಗಂಡ ಹೆಂಡತಿಯರ ಮಧ್ಯೆ ಯಾವುದೇ ಸಂಪರ್ಕವಿಲ್ಲದಿರುವುದರಿಂದ ಹೆಂಡತಿಗೆ ಜೀವನಾಂಶ ಕೊಡುವ ಪದ್ಧತಿ ಸಹ ಇಲ್ಲ. ಆದರೆ ಅವಳು ನಿರ್ಗತಿಕಳಾಗಿದ್ದರೆ, ಆಕೆಗೆ ಕೆಲಸವಿಲ್ಲದಿದ್ದರೆ, ಬದುಕಲು ಬೇರೆ ದಾರಿ ಇಲ್ಲದಿದ್ದರೆ, ಆಕೆಯ 'ತಪ್ಪು' ಇಲ್ಲದಿದ್ದಾಗ ಆಕೆಗೆ ಜೀವನಾಂಶ ನೀಡುವುದರಲ್ಲಿ ತಪ್ಪೇನಿದೆ ಎಂಬುದು ನನ್ನ ಅಭಿಪ್ರಾಯ.

ನಮ್ಮ ದೇಶ ಬಹುಮುಖಿ ಸಂಸ್ಕೃತಿಯನ್ನು ಹೊಂದಿದ ದೇಶ. ಇಂತಹ ಸಂದರ್ಭದಲ್ಲಿ ಲ್ಯಾಂಡ್ ಆಫ್ ದ ಲಾ ಪ್ರಕಾರ ಜೀವನ ನಡೆಸುವುದು ಪುರುಷರಿಗೂ ಹಾಗೂ ಮಹಿಳೆಯರಿಗೂ ಹೆಚ್ಚು ಆರೋಗ್ಯಪೂರ್ಣವಾಗಿದೆ.

ಮುಸ್ಲಿಂ ಪುರುಷರು ತಮಗೆ ಅನುಕೂಲವಾಗುವ ಸಂದರ್ಭದಲ್ಲಿ ಎಲ್ಲ ನಾಗರೀಕರಿಗೆ ಅನ್ವಯವಾಗುವ ಕಾನೂನಿಗೆ ಬದ್ಧರಾಗುತ್ತಾರೆ. ಆದರೆ ಅದೇ ಮಹಿಳೆಯರ ವಿಚಾರ ಬಂದಾಗ ಮಾತ್ರ ವೈಯಕ್ತಿಕ ಕಾನೂನಿಗೆ ಹೆಚ್ಚು ಒತ್ತು ನೀಡುತ್ತಾರೆ. ಜೀವನಾಂಶದ ಹಾಗೂ ತಲಾಖ್ ವಿಚಾರ ಬಂದಾಗ ಧಾರ್ಮಿಕ ಅಭಿಪ್ರಾಯಗಳಿಗೆ ಹೆಚ್ಚು ಮನ್ನಣೆ ನೀಡುತ್ತಾರೆ. ಇಂತಹ ಪುರುಷ ಪ್ರಧಾನ ಧೋರಣೆ ಬಹಳಷ್ಟು ಹೆಣ್ಣುಮಕ್ಕಳನ್ನು ಅಮಾಯಕರನ್ನಾಗಿಸುತ್ತದೆ. ಇಸ್ಲಾಂ ಧರ್ಮ ಮಹಿಳೆಯರನ್ನು ಬಲಿಪಶುಗಳನ್ನಾಗಿ ಮಾಡದೆ ಆಕೆಯ ಆತ್ಮಶಕ್ತಿಯನ್ನು ಬಲಪಡಿಸುವ ಅಂಶಗಳನ್ನು ಹೊಂದಿದೆ ಎಂಬುದು ನನ್ನ ಗಾಢ ನಂಬಿಕೆ.

ತಲಾಖ್ ಹಿನ್ನೆಲೆಯಲ್ಲಿ ಮಹಿಳೆಯರು ಹೊಸ ಹೊಸ ಬಗೆಯ ಹಿಂಸೆಗೆ ಒಳಗಾಗುತ್ತಿದ್ದಾರೆ. ಇದು ಮಹಿಳೆಯರ ಬದುಕನ್ನು ಇನ್ನಷ್ಟು ಅಸಹನೀಯಗೊಳಿಸುತ್ತದೆ. ತಲಾಖ್‌ಅನ್ನು ಬೇಕಾಬಿಟ್ಟಿಯಾಗಿ ನೀಡಲು ಸಾಧ್ಯವಿಲ್ಲ. ಕೇವಲ ಮೂರು ಸಾರಿ ಕೂಗಿ ತಲಾಖ್ ಕೊಡುವುದನ್ನು ಸಹ ಖಂಡಿಸಲಾಗುತ್ತದೆ. ಮುಸ್ಲಿಂ ಮಹಿಳೆಯರು ಸಹ ಕುಲಾ ತೆಗೆದುಕೊಳ್ಳಬಹುದು. ಆದರೆ ಆಗ ಆಕೆ ಮೆಹರ್ ಹಣಕ್ಕೆ ಅರ್ಹಳಾಗುವುದಿಲ್ಲ. ಆದರೆ ಗಂಡ ತಲಾಖ್ ನೀಡಿದಾಗ ಆತ ಮೆಹರ್ ಹಣವನ್ನು ಕಡ್ಡಾಯವಾಗಿ ವಾಪಸ್ ಕೊಡಬೇಕಾಗುತ್ತದೆ. ಮಕ್ಕಳು ಇರುವ ಕಾರಣಕ್ಕೆ ಜೀವನಾಂಶವನ್ನು ಕೊಡುವ ಜವಾಬ್ದಾರಿ ಅವನದಾಗುತ್ತದೆ.

ಸಂಬಂಧ ಕಳಚಿ ಹೋದ ಪಕ್ಷದಲ್ಲಿ ಮಹಿಳೆ ಜೀವನಾಂಶವನ್ನು ಪಡೆಯಬೇಕೆ ಎಂಬುದು ಮುಖ್ಯ ಪ್ರಶ್ನೆಯಾಗಿದೆ. ಆಕೆಯ ವಿಶ್ವಾಸ ಗಟ್ಟಿಗೊಳಿಸುವ, ಆಕೆಯ ಸ್ವತಂತ್ರ ಬದುಕಿನ ಹರವನ್ನು ವಿಸ್ತಾರ ಗೊಳಿಸುವ ಪ್ರಯತ್ನಗಳಿಗೆ ಜೀವನಾಂಶ ಅಡ್ಡಿಯಾಗಬಹುದು. ಅವಳು ತನ್ನ ಸಮಸ್ಯೆಗಳೊಡನೆ ಹೋರಾಡುತ್ತಲೇ ತನ್ನ ಅಂತರಂಗದ ಸಾಮರ್ಥ್ಯಗಳನ್ನು, ತನ್ನ ಬದುಕಿನ ನೆಲೆಗಳನ್ನು ಗುರುತಿಸಿಕೊಳ್ಳಲು ಒಂದು ಅವಕಾಶ ದೊರೆಯುತ್ತದೆ. ಇಸ್ಲಾಂ ಧರ್ಮದಲ್ಲಿ ಮಹಿಳೆಯರ ಬದುಕಿಗೆ ಪೂರಕವಾಗಿರುವ ಇಂತಹ ಹಲವು ಸಂಗತಿಗಳಿವೆ. ಆದರೆ ಪುರುಷ ಪ್ರಧಾನ ವ್ಯವಸ್ಥೆಗೆ ಬಲಿಪಶುವಾಗಿ ನಿರ್ಗತಿಕಗಳಾಗಿದ್ದಲ್ಲಿ ಅವಳಿಗೆ ಜೀವನಾಂಶ ಕೊಡುವುದರಲ್ಲಿ ತಪ್ಪಿಲ್ಲ. ಇದನ್ನು ಅಳವಡಿಸಿಕೊಳ್ಳಲು 'ಪರ್ಸನಲ್ ಲಾ'ನಲ್ಲಿ ತಿದ್ದುಪಡಿ ಮಾಡುವ ಅವಶ್ಯಕತೆಯು ಇರುವುದಿಲ್ಲ. ಅಸಹಾಯಕಳಾದ ಮಹಿಳೆಗೆ ಕಾನೂನಿನ್ವಯ ಜೀವನಾಂಶ ನೀಡುವುದರಲ್ಲಿ ಮಾನವೀಯ ಅಂಶವನ್ನು ಹುಡುಕಬೇಕು. ಶಬಾನಾ ಪರವಾಗಿ ನೀಡಿರುವ ಸುಪ್ರೀಂ ಕೋರ್ಟ್ ತೀರ್ಪು ಆಕೆಯ ಬದುಕಿನ ಹಾಗೂ ಇತರ ಮಹಿಳೆಯರ ಹಕ್ಕುಬಾಧ್ಯತೆಗಳನ್ನು ಕಾಪಾಡುವ ನಿಟ್ಟಿನಲ್ಲಿ ಸಹಾಯ ವಾಗಿದ್ದರೆ, ಅದನ್ನು ಮಹಿಳೆಯರ ಹಕ್ಕನ್ನು ಕಾಪಾಡುವ ಹಿನ್ನಲೆಯಲ್ಲಿ ನೋಡಬೇಕು. ಧರ್ಮದ ಕಾನೂನು ಹಾಗೂ ನೆಲದ ಕಾನೂನುಗಳ ನಡುವೆ ಘರ್ಷಣೆಯ ಅವಶ್ಯಕತೆ ಇಲ್ಲ. ಧಾರ್ಮಿಕ ಮುಖಂಡರು ಕೆಲವೊಂದು ವಿಷಯಗಳಿಗೆ, ವಿಶೇಷವಾಗಿ ಮಹಿಳೆಯರಿಗೆ ಸಂಬಂಧ ಪಟ್ಟ ವಿಷಯಗಳಿಗೆ ವೈಯಕ್ತಿಕ ಕಾನೂನನ್ನು ಅನ್ವಯಿಸಿ ವೈಯಕ್ತಿಕ ಕಾನೂನು ಕಡ್ಡಾಯವಾಗಬೇಕೆಂದು ಪ್ರಚಾರ ಮಾಡುತ್ತಾರೆ. ಆದರೆ ಮಹಿಳೆಯ ಸ್ಥಿತಿಗತಿಯನ್ನು ಪರಿಶೀಲಿಸಿದಾಗ, ನಮ್ಮ ಸಂವಿಧಾನದಲ್ಲಿ ನೀಡಲಾದ ಹಕ್ಕು ಬಾಧ್ಯತೆಗಳನ್ನು ಗಮನಿಸಿದಾಗ ವೈಯಕ್ತಿಕ ಕಾನೂನಿನ ತಿದ್ದುಪಡಿಯ ಅವಶ್ಯಕತೆಯು ಇಲ್ಲವೆಂಬುದು ಸ್ಪಷ್ಟ ವಾಗುತ್ತದೆ. ಅದನ್ನು ಅದರ ಪಾಡಿಗೆ ಬಿಟ್ಟು ಬಿಡಬೇಕು. ಆಕೆಗೆ ಒಬ್ಬ ನಾಗರೀಕಳಾಗಿ ಅವಳಿಗೆ ದೊರಕಬೇಕಾದ ಹಕ್ಕು ಬಾಧ್ಯತೆಗಳು ಸಿಗಬೇಕಾಗುತ್ತದೆ.

ಸತ್ಯದ ಬಹುಮುಖವೆಂದರೆ ಒಂದು ಸನ್ನಿವೇಶದ ಹಲವಾರು ಸಾಧ್ಯತೆಗಳು. ಇಲ್ಲಿ ಧಾರ್ಮಿಕ ಮುಖಂಡರ ಹಠ, ವೋಟ್ ಬ್ಯಾಂಕ್ ರಾಜಕೀಯ ಹಿನ್ನೆಲೆಯಲ್ಲಿ ಮಹಿಳೆಯರ ಸಮಸ್ಯೆಗಳು ಸಂಕೀರ್ಣ ಗೊಳ್ಳುತ್ತಿವೆ. ಮುಸ್ಲಿಂ ಮಹಿಳೆಯರ ಸಮಸ್ಯೆಗಳನ್ನು ಮುಖ್ಯವಾಗಿ ಮಹಿಳೆಯರ ಸಮಸ್ಯೆಯ ಹಿನ್ನೆಲೆಯಲ್ಲಿಯೇ ನೋಡಬೇಕಾಗುತ್ತದೆ. ಆಗ ಮಾತ್ರ ಮಹಿಳೆಯರ ಸಮಸ್ಯೆಗಳಿಗೆ ಸೂಕ್ತವಾದ ಪರಿಹಾರ ದೊರೆಯಲು ಸಾಧ್ಯವಾಗುತ್ತದೆ. ❑



ಅವ್ವನ ಭಾವಚಿತ್ರ

■ ಡಾ. ಕೆ. ಷರೀಫಾ

ಗೋಡೆಗೆ ನೇತುಹಾಕಿದ
ಚೌಕಟ್ಟಿನೊಳಗಿನ ಚಿತ್ರವಾಗಿ
ಅನುಭವಿಸಿದ ಕ್ರೌರ್ಯ ಹಿಂಸೆಗೆ
ಕೊನೆ ಹುಡುಕಿದೆಯೇನೆ?
ಮೆಲುದನಿಯ ಮಿತನುಡಿಯ
ಮಂದಹಾಸ ನಿನ್ನ ಮೊಗದಲ್ಲೇ!
ಉಕ್ಕಿ ಹರಿಯುವ ನಗೆಬುಗ್ಗೆಗೆ
ತಡೆಗೋಡೆ ಕಟ್ಟಿದೆಯಲ್ಲೇ
ಗೋಡೆಗೆ ನೇತಾಡುವ ಚೌಕಟ್ಟಿನಲಿ
ಶುಭ್ರ ನಿನ್ನ ದುಂಡುಮುಖ
ಮೋಡಗಳಲಿ ತೇಲುವ ಚಂದ್ರ
ಬಾವಿಯಲಿ ಮಿಂದು ಬಂದಂತೆ
ತಲೆಸೆರಗು ಎಂದೂ ಜಾರದಲ್ಲೇ?

* * *

ನೀ ಬೆಳೆಸಿದ ಬಸಳೆ ಚಪ್ಪರ
ಹಿತ್ತಲಿನ ಸೀಬೆ, ಮಾವು, ತೆಂಗು
ಈಗಲೂ ಫಲಕೊಡುತ್ತಿವೆಯಲ್ಲೇ?
ಅಂದು ನೀ ಹುಗಿದ ಬಿಸಿ ನೀರಿನ ಹಂಡೆ
ಹಿತವಾದ ಬಿಸಿ ನೀರೊಲೆಯ
ಸ್ನಾನದ ಮನೆ ಅಲ್ಲೇ ಇದೆ
ಹಿತ್ತಲ ಸಿಹಿನೀರ ಬಾವಿ
ಜಗಲಿ ಮುಂದಿನ ಸೆಗಣಿ ಸಾರಣೆ
ನೆಲದ ತಂಪು ಇಂದಿಗೂ ಉಂಟಲ್ಲೇ
ಹಿತ್ತಲಿನಲಿ ನೀ ಬೆಳೆಸಿದ ಮರಗಳ ಮಧ್ಯೆ
ನನಗೆ ದಟ್ಟ ಕಾಡಿನ ಅನುಭವ!

* * *

ಘಮಟು ವಾಸನೆಯ ಹೆರಿಗೆ ಕೋಣೆ
ಬಾಣಂತಿ ಗೃಹವಿನ್ನೂ ಹಾಗೇ ಇದೆ
ನೀ ತೂಗಿದ ಕರುಳು ಜೀವದ ತೊಟ್ಟಿಲು
ಪಡಸಾಲೆಯಲ್ಲಿನ್ನೂ ತೂಗುತ್ತಿದೆಯಲ್ಲೇ
ಎಲ್ಲರಿಗೂ ಕೂಳು ಕುದಿಸುವ
ಅಡುಗೆ ಮನೆ ಪರಿಮಳ
ಮಿಡಿ ಮಾವಿನ ಉಪ್ಪಿನಕಾಯಿ
ನಿನ್ನ ನಿತ್ಯ ಕಾಯಕದ ಶ್ರದ್ಧೆ
ಯಜ್ಞಕುಂಡದ ಮುಂದೆ
ದಿನನಿತ್ಯದ ಚರಿತ್ರೆ ಬರೆದೆಯಲ್ಲೇ
ಮನೆಯ ಬೀಸುಕಲ್ಲು ಒಳಕಲ್ಲಿನಂತೆ
ಜೀವ ಸವೆಸಿದ ನಿನಗೆ
ಬಿಡುಗಡೆಯೇ ಇಲ್ಲವೇನೆ?
ಅದಕ್ಕೇ ಚೌಕಟ್ಟಿನಲಿ ಚಿತ್ರವಾಗಿ
ಹೂಮಾಲೆ ಧರಿಸಿ ಇತಿಹಾಸವಾದೆಯೇನೆ?
ಅವ್ವ! ಇತಿಹಾಸವಾದೆಯೇನೇ? ❑



ಮಹಿಳಾ ಸಮಾವೇಶ : ಒಂದು ವರದಿ

● ಡಾ. ಚಂದ್ರಮತಿ ಸೋಂದಾ

'ಮಹಿಳೆಯ ಕೆಲಸಕ್ಕೆ ಸಮಾನ ಗೌರವವಿಲ್ಲ. ಕನಿಷ್ಠ ಸೌಲಭ್ಯವೂ ಕೊಡದೆ ದುಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಕೃಷಿ ಕ್ಷೇತ್ರದಲ್ಲಿ ಮಹಿಳೆಯ ಪ್ರಾಬಲ್ಯ, ಪ್ರಾಮುಖ್ಯವನ್ನು ಮಾನ್ಯಮಾಡುವಂತೆ ಮಾಡಬೇಕಾಗಿದೆ. ಮಹಿಳಾ ಸಂಘಟನೆಗಳು ಅಲ್ಲಲ್ಲಿ ನಡೆಸುತ್ತಿರುವ ಹೋರಾಟಗಳನ್ನು ಒಟ್ಟಾಗಿಸುವ ಅಗತ್ಯವಿದೆ. ಮಹಿಳೆಯ ದುಡಿಮೆ ಅನುತ್ಪಾದಕ ಹಾಗೂ ಅಗ್ಗದ್ದು ಎನ್ನುವ ಧೋರಣೆಯ ವಿರುದ್ಧ ದನಿ ಎತ್ತಲೇ ಬೇಕಾಗಿದೆ' ಎಂದು ಕುಮುದ ಅವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಕಾರ್ಯಕ್ರಮದ ಉದ್ದೇಶವನ್ನು ತೆರೆದಿಡುವುದರೊಂದಿಗೆ ರಾಜ್ಯದ ವಿವಿಧೆಡೆಗಳಿಂದ ಬಂದ ಮಹಿಳೆಯರನ್ನು ಸ್ವಾಗತಿಸಿದರು.

'ಮಹಿಳಾ ಕೃಷಿಕಾರ್ಮಿಕರು–ಸವಾಲುಗಳು ಮತ್ತು ಪ್ರತಿರೋಧ' ಎನ್ನುವ ವಿಷಯ ಕುರಿತಂತೆ ಮೈಸೂರಿನ ಸಮತಾ ವೇದಿಕೆ ಮತ್ತು ಅಖಿಲ ಭಾರತ ಪ್ರಗತಿಪರ ಮಹಿಳಾ ಸಂಘ, ಕರ್ನಾಟಕ, ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ 4–12–2010 ರಂದು ಮೈಸೂರಿನಲ್ಲಿ ರಾಜ್ಯಮಟ್ಟದ ಮಹಿಳಾ ಸಮಾವೇಶವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಪ್ರಾರಂಭದಲ್ಲಿ ಸಮತಾ ವೇದಿಕೆಯ ಸದಸ್ಯರು ಕೋಟಗಾನಹಳ್ಳಿ ರಾಮಯ್ಯ ಅವರು ರಚಿಸಿರುವ 'ಬದುಕು ಬವಣೆ' ರೂಪಕವನ್ನು ರಂಗಾಯಣದ ಗೀತಾ ಅವರ ನಿರ್ದೇಶನದಲ್ಲಿ ಪ್ರಸ್ತುತಪಡಿಸಿದರು. ಕೃಷಿಕೂಲಿಕಾರ ಮಹಿಳೆಯರ ಬವಣೆ, ಅಸಮಾನ ಸಂಬಳ, ದೌರ್ಜನ್ಯಗಳ ವಿರುದ್ಧ ಮಹಿಳೆ ದನಿ ಎತ್ತಬೇಕಿದೆ ಎನ್ನುವುದನ್ನು ರೂಪಕ ಕಾಣಿಸಿತು. 'ಕೆಸರಿನ ಗದ್ದೆಯೆ ಹೆರಿಗೆಯ ಮನೆಯಾಯ್ತು' ಎನ್ನುವ ಮಹಿಳೆಯ ಪರಿಸ್ಥಿತಿಯನ್ನು ತೆರೆದಿಟ್ಟು ಅದಕ್ಕೆ ಹೆದರದೆ, 'ಹೆಣ್ಣಾಗಿ ಹುಟ್ಟಿದ ಬಳಿಕೆ ಕಣ್ಣಾಗ ನೀರೇಕೆ? ನಿನ್ನನ್ನು ನೀ ಮೊದಲು ಚೆನ್ನಾಗಿ ತಿಳೀಬೇಕು' ಎನ್ನುವುದನ್ನು ಅರ್ಥಮಾಡಿಕೊಳ್ಳುವ ಅಗತ್ಯವನ್ನು ಹೇಳುತ್ತ, 'ಸಮಾನತೆಯ ಸಂಸ್ಕೃತಿ ನಮಗೆ ಇಂದು ಬೇಕಿದೆ; ಹೆಣ್ಣು ಪೂರ್ಣರೀತಿಯಲ್ಲಿ ಮುಕ್ತಳಾಗಬೇಕಿದೆ' ಎನ್ನುವ ಆಶಯದೊಂದಿಗೆ ರೂಪಕ ಪರಿಸಮಾಪ್ತಗೊಂಡಿತು.

ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಅತಿಥಿಯಾಗಿ ಭಾಗವಹಿಸಿದ ಅಖಿಲ ಭಾರತ ಪ್ರಗತಿಪರ ಮಹಿಳಾ ಸಂಘದ ರಾಷ್ಟ್ರೀಯ ಕಾರ್ಯದರ್ಶಿಯಾದ ಕಾಮ್ರೇಡ್ ಕವಿತಾ ಕೃಷ್ಣನ್ ಅವರು ಕರ್ನಾಟಕದ ಪ್ರಸ್ತುತ ರಾಜಕೀಯ ಪರಿಸ್ಥಿತಿಯನ್ನು ಪ್ರಸ್ತಾಪಿಸಿ, ಭ್ರಷ್ಟತೆಯಲ್ಲಿ ಮುಳುಗಿರುವ ಸರಕಾರ ಮಹಿಳೆಯರ ಬಗೆಗೆ ಕಾಳಜಿ ಇಲ್ಲದೆ ಅವರನ್ನು ಸಾಯಿಸುತ್ತಿದೆ. ಇದನ್ನು ನೋಡಿ ಮಹಿಳೆಯರು ಸುಮ್ಮನಿರಬೇಕೇ? 134 ದೇಶಗಳಲ್ಲಿ ನಡೆದ ಅಂತಾರಾಷ್ಟ್ರೀಯ ಸಮೀಕ್ಷೆ ನಮ್ಮ ದೇಶದಲ್ಲಿ ಶ್ರೀಮಂತರ ಸಂಖ್ಯೆ ಹೆಚ್ಚುತ್ತಿರುವುದಾಗಿ ತಿಳಿಸುತ್ತದೆ. ಆದರೆ ಲಿಂಗಸಮಾನತೆಯ ನೆಲೆಯಲ್ಲಿ ಪಾಕಿಸ್ತಾನ ಮತ್ತು ಬಾಂಗ್ಲಾದೇಶಗಳಿಗಿಂತ ಹಿಂದಿದ್ದು, 119ನೆಯ ಸ್ಥಾನದಲ್ಲಿದೆ. ಅಧ್ಯಕ್ಷರು, ಸ್ಪೀಕರ್, ಮಂತ್ರಿ, ಪಕ್ಷದ ನಾಯಕಿಯರಾಗಿ ಮಹಿಳೆಯರು ಇದ್ದಾಗಲೂ ಮಹಿಳೆಯರ ಸ್ಥಾನದಲ್ಲಿ ಹೆಚ್ಚಿನ ಬದಲಾವಣೆ ಆಗಿಲ್ಲ, ಗ್ರಾಮಾಂತರ ಪ್ರದೇಶದಲ್ಲಿ ಪ್ರಸವ ಸಮಯದಲ್ಲಿನ ಸಾವಿನ ಸಂಖ್ಯೆ ಈಗಲೂ ಸಾವಿರಕ್ಕೆ 4.5 ಇರುವುದನ್ನು ಪ್ರಸ್ತಾಪಿಸಿ, ಅಪೌಷ್ಟಿಕತೆ ಮುಂತಾದ ಕಾರಣಕ್ಕೆ ಸಾವು ಆಗುತ್ತಿರುವುದಾಗಿ ತಿಳಿಸಿದರು. ರಾಜ್ಯ ಹಾಗೂ ಕೇಂದ್ರ ಸರಕಾರಗಳು ಬಡವರ ವಿಷಯದಲ್ಲಿ ಆರ್ಥಿಕತೆಯನ್ನು ಮುಂದುಮಾಡುತ್ತವೆ, ಆದರೆ ತಂರಂಗಾಂತರ ಹಗರಣದ 1 ಲಕ್ಷದ 76 ಸಾವಿರ ರೂಪಾಯಿ ಮೊತ್ತ ರಾಷ್ಟ್ರೀಯಾರೋಗ್ಯ ಯೋಜನೆಗೆ ಖರ್ಚುಮಾಡುತ್ತಿರುವುದರ 14 ಪಟ್ಟು ಅಧಿಕ, ಮಹಿಳೆ ಮತ್ತು ಮಕ್ಕಳ ಸಚಿವಾಲಯದ ವ್ಯಯಕ್ಕಿಂತ 16ಪಟ್ಟು ಹೆಚ್ಚು. ಬಿಪಿಎಲ್ ಮತ್ತು ಎಪಿಎಲ್ ಕಾರ್ಡುದಾರರಿಗೆ ಕೊಡಲು ಹಣದ ಕೊರತೆ ಎನ್ನುತ್ತದೆ ಸರಕಾರ. ಆದರೆ ಪ್ರತಿಕುಟುಂಬಕ್ಕೆ 35 ಕಿ.ಗ್ರಾಂ. ಪಡಿತರ ಕೊಡಲು ಈ ಹಣ ಸಾಕಾಗುತ್ತದೆ. ಮುಂದಿನ 5 ವರ್ಷಗಳ ಕಾಲ ಎಲ್ಲ ಮಕ್ಕಳಿಗೂ ಉಚಿತ ಶಿಕ್ಷಣಕ್ಕೆ ಸಾಕಾಗುವಷ್ಟು ಹಣ ಇದಾಗಿದೆ ಎಂದು ಹಣದ ಅಪವ್ಯಯದ ವಿವರಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟರು.

ಆಹಾರ ಭದ್ರತೆ ಕುರಿತ ಶಾಸನ ತರುವುದಾಗಿ ಹೇಳುತ್ತಿದ್ದರೂ ಬರುವ ಗ್ಯಾರಂಟಿ ಇಲ್ಲ. ಮಹಿಳೆ ಕುಟುಂಬದ ಮುಖ್ಯಸ್ಥಳು

ಎನ್ನುವುದನ್ನು ಸರಕಾರಗಳು ಒಪ್ಪುವುದಿಲ್ಲ. ರಾಷ್ಟ್ರೀಯ ಜನಸಂಖ್ಯಾ ಮಾಹಿತಿಯ ಪ್ರಕಾರ ಅವಳು ಕೆಲಸಗಾತಿಯಲ್ಲ. ಅವಳ ಕೆಲಸವನ್ನು ಅನುತ್ಪಾದಕ ಎಂದು ಪರಿಭಾವಿಸುತ್ತ ಬರಲಾಗಿದೆ. ಇವೆಲ್ಲವೂ ಮಹಿಳೆಗೆ ಅಪಮಾನವಾಗುವ ಅಂಶಗಳು. ಸಾರಾಯಿಗೆ ಹಣವಿದೆ. ನೀರಿಗೆ ಹಣವಿಲ್ಲ. ಶ್ರೀಮಂತರಿಗೆ ಕೊಡಲು ದುಡ್ಡಿದೆ. ಆದರೆ ಬಡವರ ವಿಷಯ ಬಂದಾಗ ಹಣವಿಲ್ಲ ಎನ್ನಲಾಗುತ್ತಿದೆ ಎಂದರು.

ಸಮತಾ ವೇದಿಕೆಯ ಸಂಚಾಲಕರಾದ ಮೀರಾ ನಾಯಕರು ಅಧ್ಯಕ್ಷ ಭಾಷಣದಲ್ಲಿ "ದೇಶಕ್ಕೆ ಸ್ವಾತಂತ್ರ್ಯ ಬಂದು ಆರು ದಶಕಗಳೇ ಕಳೆದರೂ ಮಹಿಳೆಯರು ಇನ್ನೂ ಹೆಬ್ಬೆಟ್ಟು ಒತ್ತುವ ಸ್ಥಿತಿಯಲ್ಲಿರುವುದು ಸರಿಯಲ್ಲ. ಹೆಣ್ಣು ಗಂಡು ಸಮಾನತೆ ಸಾಧಿಸದೆ ಅಭಿವೃದ್ಧಿಯಾಗದು. ಕಡಿಮೆ ಸಂಬಳವನ್ನು ಪ್ರಶ್ನಿಸುತ್ತಿಲ್ಲ. ಪುರುಷರಿಗೆ ಸ್ಥಾನಮಾನ ಕೊಟ್ಟವರು ಯಾರು? ನಾವು ಈ ಕುರಿತು ಯೋಚಿಸಬೇಕು, ಎಚ್ಚೆತ್ತುಕೊಳ್ಳಬೇಕು. ಸರಕಾರ ನೀಡುವ ಸೀರೆಯಂಥ ಅಗ್ಗದ ಯೋಜನೆಗೆ ಮಹಿಳೆ ಸಹಕರಿಸಬಾರದು. ಸಮಾಜದ ಅವನತಿಗೆ ಮಹಿಳೆ ಕಾರಣಳಾಗಬಾರದು ಎಂದರು.

'ಮಹಿಳಾ ಕೃಷಿ ಕಾರ್ಮಿಕರ ಹೋರಾಟಗಳು' ಗೋಷ್ಠಿಯಲ್ಲಿ ರಾಜ್ಯದ ವಿವಿಧ ಭಾಗದಿಂದ ಬಂದ ಮಹಿಳೆಯರು ತಮ್ಮ ಸಮಸ್ಯೆಯನ್ನು ಮುಕ್ತವಾಗಿ ತೆರೆದಿಟ್ಟರು. 'ಹೊಟ್ಟೆ ತುಂಬ ಬಾನ ಕೊಡಲಿಲ್ಲ. ಮಕ್ಕಳು ಅಷ್ಟೋ ಇಷ್ಟೋ ಓದಿ ಮನೇಲಿ ಕುಂತ್ರೂ ಮುಂದೆ ಓದಿಸಕ್ಕೆ ಆಗಾಂಗಿಲ್ಲ. ಆಸ್ತಿ ಇಲ್ಲ, ಮನೆ ಇಲ್ಲ. ಮೈಮುಚ್ಚೊವಷ್ಟು ಬಟ್ಟೆ ತರೋಕೆ ಆಗಂಗಿಲ್ಲ. 50 ವರ್ಷ ದುಡುದ್ರೂ ಏನೂ ಇಲ್ಲ. ಬೆಳಗ್ಗೆ 6 ರಿಂದ ರಾತ್ರಿ 8 ರ ವರೆಗೆ ಕೆಲ್ಸ ಮಾಡುದ್ರೂ ಹೊಟ್ಟೆ ತುಂಬಕ್ಕೆ ಆಗ್ತಿಲ್ಲ. ಎಷ್ಟು ಭಾರ ಹೊತ್ರೂ ಕೂಲಿ ಕೊಡದು ಕಡಿಮೆನೇ. ನಮ್ಮ ಮಕ್ಳ ಬಗ್ಗೆ ಗಮನ ಕೊಡ್ದೆ ಹೊಟ್ಟೆ ಪಾಡಿಗಾಗಿ ದುಡಿಮೆ. ಯಾವ ಪ್ರಯೋಜನವೂ ಇಲ್ಲ' ಗಂಗಾವತಿಯಿಂದ ಬಂದ ಬಸಮ್ಮನ ಕೊರಗು ಇದು. ಇದು ಆಕೆ ಒಬ್ಬರದೇ ಅಲ್ಲ; ಅಕ್ಕಿಗಿರಣಿಯಲ್ಲಿ ಹಲವಾರು ವರ್ಷಗಳಿಂದ ಕೂಲಿಕಾರ್ಮಿಕರಾಗಿ ದುಡಿಯುತ್ತಿರುವ ಅಲ್ಲಿನ ಎಲ್ಲ ಮಹಿಳೆಯರ ಸ್ಥಿತಿ ಈ ಬಗೆಯದು. ಅಲ್ಲೇ ಕೆಲಸ ಮಾಡುವ ಸೈನಾಬಿ ವಿವರಗಳನ್ನು ಹೀಗೆ ಬಿಚ್ಚಿಟ್ಟರು: '50ವರ್ಷಗಳಿಂದ ಇರುವ ಅಕ್ಕಿ ಗಿರಣಿಯಲ್ಲಿರುವ ಮಹಿಳೆಯರಿಗೆ ಕೆಲಸದ ಭದ್ರತೆಯಾಗಲಿ, ಶೌಚಾಲಯ ವ್ಯವಸ್ಥೆಯಾಗಲಿ, ವಿರಾಮಕ್ಕೆ ಸ್ಥಳವಾಗಲಿ, ಮಕ್ಕಳ ಕೇಂದ್ರವಾಗಲಿ ಇಲ್ಲ. 30ವರ್ಷ ದುಡಿದ ಮಹಿಳಾ ಕಾರ್ಮಿಕರಿಗೆ ಏನಾದರೂ ಆದರೆ ಪರಹಾರವಿಲ್ಲ, ಮಹಿಳಾ ಅಧಿಕಾರಿ ಇದ್ದರೂ ಅನ್ಯಾಯ ನಡೆಯುತ್ತಿದೆ. ಅವರ ವರ್ಗಾವಣೆಗೆ ಒತ್ತಾಯಿಸಿದರೂ ಆಗುತ್ತಿಲ್ಲ' ಎಂದರು.

ಉದ್ಯೋಗ ಖಾತ್ರಿ ಯೋಜನೆಯ ಮೂಲಕ ಗ್ರಾಮೀಣ ಜನತೆಗೆ ಉದ್ಯೋಗ ನೀಡಿ ಅವರ ಹಸಿವನ್ನು ನೀಗಿಸುವುದು ಈ ಯೋಜನೆಯ ಉದ್ದೇಶ. '5ವರ್ಷ ಆಗಿದೆ ಈ ಯೋಜನೆ ಬಂದು. ಆದರೆ ಇದುವರೆಗೆ 100 ರೂ. ಪಡೆಯುವುದೂ ಸಾಧ್ಯವಾಗಿಲ್ಲ, ಹರಪನಹಳ್ಳಿ ತಾಲೂಕಿನಲ್ಲಿ ನಮ್ಮ ಹೋರಾಟಕ್ಕೆ ಮಣಿದು 8–10 ಕಾರ್ಯದರ್ಶಿಗಳನ್ನು ಅಮಾನತು ಗೊಳಿಸಿದರು. ನಮ್ಮ ಹಕ್ಕನ್ನು ಕೇಳಬೇಕು, ಯಾರಿಗೂ ಹೆದರದೆ ಹೋರಾಟ ನಡೆಸಬೇಕು' ಎನ್ನುವುದಾಗಿ ಹರಪನಹಳ್ಳಿಯ ಶಕೀಲಮ್ಮ ನುಡಿದರು. 'ಹಣವೇನೋ ಬಿಡುಗಡೆ ಆಗ್ತಿದೆ. ಆದರೆ ಪಂಚಾಯಿತಿ ಯವರು ಅನ್ಯಾಯ ಮಾಡಿ ತಾವೇ ತಿನ್ನುತ್ತಿದ್ದಾರೆ. ಬಡವರ ಕೈಗೆ ಸಿಗ್ತಿಲ್ಲ. ಒಂದು ತಿಂಗಳು ಉಪವಾಸ, ಹೋರಾಟ ಮಾಡಿದ್ವಿ' ಎನ್ನುತ್ತಾರೆ ಅದೇ ತಾಲೂಕಿನ ಕರಿಯಮ್ಮ.

ಸಾರ್ವಜನಿಕ ಆಹಾರ ಹಂಚಿಕೆಯಲ್ಲಿನ ಅಸಂಬದ್ಧತೆಯ ಬಗ್ಗೆ ಹೆಗ್ಗಡದೇವನ ಕೋಟೆ ತಾಲೂಕಿನ ಸಣ್ಣರಾಮಮ್ಮ ತಮ್ಮ ಹೋರಾಟ ವನ್ನು ಹೀಗೆ ಬಿಚ್ಚಿಟ್ಟರು: ಅಖಿಲ ಭಾರತ ಸಂಘ ಅಂತ ಮಾಡಿ ಒಂದು ವರ್ಷಾತು. ತಿಂಗಳಿಗೆ 8–10 ಕೆ.ಜಿ. ಅಕ್ಕಿ ಕೊಡ್ತಾರೆ. 30ಕೆ.ಜಿ. ಕೊಡಲ್ಲಿ 20 ಕೆ.ಜಿ ಕೊಡ್ತಾರೆ ಸೊಸೈಟಿಯವರು. ಸತ್ತಿಗೆ ಹುಂಡಿಗೆ ಅಕ್ಕಿ ಬರಬೇಕು ಅಂತಾರೆ. ಸಂತೆ ನಮಗೆ ದೂರ. ಕಾಡಲ್ಲಿ ನಡದು ಹೋಗಬೇಕು. ಆನೆಗಳ ಕಾಟ. ಅದರಿಂದ ಬಸ್ ಬೇಕು ಅಂತ ಹೋರಾಟ ಮಾಡಿದ್ವಿ. ಈಗ ದಿನಕ್ಕೆ 3 ಬಸ್ ಬರ್ತಿದೆ. ಉದ್ಯೋಗ ಖಾತ್ರಿ ಯೋಜನೆಗಾಗಿ ಹೊರಾಡ್ತಿದೀವಿ. ಅನ್ಯಾಯ, ದೌರ್ಜನ್ಯ ನಡೀತಿದೆ. ಅದನ್ನು ವಿರೋಧಿಸಿ ಒಂದಾಗಿ ಹೋರಾಡಬೇಕು, ಪಡಕೊಳ್ಳಬೇಕು' ಎಂದರು. ಅದೇ ತಾಲೂಕಿನ ತಾರಕ ಗ್ರಾಮದ ಗೋಪಿಕ ಹೇಳುವುದೇನೆಂದರೆ; 'ನಮ್ಮದು ಕಾಡಿನಂಚಿನ ಹಳ್ಳಿ, ನೀರು, ರೇಶನ್ ಸಿಗ್ತಿರನಿಲ್ಲ. ಸಂಘಟನೆ ಮೂಲಕ ಹೋರಾಡಿದೀವಿ. ಉದ್ಯೋಗ ಖಾತ್ರಿ ಯೋಜನೆಯ ಕೆಲಸ ಸಿಗ್ತಿರಲಿಲ್ಲ. ಶೌಚಾಲಯ ಕೊಟ್ಟಿಲ್ಲ. ಗ್ರಾಮಪಂಚಾಯಿತಿಗೆ ಮುತ್ತಿಗೆ ಹಾಕಿದೀವಿ. ಮಹಿಳೆಗೆ ಬೇಕಾದ್ದನ್ನು





ಪಡೆಯಲು ಹೋರಾಟ ಮಾಡಬೇಕು. ಆಶಾ ಕಾರ್ಯಕರ್ತೆಯರಿಗೆ ಸರಿಯಾಗಿ ಸಂಬಳವಿಲ್ಲ. ಬಡ ಮಹಿಳೆಯರ ಕೂಗು ಅವರಿಗೆ ಕೇಳ್ತಿಲ್ಲ. ಭ್ರಷ್ಟ ಅಧಿಕಾರಿಗಳನ್ನು ಓಡಿಸಬೇಕು. ಎಲ್ಲ ಒಗ್ಗಟ್ಟಾಗಿ ಹೋರಾಟ ಮಾಡ್ಬೇಕು' ಎನ್ನುವುದಾಗಿ.

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ಬೂದಿಹಳ್ಳ ಗ್ರಾಮದಲ್ಲಿ ದಲಿತರ ಮೇಲೆ ನಡೆದ ದೌರ್ಜನ್ಯ ಎಲ್ಲರ ಗಮನ ಸೆಳೆದಿತ್ತು. ಅದರ ಬಿಸಿ ಇನ್ನೂ ಆರಿಲ್ಲ ಎನ್ನುವುದನ್ನು ರೇಣುಕಮ್ಮ ಅವರ ವಿವರಣೆ ಅನಾವರಣಗೊಳಿಸಿತು. 'ದಲಿತ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆದರೂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲು ಸಾಧ್ಯವಾಗಿಲ್ಲ. ಧರಣಿ, ಮನವಿ ಎಲ್ಲ ನಡೆಸಿದರೂ ಪ್ರಯೋಜನವಿಲ್ಲ. ಈಗಾಗ್ಲೇ, ಪ್ರಗತಿಪರರು, ಮಾಧ್ಯಮ, ಅಧಿಕಾರಿಗಳು ಭೇಟಿ ನೀಡಿದಾರೆ. ನಮ್ಮ ಕೋರಿಕೆಗೂ ನೀಡಿರುವ ಪರಿಹಾರಕ್ಕೂ ಅಜಗಜಾಂತರವಿದೆ. 35 ಕುಟುಂಬಗಳು ಊರು ತೊರೆದಿವೆ. ಪುನರ್ವಸತಿ ಕಲ್ಪಿಸಲು ತಲಾ 5 ಎಕರೆ ಭೂಮಿಯ ಬೇಡಿಕೆ ಇಟ್ಟಿದ್ದಾರೆ, ಸರಕಾರ ಸರಿಯಾಗಿ ಸ್ಪಂದಿಸುತ್ತಿಲ್ಲ' ಎನ್ನುವ ಅಳಲು ರೇಣುಕಮ್ಮ ಅವರದು. ಈ ವಿಷಯವನ್ನು ಮಾರಕ್ಕ ವಿವರಿಸಿದ್ದು ಹೀಗೆ: 'ಉಳುಮೆ ಮಾಡಲು ಹೋದರೆ ತಡೆಯುತ್ತಾರೆ. ಕೂಲಿಯಿಂದ ಬದುಕಬೇಕಾಗಿದೆ. ಗೋಮಾಳದಲ್ಲಿ ಸೌದೆ ಕಡಿದರೆ ಮಾದಿಗರು ಸೌದೆ ಕಡಿಯುವಂತಿಲ್ಲವೆಂದು 5ಸಾವಿರ ದಂಡ ಹಾಕುತ್ತಾರೆ. ಮನೆಯ ಕದ ತಟುವುದು, ಸೂರಿಗೆ ಬಡಿತ, ಜೀವ ಬೆದರಿಕೆ. ನೀರು ಕೊಡಲ್ಲ, ಕೂಲಿ ಕೆಲಸ ಕೊಡಲ್ಲ, ಪರೂರಿನವರು ಕರೆದರೆ ತಡೆ ಒಡ್ಡಾರೆ. ಅದೇ ಜಾತಿಯವರಿಗೆ ಕುಮ್ಮಕ್ಕು ಕೊಟ್ಟು ಒಡೆದು ಆಳ್ತಾರೆ. ಅನೇಕರು ಬ್ಯಾರೆ ಊರಿಗೆ ಹೋಗಿ ನೆಲಸಿದಾರೆ. ಹೆಂಗಸರ ಮೇಲೆ ಹೆಚ್ಚು ದೌರ್ಜನ್ಯ ನಡಸ್ತಾರೆ. ಒಗ್ಗಟ್ಟಾಗಿ ಹೋರಾಡಿದ್ರೆ ಹೀಗಾಗಲ್ಲ.'

ಉತ್ತರ ಕರ್ನಾಟಕದ ನೆರೆಯ ವಿಷಯದಲ್ಲಿ ಸರಕಾರ ನಡೆದು ಕೊಳ್ಳುತ್ತಿರುವ ರೀತಿ ಮತ್ತು ಅದರ ನಿರ್ಲಕ್ಷ್ಯ ಮಾನವೀಯತೆಯಲ್ಲಿ ನಂಬಿಕೆ ಕಳೆದುಕೊಳ್ಳುವ ರೀತಿಯದು. ಇದಕ್ಕೆ ಶಾರದಾ ಅವರ ಮಾತು ಪುಷ್ಟಿ ನೀಡಿತು. 'ನೀರು ಬಂದು ಕಷ್ಟ ಆಗಿತ್ತು. 3–4 ದಿನ ಮಕ್ಕಳನ್ನು ಇಟ್ಕೊಂಡು ಬೀದೀಲಿದ್ದೆವು. ಅಧಿಕಾರಿಗಳು ದೌರ್ಜನ್ಯ ಮಾಡ್ತಿದಾರೆ. ಬದುಕೋದು ಹೇಗೆ?' ಮಹಿಳಾ ನಾಯಕತ್ವದಲ್ಲಿ ಜಿಲ್ಲಾಮಟ್ಟದ 2 ಸಂಘಟನೆ ಮಾಡುವಂತೆ ಮನವಿ ಮಾಡಿದರು. ಅಸಂಘಟಿತ ಮಹಿಳೆಯರು ಹೆಚ್ಚು ಶೋಷಿತರು ಎಂದರು.

ಒಬ್ಬೊಬ್ಬರದು ಒಂದೊಂದು ಬಗೆಯ ಸಮಸ್ಯೆ. ಬೆಂಗಳೂರಿನ ಸಿದ್ಧ ಉಡುಪು ಕಾರ್ಖಾನೆಯಲ್ಲಿ ಕೆಲಸ ಮಾಡುವ ಶೈಲಾ 4 ವರ್ಷಗಳಿಂದ ಬೆಳಗ್ಗೆಯಿಂದ ಸಂಜೆವರೆಗೆ ದಿನಕ್ಕೆ 8 ತಾಸು ಕೆಲಸ ಮಾಡಿದ್ರೂ ಸರಿಯಾದ ಸಂಬಳವಿಲ್ಲ. ತಿಂಗಳಿಗೆ 2000 ರೂಪಾಯಿ ಕೊಡುತ್ತಾರೆ. ಹೆಚ್ಚಿಗೆ ಸಂಬಳಕ್ಕಾಗಿ ಹೋರಾಡಬೇಕು ಅಂದ್ರೆ ಮನೇಲಿರುವ ಪುರುಷರ ಸಹಕಾರವಿಲ್ಲ. ಮಾತಾಡಿದ್ರೆ ಮಾಲೀಕರು ನೀರು, ಪಿ.ಎಫ್ ಕಟ್ ಮಾಡ್ತಾರೆ. ಬೈದ್ರೂ ತಿರುಗಿ ಮಾತಾಡ ಹಂಗಿಲ್ಲ. ಮಾಲೀಕರು ಸರಿಯಾಗಿ ಅವರ ಪಾಲಿನ ಪಿ.ಎಫ್. ಕಟ್ತಿಲ್ಲ. ಅದಕ್ಕಾಗಿ ಹೋರಾಡ ಬೇಕು' ಎಂದರು.

ಈ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಪ್ರೊ.ಆರ್. ಇಂದಿರಾ ಅವರು, ಬೆಳಗಿನಿಂದ ತಮ್ಮ ಅನುಭವ ಹಂಚಿಕೊಂಡವರಿಂದ ಕಲಿಯುವುದು ಸಾಕಷ್ಟಿದೆ. ಸರಕಾರ ಮತ್ತು ಅಧಿಕಾರಿಗಳ ಕಾರ್ಯವೈಖರಿ ನೋಡಿದರೆ 'ನಾಚಿಕೆ' ಸತ್ತುಹೋಗಿದೆ ಅನಿಸುತ್ತದೆ. ತಾವು ಸತ್ಯಸಂಧರು ಎಂದರೆ ಯಾರೂ ನಂಬುವುದಿಲ್ಲ. ಈಗ ಉಳಿದಿರುವುದು ಜನಪರ ಹೋರಾಟ ಒಂದೇ. ಗಂಡು, ಹೆಣ್ಣು ಎನ್ನುವ ದೇಹ ಮುಖ್ಯವಲ್ಲ, ಲಿಂಗಸೂಕ್ಷ್ಮತೆ ಮುಖ್ಯ. ಮಹಿಳೆ ಮತ್ತು ಪುರುಷರಿಬ್ಬರೂ ಮಹಿಳಾಪರ ಹೋರಾಟ ದಲ್ಲಿದ್ದಾರೆ. ಸಾಮಾಜಿಕ ನೆಮ್ಮದಿ ತರಬೇಕಾದರೆ ವೈಯಕ್ತಿಕ ನೆಮ್ಮದಿ ಬಿಡಬೇಕಾಗುತ್ತದೆ. ಎಲ್ಲ ಕಡೆ ಮಹಿಳೆಯ ಮೇಲೆ ಲೈಂಗಿಕ ದೌರ್ಜನ್ಯ ನಡೆಯುತ್ತಿದೆ. ಗೌರವ, ಕೆಲಸ ಕಳೆದುಕೊಳ್ಳುವ ಭಯ ಇತ್ಯಾದಿ ಕಾರಣಗಳಿಂದ ಮಹಿಳೆಯರು ಸುಮ್ಮನಿರುವ ಪರಿಸ್ಥಿತಿ ಇದೆ ಎಂದು ಪ್ರಸಕ್ತ ಸಂದರ್ಭವನ್ನು ವಿಶ್ಲೇಷಿಸಿದರು. ಭಾಂವ್ರಿ ದೇವಿಯನ್ನು ಯಾರೋ ಕೇಳಿದರಂತೆ. ಈ ರೀತಿ ಹೋರಾಟ ಮಾಡಲಿಕ್ಕೆ ನಿಮಗೆ ನಾಚಿಕೆ ಯಾಗುವುದಿಲ್ಲವೇ? ಎಂದು. 'ಅತ್ಯಾಚಾರ ಮಾಡಿದೋರಿಗೆ ನಾಚಿಕೆ ಆಗಬೇಕು, ನನಗಲ್ಲ' ಎಂದು ಆಕೆ ಉತ್ತರಿಸಿದರಂತೆ. ಇಂದಿರಾ ಅವರ ಈ ಉದಾಹರಣೆ ಮಹಿಳೆ ತಾಳಬೇಕಾಗಿರುವ ಧೋರಣೆಯನ್ನು ತಿಳಿಸಿತು.

ಮಧ್ಯಾಹ್ನ 'ಮಹಿಳಾ ಪ್ರತಿರೋಧಗಳು' ಎನ್ನುವ ಎರಡನೆಯ ಗೋಷ್ಠಿಯ ಅಧ್ಯಕ್ಷತೆಯನ್ನು ರಾಜ್ಯ ರೈತ ಸಂಘದ ಮಹಿಳಾ ಸಂಚಾಲಕರಾದ ಅನಸೂಯಮ್ಮ ವಹಿಸಿದ್ದರು. ರಾಜ್ಯದ ಎಲ್ಲ ಜಿಲ್ಲೆಗಳಿಂದ ಬಂದ ಮಹಿಳಾ ಪ್ರತಿನಿಧಿಗಳು ತಮ್ಮ ಹೋರಾಟದ ರೀತಿಯನ್ನು ಪ್ರಸ್ತುತಪಡಿಸಿದರು. ಉತ್ತರ ಕರ್ನಾಟಕದಿಂದ ಬಂದಿದ್ದ ಹೊನ್ನಮ್ಮನವರ ಸ್ವಸಹಾಯ ಸಂಘದವರು ಬ್ಯಾಂಕಿಗೆ ಹಣ ಕಟ್ಟಲು ಹೋದರೆ ಬ್ಯಾಂಕಿನ ಸಿಬ್ಬಂದಿ ತಮ್ಮನ್ನು ಹುಶ್ ಎಂದು ಹೊರಗೆ ಅಟ್ಟುವುದಾಗಿಯೂ, ಅದರ ವಿರುದ್ಧವೂ ತಾವು ಹೋರಾಡಬೇಕಾದ ಪರಿಸ್ಥಿತಿ ಇರುವುದನ್ನು ತಿಳಿಸಿದರು. ಆಶ್ರಯ ಮನೆ ಕೇಳಿದರೆ ಯಾರಿಗೆ ಓಟು ಹಾಕಿದೆಯೋ ಅವರನ್ನು ಕೇಳು ಎನ್ನುತ್ತಾರೆ. ಕೂಲಿಯಿಂದ ಜೀವನ ಮಾಡಬೇಕಾಗಿದೆ ಎನ್ನುವುದು ಹಲವರ ಅಳಲು. ಅತಿವೃಷ್ಟಿ ಯಿಂದ ಮನೆ ಕಳೆದುಕೊಂಡವರಿಗೆ ಮನೆ ನೀಡಲು ಅಧಿಕಾರಿಗಳು ಸತಾಯಿಸುತ್ತಾರೆ. ಸರಕಾರ ಅಲಾಟ್ ಮಾಡಿದ ಮನೇನ ರಿಜಿಸ್ತ್ರಿ ಮಾಡಕ್ಕೆ 20–30 ಸಾವಿರ ಹಣ ಕೇಳ್ತಾರೆ. ಕಾರ್ಮಿಕರು, ಬಡವರು ಹೇಗೆ ಮನೇನ ರಿಜಿಸ್ತ್ರಿ ಮಾಡಿಸ್ಕೊಳ್ಳೋದು ಎನ್ನುವ ಪ್ರಶ್ನೆಯನ್ನು ಕೆಲವರು ಮುಂದಿಟ್ಟರು. ಆದ್ರೂ ಕೆಲವರು ರೊಕ್ಕ ಕೊಟ್ಟು ಸೋತಿದ್ದಾರೆ. ನಾವಿರೋ ಕ್ಯಾಂಪಿನಲ್ಲಿ ನೀರಿಲ್ಲದಿದ್ದಾಗ 2 ಕಿ.ಮೀ.ನಿಂದ ನೀರು ತರಬೇಕು. ಧರಣಿ ಕೂತ್ರೂ ಏನೂ ಸಹಾಯ ಮಾಡಿಲ್ಲ. ಅಧಿಕಾರಿಗಳು ದರ್ಪತೋರಿಸ್ತಾರೆ ಎಂದವರು ಕರಿಯಮ್ಮ.

ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಅನಸೂಯಮ್ಮ ಅವರು ಮೈಸೂರಿನ ಮಹಾರಾಜರೇ ಅಭಿವೃದ್ಧಿ ದಾರಿಯಲ್ಲಿ ನಡೆದವರು. ಸ್ವಾತಂತ್ರ್ಯ ಬಂದು 63 ವರ್ಷಗಳಾದರೂ ಅಭಿವೃದ್ಧಿಯಾಗಿಲ್ಲ ಎಂದರೆ ಏನರ್ಥ? ಮಹಿಳೆಯರು ಅವಲಂಬಿತರಾಗುವುದನ್ನು ಬಿಡಬೇಕು.



ಮೊದಲು ಜಾತಿಯನ್ನು ಜಿಡಿ. ನಾವೆಲ್ಲ ಮನುಷ್ಯರು. ಪ್ರಜೆಗಳು. ನಮ್ಮದು ಹಳ್ಳಿಗಳ ದೇಶ. ಕಣಜ ತುಂಬುವುದು ಗ್ರಾಮೀಣ ಪ್ರದೇಶದ ಕೃಷಿಯಿಂದ. ನಾವು ಕೊಡುವ ತೆರಿಗೆ ಬಜೆಟ್ ಕಣಜಕ್ಕೆ ಬೀಳುತ್ತಿದೆ. ಸಮಾನ ಶಿಕ್ಷಣ, ಆಹಾರ, ಸಮಾನ ವೇತನ, ಆರೋಗ್ಯ ಇವೆಲ್ಲವೂ ಸಂವಿಧಾನಾತ್ಮಕ ಹಕ್ಕು. ಸಂಘಟನೆಯ ಮೂಲಕ ಅದನ್ನು ಕೇಳೋಣ. ಹಳ್ಳಿಗಳು ಶೇ.80 ನಗರಗಳು ಶೇ.20 ಇವೆ. ಆದರೆ ವಿನಿಯೋಗದಲ್ಲಿ ಉಲ್ಟಾ ಆಗಿದೆ. ಶೇ.20 ಹಳ್ಳಿಗಳಿಗೆ, ಶೇ. 80 ನಗರಗಳಿಗೆ ಖರ್ಚು ಮಾಡುತ್ತಿದ್ದಾರೆ. ಹಾಗಾಗಿ ಅಸಮಾನತೆ ಇದೆ. ಕೃಷಿಗೆ, ಕಾರ್ಮಿಕರಿಗೆ, ಕೂಲಿಗೆ ಯಾವುದಕ್ಕೂ ಸಾಮಾಜಿಕ ಭದ್ರತೆ ಇಲ್ಲ. ಯಾವುದೂ ಸರಿಯಾಗಿ ವಿತರಣೆ ಆಗುತ್ತಿಲ್ಲ. ಎಂದು ಸಮಸ್ಯೆಯ ಕಾರಣವನ್ನು ತಿಳಿಸಿದರಲ್ಲದೆ, ಸಂಘಟನೆ ಮಾಡಿಕೊಂಡು ಒಗ್ಗಟ್ಟಾಗಿ ಹೋರಾಡಿ. ಸೀರೆ ಬೇಡ, ಸ್ವಾವಲಂಬನೆ ಅಗತ್ಯ ಎಂದು ಹೋರಾಟದ ದಾರಿಯನ್ನು ಸೂಚಿಸಿದರು. ●

ಕೊನೆಯಲ್ಲಿ ನಡೆದ ಸಮಾರೋಪದಲ್ಲಿ 10 ನಿರ್ಣಯಗಳನ್ನು ಕೈಗೊಳ್ಳಲಾಯಿತು

1. ಅಸಂಘಟಿತ ಕಾರ್ಮಿಕರಿಗೆ ಉದ್ಯೋಗ ಭದ್ರತೆ ಒದಗಿಸಬೇಕು. ಕಾರ್ಖಾನೆಗಳಲ್ಲಿ, ರೈಸ್‌ಮಿಲ್‌ಗಳಲ್ಲಿ ಕಿರಾಣಿ ಅಂಗಡಿ, ಬಟೆ ಅಂಗಡಿ, ಮನೆಗೆಲಸ ಮಾಡುವ ಮಹಿಳಾ ಕಾರ್ಮಿಕರು ಮತ್ತು ಇನ್ನಿತರ ಅಂಗಡಿಗಳಲ್ಲಿ ದುಡಿಯುತ್ತಿರುವ ಗುಮಾಸ್ತರು, ಹಮಾಲರು ಮತ್ತು ಮಹಿಳಾ ಕಾರ್ಮಿಕರಿಗೆ ಕಡ್ಡಾಯವಾಗಿ ಪಿ.ಎಫ್. ವ್ಯವಸ್ಥೆ ಕಲ್ಪಿಸಿ ಅವರ ಸೇವೆಯನ್ನು ಸಕ್ರಮ ಗೊಳಿಸಬೇಕು.
2. ಎಲ್ಲಾ ಬಡವರನ್ನು ಬಿ.ಪಿ.ಎಲ್. ಪಟ್ಟಿಗೆ ಸೇರಿಸಿ, ಕೂಡಲೇ ಬಿ.ಪಿ.ಎಲ್. ಕಾರ್ಡುಗಳನ್ನು ವಿತರಿಸಬೇಕು. ಈ ಮೂಲಕ ಎಲ್ಲಾ ಅಗತ್ಯ ವಸ್ತುಗಳು ದೊರೆಯುವಂತಾಗಬೇಕು.
3. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಭ್ರಷ್ಟಾಚಾರವನ್ನು ತಡೆಗಟ್ಟಿ ಎಲ್ಲಾ ದುಡಿಯುವವರಿಗೆ ವರ್ಷಕ್ಕೆ 200 ದಿನ ಉದ್ಯೋಗ, ದಿನವೊಂದಕ್ಕೆ 200 ರೂ. ಕೂಲಿ ಕೊಡಬೇಕು. ಕನಿಷ್ಠ ಕೂಲಿಯು ಬೆಲೆ ಏರಿಕೆ ಸೂಚ್ಯಂಕವನ್ನು ಆಧರಿಸಿರಬೇಕು.
4. ಕರ್ನಾಟಕದಲ್ಲಿ ವ್ಯಾಪಕವಾಗಿ ಗ್ರಾಮಾಂತರ ಪ್ರದೇಶಗಳ ಮಹಿಳೆಯರ ಬದುಕನ್ನು ದುರ್ಬರಗೊಳಿಸುತ್ತಿರುವ ಎಲ್ಲಾ ರೀತಿಯ ಮದ್ಯ ಮಾರಾಟ ದಂಧೆಯನ್ನು ತಡೆಗಟ್ಟಬೇಕು.
5. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕೈಗೊಂಡಿರುವ ಕಾಮಗಾರಿಗಳಲ್ಲಿ ಅವ್ಯವಹಾರಗಳು ನಡೆಯುತ್ತಿದ್ದು ಕಳೆದ 2005 ರಿಂದ 2010ನೇ ಸಾಲಿನವರೆಗೆ ನಡೆದ ಅಕ್ರಮ ಆರೋಪಗಳಿರುವ ಎಲ್ಲಾ ಕಾಮಗಾರಿಗಳನ್ನು ತನಿಖೆಗೆ ಒಳಪಡಿಸಬೇಕೆಂದು ಒತ್ತಾಯ ಪಡಿಸುತ್ತೇವೆ.
6. ರಾಜ್ಯದಲ್ಲಿ ನಡೆದಿರುವ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ಅವ್ಯವಹಾರಗಳನ್ನು ಸಿ.ಬಿ.ಐ. ತನಿಖೆಗೆ ಒಳಪಡಿಸುವುದು ಮತ್ತು ಅದರಲ್ಲಿ ಭಾಗಿಯಾದ ತಪ್ಪಿತಸ್ಥರ ವಿರುದ್ಧ ಅಪರಾಧ ಪ್ರಕರಣ ದಾಖಲಿಸುವುದು.
7. ಎಲ್ಲ ಬಿ.ಪಿ.ಎಲ್. ಕಾರ್ಡುದಾರರ ಹೆಣ್ಣುಮಕ್ಕಳಿಗೆ ವಸತಿಸಹಿತ ಉಚಿತ ಶಿಕ್ಷಣ ದೊರೆಯಬೇಕು.
8. ಪರಿಶಿಷ್ಟಜಾತಿ, ಪರಿಶಿಷ್ಟವರ್ಗದ ಆಯೋಗದ ಮಾದರಿ ಯಲ್ಲಿಯೇ ಮಹಿಳಾ ಕೃಷಿ ಕಾರ್ಮಿಕರ ಸ್ಥಿತಿಗತಿಗಳ ಅಧ್ಯಯನವನ್ನು ಕಾಲಕಾಲಕ್ಕೆ ನಡೆಸಲು ಅವರ ಕಲ್ಯಾಣ ಯೋಜನೆಗಳು ಕಾರ್ಯಗತಗೊಳ್ಳುತ್ತಿರುವುದನ್ನು ಸಮೀಕ್ಷೆ ಮಾಡಲು ಮಹಿಳಾ ಕೃಷಿಕಾರ್ಮಿಕರ ಆಯೋಗ ನೇಮಕವಾಗಬೇಕು.
9. ಹೆರಿಗೆ ಭತ್ಯೆಯನ್ನು ಮೂರು ತಿಂಗಳ ಅವಧಿಯಿಂದ ಆರು ತಿಂಗಳ ಅವಧಿಗೆ ವಿಸ್ತರಿಸಬೇಕು.
10. ದೈಹಿಕ ಅನಾರೋಗ್ಯದ ಸಂದರ್ಭದಲ್ಲಿಯೂ ಮಹಿಳಾ ಕೃಷಿಕಾರ್ಮಿಕರಿಗೆ ಕೂಲಿಸಹಿತ ರಜೆ ನೀಡಬೇಕು. ●



ಮಧು ವೆಂಕಾರೆಡ್ಡಿಯವರ

'ಹೊನ್ನಮ್ಮನ ಹದಿಬದೆಯ ಧರ್ಮ ಒಂದು ಅಧ್ಯಯನ'

■ ಡಾ. ಸಬಿತಾ ಬನ್ನಾಡಿ

ಆಧುನಿಕ ಪೂರ್ವ ಕನ್ನಡ ಸಾಹಿತ್ಯದ ಅಧ್ಯಯನವೆಂದರೆ ಅದು ಪುರುಷನಿರ್ಮಿತ ಸಾಹಿತ್ಯದ ಅಧ್ಯಯನವೆಂದೇ ಅರ್ಥ. ಈ ಸಮುದ್ರದಲ್ಲಿ ಪುಟ್ಟ ನಾವೆಗಳಂತೆ ಅಲ್ಲಿ ಇಲ್ಲಿ ಕಾಣಬರುವ ಮಹಿಳೆಯರ ಸಾಹಿತ್ಯದ ಅಧ್ಯಯನವೂ ವಿರಳವಾಗಿರುವದೂ ಅಷ್ಟೇ ಸಹಜ ವಿದ್ಯಮಾನವಾಗಿದೆ. ಈ ಹಿನ್ನೆಲೆಯಲ್ಲಿ ವಚನಕಾರ್ತಿಯರನ್ನು ಬಿಟ್ಟರೆ ಮತ್ತೆ ನಮಗೆ ಸಿಗುವುದು ಸಂಚಿ ಹೊನ್ನಮ್ಮನೇ. ಹದಿಬದೆಯಧರ್ಮವೆಂಬ ಪುಟ್ಟ ಕೃತಿ ರಚಿಸಿದ ಆಕೆ ಆ ಕಾರಣಕ್ಕೇ ಚಾರಿತ್ರಿಕ ಮಹತ್ವವನ್ನು ಪಡೆದುಕೊಳ್ಳುತ್ತಾಳೆ. ಈ ಕೃತಿಯನ್ನು ಹಲವು ರೀತಿಯ ಪರಿಶೀಲನೆಗೆ ಒಳಪಡಿಸಲು ಅವಕಾಶವಿದೆ. ಹೊನ್ನಮ್ಮ ಸಾಂಪ್ರದಾಯಿಕವಾಗಿಯೇ ಬರೆದಿದ್ದರೂ, ಅವಳು ಹಾಗೆಯೇ ಬರೆಯಲು ಕಾರಣಗಳೇನು ಎಂಬುದನ್ನು ಪರಿಶೀಲಿಸಲು ಸಾಧ್ಯವಿದೆ. ತಾನು ಬದುಕುತ್ತಿರುವ ಪರಿಸರದ ಕಟ್ಟುಪಾಡುಗಳ ಅರಿವಿರುವ ಹೆಣ್ಣೊಬ್ಬಳು ಆ ಕಟ್ಟುಪಾಡುಗಳ ನಡುವೆಯೇ ಅವಕಾಶವೊಂದನ್ನು ನಿರ್ಮಿಸಿಕೊಳ್ಳಬೇಕಾದ ಅನಿವಾರ್ಯತೆಯಿರುವಾಗ ಮೊದಲು ತನ್ನ ಕುರಿತು ನಂಬಿಕೆಯೊಂದನ್ನು ಹುಟ್ಟಿಹಾಕಿಕೊಳ್ಳಬೇಕಾಗುವುದೂ ಒಂದು ಸವಾಲೇ ಆಗಿದೆ. ಹೊನ್ನಮ್ಮನದು ಬಹುಶಃ ಇಂತಹ ಇಕ್ಕಟ್ಟಿನ ಪರಿಸ್ಥಿತಿ. ದೊಡ್ಡ ದೊಡ್ಡ ಉದ್ಗ್ರಂಥಗಳ ನಡುವೆ ತನ್ನ ಸೀಮಿತ ಅನುಭವ ಲೋಕವೊಂದನ್ನು ಆಧರಿಸಿಕೊಂಡು ಕೃತಿ ರಚಿಸ ಹೊರಡುವ ಹೊನ್ನಮ್ಮ ಆ ಕೀಳರಿಮೆಯ ನಡುವೆಯೂ ಆತ್ಮವಿಶ್ವಾಸವನ್ನು ಬಿಟ್ಟು ಕೊಡುವುದಿಲ್ಲ ಎಂಬುದು ಬಹಳ ಮುಖ್ಯ ವಿಚಾರ. ಈ ಹಿನ್ನೆಲೆಯಲ್ಲೇ ಆಕೆಯ ಕೃತಿಯ ಮಿತಿಯನ್ನೂ ಗುರುತಿಸಬೇಕಾಗುತ್ತದೆ.

ಇಂತಹ ಕೃತಿಯನ್ನು ತಮ್ಮ ಪಿಎಚ್‌ಡಿ ಅಧ್ಯಯನಕ್ಕೆ ಮಧು ವೆಂಕಾರೆಡ್ಡಿಯವರು ಆರಿಸಿಕೊಂಡಿದ್ದಾರೆ. ಪ್ರೊ.ವೀರಣ್ಣ ರಾಜೂರ ಅವರ ಮಾರ್ಗದರ್ಶನದಲ್ಲಿ ಈ ಪ್ರೌಢಪ್ರಬಂಧವನ್ನು ಸಿದ್ಧಪಡಿಸಿರುವ ಅವರು ಈ ಪ್ರಬಂಧಕ್ಕಾಗಿ ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಪಿ.ಎಚ್.ಡಿ ಪದವಿಯನ್ನು ಪಡಿದಿದ್ದಾರೆ.

ಆಧುನಿಕ ಪೂರ್ವ ಸಾಹಿತ್ಯಗಳು ಧರ್ಮವನ್ನು ತಮ್ಮ ಮೂಲಭಿತ್ತಿಯಾಗಿಸಿ ಕೊಳ್ಳುವುದು ಒಂದು ಸಾಮಾನ್ಯ ವಿಚಾರವಾಗಿದೆ. ಎಲ್ಲಾ ಒಳ್ಳೆಯ ಕೃತಿಗಳೂ ಈ ಚೌಕಟ್ಟನ್ನು ಮೀರುತ್ತವೆ ಎನ್ನವುದೂ ಸಾಹಿತ್ಯದ ಇನ್ನೊಂದು ಮಗ್ಗುಲಾಗಿದೆ. ಹೊನ್ನಮ್ಮನೂ ಇಂತಹ ಒಂದು ಒತ್ತಡಕ್ಕೆ ಒಳಗಾದ ಹಾಗೆ ಕಾಣುತ್ತದೆ. ಹೀಗಾಗಿ ಆಕೆ ತನ್ನ ಕೃತಿಗೆ ಹದಿಬದೆಯ ಧರ್ಮ ಎಂಬ ಹೆಸರನ್ನು ಇಡುತ್ತಾಳೆ. ಮತ್ತು ತಾನು ಹೇಳುತ್ತಿರುವುದು ಬೇರೆ ಎಲ್ಲಾ ಧರ್ಮಗಳಿಗಿಂತಲೂ ಮಿಗಿಲಾದದ್ದು ಎಂದು ಸಮರ್ಥಿಸುತ್ತಾಳೆ. ಇವು ಅವಕಾಶ ದೊರೆತಮೇಲೂ ಹೆಣ್ಣುಮಗಳೊಬ್ಬಳು ಎದುರಿಸ ಬೇಕಾದ ಸಂಕಟಗಳನ್ನು ಅನಾವರಣ ಮಾಡುತ್ತವೆ.

ಪ್ರಸ್ತುತ ಮಧುವೆಂಕಾರೆಡ್ಡಿಯವರ ಈ ಅಧ್ಯಯನದಲ್ಲಿ ಒಟ್ಟು ಏಳು ಅಧ್ಯಾಯ ಗಳಿವೆ. ತಮ್ಮ ವಿಚಾರಗಳನ್ನು ಏಳು ಹೆಜ್ಜೆಗಳೆಂದು ವಿಭಾಗ ಮಾಡಿಕೊಂಡು ತಮ್ಮ ವಿಶ್ಲೇಷಣೆಯನ್ನು ಅವರು ಮಾಡಿದ್ದಾರೆ. ಮೊದಲನೆಯ ಹೆಜ್ಜೆಯಲ್ಲಿ ನಾರಿ ನಡೆದು ಬಂದ ದಾರಿಯನ್ನು ಪರಿಶೀಲಿಸುತ್ತಾರೆ. ಇದಕ್ಕಾಗಿ ಅಖಿಲ ಭಾರತೀಯ ಹಿನ್ನೆಲೆಯಲ್ಲಿ ಪರಿಶೀಲಿಸುವ ಪ್ರಯತ್ನ ಮಾಡುತ್ತಾರೆ. ಜಗತ್ತಿನ ಮಾನವ ಇತಿಹಾಸದಲ್ಲಿ ಸ್ತ್ರೀಯ ಸ್ಥಾನ ಎಂಬ ಶೀರ್ಷಿಕೆಯಡಿ ಸಂಕ್ಷಿಪ್ತವಾದ ಉಪ ಅಧ್ಯಾಯವೂ ಇಲ್ಲಿದೆ. ಇದರಲ್ಲಿ ವೋಲ್ಗಾಗಂಗಾ ಕೃತಿಯಲ್ಲಿನ ವಿವರಗಳು ಹಾಗೂ ಕೆಲವು ಬ್ರಿಟಿಷ್ ಬರಹಗಾರರ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಕೊಟ್ಟಿದ್ದಾರೆ. ಈ ವಿವರಗಳು ಜಗತ್ತಿನ ಮಹಿಳೆಯರ ಇತಿಹಾಸವನ್ನು ಪ್ರತಿನಿಧಿಸುವುದಕ್ಕಿಂತ ಹೆಚ್ಚಾಗಿ ಒಂದು ಪೀಠಿಕೆಯನ್ನಷ್ಟೇ ನೀಡುವ ಉದ್ದೇಶವನ್ನು ಹೊಂದಿವೆ.

ನಂತರದಲ್ಲಿ ಅವರು ಪ್ರಾಚೀನ ಭಾರತದಲ್ಲಿ ಸ್ತ್ರೀಯರ ಸ್ಥಾನಮಾನದ ಕುರಿತು ವಿವರವಾಗಿ ಮತ್ತು ಕರ್ನಾಟಕದಲ್ಲಿ ಹೆಣ್ಣಿನ ಸ್ಥಾನಮಾನಗಳನ್ನು ಕುರಿತು ಕನ್ನಡ ಸಾಹಿತ್ಯದ ಹಿನ್ನೆಲೆಯೊಂದಿಗೆ ಸಂಕ್ಷಿಪ್ತವಾಗಿ ವಿವರಗಳನ್ನು ನೀಡಿದ್ದಾರೆ. ಪ್ರಾಚೀನ ಭಾರತದಲ್ಲಿ ಸ್ತ್ರೀಯರ ಸ್ಥಾನಮಾನದ ಕುರಿತ ಅಧ್ಯಾಯಗಳನ್ನು ಹಲವು ಉಪ ಅಧ್ಯಾಯಗಳನ್ನಾಗಿ ವಿಭಾಗಿಸಿಕೊಂಡಿದ್ದಾರೆ. ವೇದಗಳಲ್ಲಿ, ಉಪನಿಷತ್ತುಗಳಲ್ಲಿ, ಮಹಾಕಾವ್ಯಗಳು ಮತ್ತು ಪುರಾಣಗಳಲ್ಲಿ, ಸ್ಮೃತಿಗಳಲ್ಲಿ, ಅವೈದಿಕ ಸಂಸ್ಕೃತಿಯಲ್ಲಿ, ಜೈನರಲ್ಲಿ, ಇಸ್ಲಾಮಿನಲ್ಲಿ ಮಹಿಳೆಯರ ಸ್ಥಾನಮಾನವನ್ನು ಕುರಿತು ಮಾಹಿತಿ ಕಲೆಹಾಕಿದ್ದಾರೆ. ಋಗ್ವೇದ ಕಾಲದಲ್ಲಿ ಬಳಕೆಯಲ್ಲಿದ್ದ ಎಂಟು ವಿಧದ ಮದುವೆಗಳನ್ನು ಕುರಿತು ತಿಳಿಸುತ್ತಾರೆ. ಮದುವೆ ಯಾದ ಹೆಣ್ಣನ್ನು ಜಾಯಾ, ಜಾನಿ ಮತ್ತು ಪತ್ನಿ ಎಂದು ಮೂರು ರೀತಿಯಲ್ಲಿ ಗುರುತಿಸಲಾಗುತಿತ್ತು. 'ಜಾಯಾ' ಎಂದರೆ ಪತಿಯ ಪ್ರೀತಿಯಲ್ಲಿ ಪಾಲುಗಾರಳೆಂದೂ, 'ಜಾನಿ' ಎಂದರೆ ಮಕ್ಕಳ ತಾಯಿಯೆಂದೂ, 'ಪತ್ನಿ' ಎಂದರೆ ಪತಿಯೊಡನೆ ಯಜ್ಞಯಾಗಾದಿಗಳಲ್ಲಿ ಪಾಲ್ಗೊಳ್ಳುವ ವಳೆಂದೂ ತಿಳಿಯಲಾಗಿದೆ ಎಂಬ ವಿವರಗಳು ಕುತೂಹಲ ಕಾರಿಯಾಗಿವೆ. ಈ ಕಾಲದ ಹೆಣ್ಣಿನ ಸಾಮಾಜಿಕ ಸ್ಥಿತಿಯ ಕುರಿತು ಹೇಳುತ್ತಾ 'ಇದೇ ಕಾಲದಲ್ಲಿ ಭೂಮಿ ಇಡೀ ಸಮಾಜದ ಸೊತ್ತು ಎಂಬ ಕಲ್ಪನೆ ಬದಲಾಗಿ ಅದು ಒಂದೊಂದು ಮನೆತನದ ಸೊತ್ತಾಗಿ ಮಾರ್ಪಾಡು ಹೊಂದಿತ್ತು. ಇಂಥ ಬದಲಾವಣೆಯ ಕಾಲದಲ್ಲಿ ಸ್ವಾಭಾವಿಕ ವಾಗಿ ಮುಂಚೂಣಿಯುಲ್ಲಿದ್ದ ಪುರುಷರು ಅದರ ಮೇಲೆ ತಮ್ಮ ಹಕ್ಕನ್ನು ಸ್ಥಾಪಿಸಿದರು. ಅದರಲ್ಲೂ ಈ ಹಕ್ಕು ಮನೆತನದ ಯಜಮಾನನಲ್ಲಿ ಕೇಂದ್ರೀಕೃತವಾಯಿತು. ಆರ್ಯಕುಟುಂಬ ಪದ್ಧತಿ ಪಿತೃಪ್ರಧಾನವಾದುದೇ ಇದಕ್ಕೆ ಮೂಲ ಕಾರಣ.' ಎಂದು ಗುರುತಿಸುತ್ತಾರೆ.

ಉಪನಿಷತ್ ಕಾಲವೂ ಇತರ ಕಾಲಕ್ಕಿಂತ ಹೆಣ್ಣು ಮಕ್ಕಳ ದೃಷ್ಟಿಯಲ್ಲಿ ಉತ್ತಮ ಕಾಲ ಎಂಬ ಈಗಾಗಲೇ ವಿದ್ವಾಂಸರು ಊಹಿಸಿರುವ ಮಾತುಗಳನ್ನೇ ಇಲ್ಲಿ ಸಂಶೋಧಕಿ ಒಪ್ಪಿಕೊಳ್ಳುತ್ತಾರೆ 'ಸುಶಿಕ್ಷಿತರೂ, ಮದುವೆಯ ವೇಳೆಗೆ ಪ್ರಾಪ್ತವಯಸ್ಕರೂ ಆಗಿರುತ್ತಿದ್ದ ವಧುಗಳು ತಮ್ಮ ಗಂಡಂದಿರ ಸಮಾನರೆಂದು ಭಾವಿಸಲ್ಪಡುತ್ತಿದ್ದರು. 'ದಂಪತಿ' ಶಬ್ದವು ಮನೆಗೆ ಗಂಡ ಹೆಂಡಿರಿಬ್ಬರೂ ಸಂಯುಕ್ತ ನಾಯಕರೆಂದು ಪರಿಗಣಿಸಲ್ಪಡುತ್ತಿದ್ದರೆಂದು ಸೂಚಿಸುತ್ತದೆ.' ಎಂಬ ಎ.ಎಸ್.ಅಳ್ತೇಕರ್ ಅವರ ಮಾತನ್ನು ಲೇಖಕಿ ಅನುಮೋದಿಸುತ್ತಾರೆ.

ಮಹಾಕಾವ್ಯ ಮತ್ತು ಪುರಾಣಗಳ ಕಾಲದಲ್ಲಿ ಹೆಣ್ಣುಮಕ್ಕಳ ಕುರಿತಾದ ಭಾವನೆಗಳಲ್ಲಿ ವಿಪರೀತ ಏರುಪೇರುಗಳಾದುದನ್ನು ಗುರುತಿಸುತ್ತಾ, 'ಒಟ್ಟು ಹದಿನೆಂಟು ಪುರಾಣಗಳಲ್ಲಿ ಕೆಲವು ಪುರಾಣಗಳು ಸ್ತ್ರೀಯರ ಬಗೆಗೆ ತೀರ ಹೀನಾಯವಾದ ಭಾವನೆಗಳನ್ನು ವ್ಯಕ್ತ ಪಡಿಸಿರುವುದು ಕಂಡುಬರುತ್ತದೆ.'ಎನ್ನುತ್ತಾರೆ. ಇದಕ್ಕೆ

ಸಾಕ್ಷಿಯಾಗಿ ದೇವೀಪುರಾಣ, ಅಗ್ನಿಪುರಾಣ ಮೊದಲಾದ ಪುರಾಣಗಳಿಂದ ಉಲ್ಲೇಖಗಳನ್ನು ನೀಡುತ್ತಾರೆ. 'ಪಿತೃಪ್ರಧಾನ ಕುಟುಂಬ ಪದ್ಧತಿಯಲ್ಲಿ ಪಾತಿವ್ರತ್ಯದ ತೀರ ಸಂಕುಚಿತ ಅರ್ಥ ಬೆಳೆಯತೊಡಗಿತು. ಪತಿಭಕ್ತಿಯನ್ನು ಹಾಡಿ ಹೊಗಳುವ ಪುರಾಣಗಳು ಪುರುಷ ಪ್ರಾಬಲ್ಯವನ್ನು ಇನ್ನೂ ಹೆಚ್ಚು ಮಾಡಿದವು. ಪುರಾಣ ಕಾಲದ ಸ್ತ್ರೀಯರು ತಮ್ಮ ಪತಿಗಳ ಸೂತ್ರದ ಬೊಂಬೆಯಂತಿದ್ದರೆಂಬುದು ಸ್ಪಷ್ಟವಿದೆ.' (ಪು;24) ಎಂಬ ನಿಲುವಿಗೆ ಲೇಖಕಿ ಬರುತ್ತಾರೆ.

ಹೆಂಗಸರಿಗೆ ಅತಿ ನಿರ್ಬಂಧಗಳು ಆರಂಭವಾದುದು ಸ್ಮೃತಿಗಳ ಕಾಲದಲ್ಲಿ. ಇದನ್ನು ಆಧಾರ ಸಮೇತ ಈ ಗ್ರಂಥದಲ್ಲಿ ನೀಡಲಾಗಿದೆ. ಮನು, ಶುಕ್ರ, ಚಾಣಕ್ಯ, ಅತ್ರಿ, ಯಮ, ವ್ಯಾಸ ಹೀಗೆ ಹೆಚ್ಚಿನ ಎಲ್ಲಾ ಸ್ಮೃತಿಕಾರರು ಹೆಣ್ಣುಮಕ್ಕಳ ವಿಚಾರದಲ್ಲಿ ಸಹನೆಯಿಲ್ಲದವರಾಗಿದ್ದು ಕಂಡು ಬರುತ್ತದೆ. ಇವುಗಳನ್ನು ಇಲ್ಲಿ ಸಂಗ್ರಹಿಸಿ ನೀಡಲಾಗಿದೆ. ಕೆಲವನ್ನು ಗಮನಿಸಬಹುದು – **ಮನು:** 'ಸ್ತ್ರೀಯರ ಕಾಮುಕತನವು ಸೌಂದರ್ಯ, ವಯಸ್ಸು ಒಂದನ್ನೂ ಗಣಿಸುವುದಿಲ್ಲ. ಕುರೂಪಿಗೂ ಮುದುಕನಿಗೂ ಹುಡುಗನಿಗೂ ಒಲಿಯುತ್ತಾರೆ.' **ಪರಾಶರ:** 'ಸ್ತ್ರೀ ಮತ್ತು ಶೂದ್ರರ ಕೊಲೆಗೆ ಒಂದೇ ವಿಧವಾದ ಶಿಕ್ಷೆ. ಅವರಿಬ್ಬರಲ್ಲಿ ಯಾವ ಭೇದವೂ ಇಲ್ಲ.' **ಅತ್ರಿ:** 'ಆಕೆ ಪುಣ್ಯವನ್ನು ಗಳಿಸಲು ಯಾವ ದೀರ್ಘ ಯಾತ್ರೆಯನ್ನು ಕೈಕೊಳ್ಳುವುದೂ ಅನವಶ್ಯಕ. ಆಕೆ ಗಂಡನನ್ನು ಪೂಜಿಸಿ, ಆತನ ಪಾದಗಳನ್ನು ತೊಳೆದು ಆ ನೀರನ್ನು ಕುಡಿದರೆ ಸಾಕು. ಆಕೆಗೆ ಪುಣ್ಯವು ಕಟ್ಟಿಟ್ಟದ್ದೆ.' **ಬೃಹಸ್ಪತಿ:** 'ಸ್ತ್ರೀಯರು ಬಹಳ ಲೋಭಿಗಳು. ಬೇಕಾದಷ್ಟು ಭೋಜನ, ವಸ್ತ್ರವಿಭೂಷಣಗಳನ್ನು ಕೊಟ್ಟರೂ ಅವರು ಮತ್ತೆ ಬೇಡುತ್ತಾರೆ. ಬಡವನಾದ ಅಥವಾ ಅಸ್ವಸ್ಥನಾದ ಪತಿಯನ್ನು ತ್ಯಜಿಸಿ ಹೋಗುವ ಸ್ತ್ರೀಯರು ಮುಂದಿನ ಜನ್ಮದಲ್ಲಿ ನಾಯಿಯಾಗಿಯೋ, ಗಿಡವಾಗಿಯೋ ಹುಟ್ಟುತ್ತಾರೆ. ಪತಿ ಜೊತೆಗೆ ಸತಿ ಹೋಗುವ ಸ್ತ್ರೀಗೆ ಸ್ವರ್ಗಲೋಕದಲ್ಲಿ ಆನಂದವೂ ಪ್ರಾಪ್ತವಾಗುತ್ತದೆ.' **ಯಮ:** 'ಎಂಟು ವರ್ಷಕ್ಕೆ ಮಗಳ ಮದುವೆ ಮಾಡುವುದರಿಂದ ಸ್ವರ್ಗ ಸಿಗುತ್ತದೆ. ಗುಣವಂತ ವರ ಸಿಗದೆ ಹೋದರೆ ಗುಣಹೀನನಾದರೂ ಸರಿಯೆ.' **ವ್ಯಾಸ:** 'ಪತಿಯು ಮಹಾಪಾತಕಿಯಾಗಿದ್ದರೂ ಪತ್ನಿಯು ಅವನನ್ನು ತ್ಯಜಿಸಕೂಡದು.' (ಪುಟಗಳು: 29–30) ಇಂತಹ ಮಾತುಗಳ ನಡುನಡುವೆ ಅಲ್ಲಿ ಇಲ್ಲಿ ಕೆಲವು ಒಳ್ಳೆಯ ಮಾತುಗಳು ಬಂದಿವೆಯಾದರೂ ಅವು ಅಪ್ರಯೋಜಕ ವಾಗಿವೆ. ಯಾಕೆಂದರೆ ಈ ದಾಳಿ, ಈ ಹಿಂದೆ ಉಪನಿಷತ್ ಕಾಲದ ಕೆಲವು ಉದಾರಿ ನೆಲೆಗಳನ್ನು ಸಂಪೂರ್ಣ ಮಸುಕು ಮಾಡುವಲ್ಲಿ ಸಫಲವಾದವು. ಉಪನಿಷತ್ ಕಾಲದಲ್ಲಿ ಹೆಣ್ಣಿನ ಮದುವೆ ವಯಸ್ಸು ಹದಿನಾರಾಗಿದ್ದರೆ ಸ್ಮೃತಿಗಳ ಕಾಲಾನಂತರ ಅದು ಏಳು, ಎಂಟಕ್ಕಿಂತಲೂ ಕೆಳಗೆ ಇಳಿದಿದ್ದನ್ನು ಕಾಣಬಹುದು. ಇವೆಲ್ಲವೂ ವೈದಿಕ ಹಿನ್ನೆಲೆಯ ಚಿಂತನೆಗಳು. ಭಾರತದಲ್ಲಿ ವೈದಿಕ ಹಿನ್ನೆಲೆಗಿಂತಲೂ ಹೆಚ್ಚಿನ ಹರಹನ್ನು ಅವೈದಿಕ ಚಿಂತನೆಗಳು ಹೊಂದಿವೆ. ಇವುಗಳ ವ್ಯಾಪಕ ಅಧ್ಯಯನ ಇನ್ನೂ ಆಗಿಲ್ಲ. ಈ ಸಂಪ್ರಬಂಧದಲ್ಲೂ ಆ ಕೊರತೆ ಇದೆ. ಇಲ್ಲಿ ಅವೈದಿಕ ಎಂದು ಅವರು ಗುರುತಿಸುವುದು ಬೌದ್ಧ, ಜೈನ ಮತ್ತು ಇಸ್ಲಾಂ ಧರ್ಮಗಳನ್ನು. ಇದರಲ್ಲಿ ಜೈನವು ಹೆಂಗಸರ ಶಿಕ್ಷಣ ಇತ್ಯಾದಿಗಳ ಪರವಾಗಿತ್ತು ಎಂಬ ನಿಲುವಿಗೆ ಲೇಖಕಿ ಬರುತ್ತಾರೆ. ಆದರೆ, ಅವೈದಿಕದ ವ್ಯಾಪ್ತಿ ಇನ್ನಷ್ಟು ದೊಡ್ಡದಿದೆ. ಇಂದು ಹಿಂದೂ ಎಂಬ ದೊಡ್ಡ ಕ್ಯಾನ್ವಾಸ್‌ನ ಅಡಿಯಲ್ಲಿ ಸೇರಿಸಲಾಗಿರುವ ದಲಿತರ, ಅನೇಕ ಮಜಲಿನ ಶೂದ್ರರ, ಬುಡಕಟ್ಟುಗಳ ಜನರ ಜೀವನವು ಈ ಯಾವ ಧರ್ಮದ ಗೋಜಲಿಗೂ ಒಳ ಪಟ್ಟಿಲ್ಲ. ಅವುಗಳನ್ನು ನಾವು ಗಂಭೀರವಾಗಿ ಸ್ವೀಕರಿಸದೇ ಕೇವಲ ಸಾಂಸ್ಥಿಕ ಧರ್ಮಗಳನ್ನಷ್ಟೇ ಗಮನಿಸುವುದಕ್ಕಿಂತ, ಹೀಗೆ ಮಾಡಿದ್ದರಿಂದ ಹೊನ್ನಮ್ಮನಂತಹ ದಲಿತ ನೆಲೆಯ ಹೆಣ್ಣುಮಗಳೂ ಹೇಗೆ ತನ್ನ ಮೂಲ ನೆಲೆಯನ್ನು ಅವಗಣಿಸಿ ಈ ಸಾಂಸ್ಥಿಕ ಧರ್ಮದಲ್ಲಿ ಹೇಳಲಾದ ವಿಚಾರಗಳನ್ನೇ ತನ್ನದಾಗಿಸಿಕೊಂಡು ಅದನ್ನೇ ಪ್ರಚಾರಮಾಡ ತೊಡಗುತ್ತಾಳೆ ಎಂಬುದನ್ನು ಪರಿಶೀಲಿಸುವುದು ಹೆಚ್ಚು ಜರೂರಿನ ಕೆಲಸವಾಗುತ್ತದೆ. ಈ ನಿಟ್ಟಿನಲ್ಲಿ ಮುಂದೆ ಅಧ್ಯಯನ ನಡೆಸಲು ಅವಕಾಶವಿದೆ.

ಎರಡನೆಯ ಹೆಜ್ಜೆಯಲ್ಲಿ 'ಪಾತಿವ್ರತ್ಯದ ಪರಿಕಲ್ಪನೆ–ಪರಂಪರೆ' ಎಂಬ ಶೀರ್ಷಿಕೆಯಡಿಯಲ್ಲಿ, ಪಾತಿವ್ರತ್ಯ ಎಂಬ ಪದದ ಭಾಷಿಕ ಮತ್ತು ಸಾಂಸ್ಕೃತಿಕ ಮೂಲಗಳನ್ನು ಚರ್ಚಿಸುತ್ತಾರೆ. 'ಹದಿಬದೆ' ಎಂಬ ಪದವು 'ಪತಿವ್ರತೆ' ಪದದ ತದ್ಭವವಾಗಿದ್ದು ಹದಿಬದೆಯ ಕರ್ತವ್ಯಗಳನ್ನು ಹೇಳುವ ಮೂಲ ಉದ್ದೇಶವನ್ನು ಹೊಂದಿರುವ ಕೃತಿಯಾಗಿ ಇದನ್ನು ಹೊನ್ನಮ್ಮ ನಿರೂಪಿಸುತ್ತಾಳೆ. ಇದರೊಂದಿಗೆ ಪೂರಕವಾಗಿ ಪತಿಯ ಕರ್ತವ್ಯವನ್ನೂ, ಅತ್ತೆ–ಮಾವ, ಬಂಧು–ಬಳಗ ಹಾಗೂ ತಂದೆ–ತಾಯಿಯರ ಕರ್ತವ್ಯ ಗಳನ್ನೂ ಹೇಳುತ್ತಾಳೆ.

ಈ ಅಧ್ಯಾಯದಲ್ಲಿ ಲೇಖಕಿ ಕೃತಿಯಲ್ಲಿ ನಿರೂಪಿತವಾದ ಪಾತಿವ್ರತ್ಯದ ಕುರಿತು ಹೇಳುವುದಕ್ಕೆ ಪೂರ್ವಭಾವಿಯಾಗಿ 'ಪಾತಿವ್ರತ್ಯ' ಎಂಬ ಪರಿಕಲ್ಪನೆಯ ಹುಟ್ಟು–ಬೆಳವಣಿಗೆಯ ಕುರಿತು ವಿವೇಚನೆ ನಡೆಸುತ್ತಾರೆ. ಮಾರ್ಕ್ಸ್‌ವಾದಿ ದೃಷ್ಟಿಕೋನವು ಪಾತಿವ್ರತ್ಯದ ಕಲ್ಪನೆಯು ಖಾಸಗಿ ಆಸ್ತಿಯ ಹುಟ್ಟಿನೊಂದಿಗೇ ಶುರುವಾದದ್ದು ಎಂದು ವಿವರಿಸುತ್ತದೆ. ಮನುಷ್ಯನ ಮೃಗಾವಸ್ಥೆ, ಕಿರಾತಾವಸ್ಥೆ ಮತ್ತು ನಾಗರಿಕಾವಸ್ಥೆಗಳನ್ನು ಗುರುತಿಸಿ ಏಂಗೆಲ್ಸ್ ಮಾಡುವ ವಿಶ್ಲೇಷಣೆಯನ್ನೂ ಇಲ್ಲಿ ಲೇಖಕಿ ಮೊದಲು ಚರ್ಚಿಸುತ್ತಾರೆ. ಆ ನಂತರದಲ್ಲಿ ವೈದಿಕ ಸಂಸ್ಕೃತಿಯಲ್ಲಿ ಪಾತಿವ್ರತ್ಯದ ಕಲ್ಪನೆ ಕುರಿತು ಚರ್ಚಿಸುತ್ತಾರೆ. ಆರಂಭ ಕಾಲದಲ್ಲಿ ಇಲ್ಲದ ಪಾತಿವ್ರತ್ಯ ಕಲ್ಪನೆ ಕ್ರಮೇಣ ಹಾಸುಹೊಕ್ಕಾದುದನ್ನು ಇಲ್ಲಿ ಕಾಣಬಹುದು. ಮೊದಲು ತಾಯಿಯ ಹೆಸರಿನಿಂದಲೇ ಮಕ್ಕಳನ್ನು ಗುರುತಿಸಲಾಗುತ್ತಿತ್ತು. ಜಬಾಲಳ ಮಗ ಜಾಬಾಲಿ, ವಿನುತೆಯ ಮಗ ವೈನತೇಯ, ಸಾರಿಯ ಮಗ ಸಾರಿಪುತ್ರ ಹೀಗೆ ಇದ್ದ ಪರಂಪರೆಯು ಮುಂದೆ ಬದಲಾದದ್ದನ್ನು ಗಮನಿಸಬಹುದು.

ಬೌದ್ಧ, ಜೈನ ಧರ್ಮಗಳೂ ಪಾತಿವ್ರತ್ಯವನ್ನು ಪ್ರತಿಪಾದಿಸುತ್ತವೆ. ಗ್ರೀಕರಲ್ಲಿ ಆರಂಭದಲ್ಲಿ ಕಾಣದ ಪ್ರತಿಪಾದನೆ ಆ ನಂತರದಲ್ಲಿ

ಎಲ್ಲ ಬಗೆಯ ರಾಜಕೀಯ ಬದ್ಧತೆಗಳೂ ಪ್ರಶ್ನೆಗೆ ಒಳಗಾಗಬೇಕು, ಹಾಗೆಯೇ ಬಲಗೊಳ್ಳಬೇಕು. ನವೀಕರಣಕ್ಕೆ ಒಳಗಾಗಬೇಕು ಮತ್ತು ಬೇರೆ ಬೇರೆ ಕಾಲಗಳಿಗೆ ಅವು ಅರ್ಥಪೂರ್ಣವಾಗುವಂತೆ ಮಾಡಬೇಕು. ಈ ಹೊತ್ತಿನಲ್ಲಿ ಜನಗಳನ್ನು ಪ್ರತ್ಯೇಕಿಸುವಂಥ ಗೋಡೆಗಳು ಹೇಗೆ ಎದ್ದುಬರುತ್ತಿವೆ ಎಂಬ ಬಗ್ಗೆ ಚರ್ಚಿಸುವುದು ಬಹುಮುಖ್ಯ, ಮಾತ್ರವಲ್ಲ, ಕೆಲವು ಜನರನ್ನು 'ಒಳ'ಗೂ ಕೆಲವರನ್ನು 'ಹೊರ'ಗೂ ಇಡಲು ಅವು ಯತ್ನಿಸುವುದರ ಬಗ್ಗೆಯೂ ಚರ್ಚೆಯಾಗಬೇಕು.

–ಗೀತಾ ಹರಿಹರನ್

(ಸ್ತ್ರೀವಾದಿ ಆಂಗ್ಲ ಲೇಖಕಿ ಮತ್ತು ಪತ್ರಕರ್ತೆ)

ಕಾಣಿಸುವುದನ್ನು, ರೋಮನ್ನರು ಪತಿವ್ರತೆಯನ್ನು ದೇವತಾಸ್ಥಾನದಲ್ಲಿ ಕಾಣುವುದನ್ನೂ, ರಶ್ಯನರು ಪಾತಿವ್ರತ್ಯಕ್ಕೆ ಅತಿ ಮಹತ್ವವನ್ನು ನೀಡುವುದನ್ನು, ಚೀನೀಯರು ಪತಿವ್ರತೆಯರಿಗೆ ಸ್ಮಾರಕಗಳನ್ನು ನಿರ್ಮಿಸುವುದನ್ನು ಈ ಭಾಗದಲ್ಲಿ ದಾಖಲಿಸುತ್ತಾರೆ. ಕ್ರೈಸ್ತಮತವೂ ಪಾತಿವ್ರತ್ಯದ ಬಗ್ಗೆ ಅಪಾರ ನಂಬಿಕೆಯನ್ನು ತಳೆದಿರುವುದನ್ನು ಗುರುತಿಸುತ್ತಾರೆ.

ಜಗತ್ತಿನಾದ್ಯಂತ ಈ ಪಾತಿವ್ರತ್ಯವನ್ನು ಧರ್ಮ ಎಂದು ಪರಿಗಣಿಸುವುದಕ್ಕೂ ಏಕಪತ್ನಿತ್ವ ಜಾರಿಗೆ ಬರುವುದಕ್ಕೂ ಇರುವ ಸಂಬಂಧವನ್ನೂ ಇಲ್ಲಿ ಪರಿಶೀಲಿಸಲಾಗಿದೆ. ಏಕಪತ್ನಿತ್ವ ಹೆಣ್ಣಿಗೆ ವರವಾದಂತೆ ಕೆಲವೊಮ್ಮೆ ಅವಳ ಮೇಲೆ ಅತಿ ನಿರ್ಬಂಧ ಹೇರಲೂ ಕಾರಣವಾಯಿತು. ಇದೇ ಸಂದರ್ಭದಲ್ಲಿ ಗಂಡಿಗೆ ಪಾತಿವ್ರತ್ಯದ ಮಾನದಂಡಗಳೇ ಇರಲಿಲ್ಲ. ಹೆಣ್ಣು ತನ್ನ ಪಾತಿವ್ರತ್ಯವನ್ನು ಸಾಬೀತು ಮಾಡಬೇಕಾಗಿ ಬಂದಾಗ ಸಂಕಟಕ್ಕೆ ತುತ್ತಾಗುವ ಸಂದರ್ಭಗಳು ಹೆಚ್ಚಿದವು.

ಆದರೆ, ಈ ಕುರಿತು ಜಿಜ್ಞಾಸೆಗಳು ಆ ಕಾಲದಲ್ಲಿ ಎಲ್ಲೂ ಕಂಡು ಬರುವುದಿಲ್ಲ. ಹೆಚ್ಚಾಗಿ ಹೆಣ್ಣುಮಕ್ಕಳು ಇದನ್ನು ಮನಸಾ ಸ್ವೀಕರಿಸಿ ಅನುಸರಿಸಲು ಪ್ರಯತ್ನಿಸುತ್ತಾರೆ. ಇದನ್ನೇ ತಮ್ಮ ಬಾಳಿನ ಗುರಿಯಾಗಿಸಿಕೊಳ್ಳುತ್ತಾರೆ. ಹೊನ್ನಮ್ಮನೂ ಇದೇ ಮಾದರಿಯ ಹೆಣ್ಣು. ಪಾತಿವ್ರತ್ಯವನ್ನು ಒಪ್ಪಿಕೊಳ್ಳುವುದು ಸಮಸ್ಯೆಯೂ ಅಲ್ಲ, ಅದರ ಕುರಿತು ತಕರಾರೂ ಇರುವುದಿಲ್ಲ. ಆದರೆ, ತಾನೊಬ್ಬ ಪತಿವ್ರತೆ ಎಂಬುದನ್ನು ಪ್ರದರ್ಶಿಸುವ ಅನಿವಾರ್ಯತೆ ಒದಗುವುದು ದೊಡ್ಡ ತೊಡಕಿನ ವಿಷಯ. ಹೀಗಾಗಿಯೇ, ಪತಿವ್ರತೆ ಹೇಗಿರಬೇಕು ಎಂಬ ನೀತಿಪಾಠಗಳು ಹುಟ್ಟಿಕೊಳ್ಳುತ್ತವೆ. ಆ ಕಾರಣಕ್ಕೇ 'ಹದಿಬದೆಯ ಧರ್ಮ' ದಂತಹ ಕೃತಿಗಳು ಹುಟ್ಟಿಕೊಳ್ಳುತ್ತವೆ.

ಸಂಶೋಧಕರು ಈ ವಿಷಯದಲ್ಲಿ ಹೆಚ್ಚಿನ ಚರ್ಚೆಗೆ ಹೋಗದೆ, ಹೊನ್ನಮ್ಮನಿಗೆ ಪಾತಿವ್ರತ್ಯ ಎನ್ನುವುದು ಬಾಳಿನ ಉಸಿರಾಗಿತ್ತು. ಅದಕ್ಕೇ ಆಕೆ ಆ ಕೃತಿ ರಚಿಸಿದಳು ಎಂಬ ತೀರ್ಮಾನಕ್ಕೆ ಬರುತ್ತಾರೆ.

ಮೂರನೆಯ ಹೆಜ್ಜೆಯಲ್ಲಿ ಹೊನ್ನಮ್ಮನ ಪರಿಸರ ಮತ್ತು ಜೀವನ ಚರಿತ್ರೆಯನ್ನು ಕಟ್ಟಿಕೊಡುತ್ತಾರೆ. ಹೊನ್ನಮ್ಮ ಮೈಸೂರಿನ ಪ್ರಸಿದ್ಧ ದೊರೆ ಚಿಕ್ಕದೇವರಾಯನ ರಾಣಿವಾಸದಲ್ಲಿದ್ದ ಊಳಿಗದ ಹೆಣ್ಣು. ಈಕೆ ದಲಿತ ಕುಟುಂಬದಲ್ಲಿ ಜನಿಸಿದಳು. ಚಿಕ್ಕದೇವರಾಯನ ಪಟ್ಟದ ಮಹಿಷಿಯಾದ ಯಳಂದೂರು ದೇವರಾಜಮ್ಮಣ್ಣಿಯ ತವರೂರಿನವಳು ಈಕೆ. ತನ್ನ ಮದುವೆಯ ದಿಬ್ಬಣದ ಜೊತೆಗೇ ಹೊನ್ನಮ್ಮನನ್ನೂ ಕರೆದು ತಂದಳಂತೆ. ಚಿಕ್ಕದೇವರಾಯನ ಆಸ್ಥಾನದಲ್ಲಿ ಅನೇಕ ವಿದ್ವಾಂಸರನ್ನೂ, ಕವಿಗಳನ್ನೂ ಕಾಣಬಹುದು. ತಿರುಮಲಾರ್ಯ, ಸಿಂಗರಾರ್ಯ, ಚಿಕ್ಕುಪಾಧ್ಯಾಯ, ತಿಮ್ಮಕವಿ ಮೊದಲಾದವರು ಇವರಲ್ಲಿ ಪ್ರಮುಖರು. ಇವರೊಂದಿಗೆ ಶೃಂಗಾರಮ್ಮ ಮತ್ತು ಹೊನ್ನಮ್ಮರ ಹೆಸರೂ ಇದೆ. ಹೊನ್ನಮ್ಮನ ಪ್ರತಿಭೆಯನ್ನು ಮೊದಲು ಗುರುತಿಸಿದವರು ಆಳಸಿಂಗಾರ್ಯರು ಎಂದು ನಂಬಲಾಗಿದೆ. ಇವರ ಮುಖಾಂತರ ರಾಣಿಗೆ ವಿಷಯ ತಿಳಿದು ರಾಣಿಯ ಪ್ರೋತ್ಸಾಹದಿಂದ ಬರೆಯಲಾರಂಭಿಸಿದ ಹೊನ್ನಮ್ಮ, ಆನಂತರ ರಾಣಿಯ ಮುಖಾಂತರ ರಾಜನಿಗೂ ತಿಳಿದು ಆತನೂ ಪ್ರೋತ್ಸಾಹ ನೀಡಿ ಕೃತಿಯೊಂದನ್ನು ರಚಿಸಲು ಹೇಳಿದನೆಂದೂ ಅದರಂತೆ ತಾನು ಈ ಕೃತಿ ಬರೆದುದಾಗಿಯೂ ಹೊನ್ನಮ್ಮನೇ ಹೇಳಿಕೊಂಡಿದ್ದಾಳೆ. ಆಕೆ ಸಂಚಿಯ ಊಳಿಗವನ್ನು ಮಾಡಿಕೊಂಡಿದ್ದ ಕಾರಣ ಸಂಚಿ ಹೊನ್ನಮ್ಮ ಎಂದು ಪ್ರಸಿದ್ಧಳಾದಳು.

ಅಕ್ಷರಾಭ್ಯಾಸದ ಅವಕಾಶದಿಂದ ವಂಚಿತರಾದ ಎಷ್ಟೋ ಪ್ರತಿಭಾವಂತ ಮಹಿಳೆಯರು ಕೇವಲ ಮೌಖಿಕ ಸಾಹಿತ್ಯ ರಚಿಸಿ ಅನಾಮಧೇಯರಾಗಿ ಉಳಿದರು. ಈ ಹಿನ್ನೆಲೆಯಲ್ಲಿ ನೋಡಿದಾಗ, ಹೊನ್ನಮ್ಮನಿಗೆ ದೊರೆತ ಪರಿಸರ ಮತ್ತು ಪ್ರೋತ್ಸಾಹಕ್ಕಾಗಿ ರಾಜನನ್ನು ಅಭಿನಂದಿಸಬೇಕಾಗುತ್ತದೆ. ಇತರ ಕವಿಗಳ ಜೊತೆ ಸಮ ಸಮವಾಗಿ ಆಸ್ಥಾನದಲ್ಲೇ ಆಕೆಗೆ ಕಾವ್ಯಮಂಡನೆಗೆ ಅವಕಾಶ ಮಾಡಿಕೊಟ್ಟಿದ್ದೂ ಮುಖ್ಯ ವಿಚಾರ. ಆಕೆ ಈ ಅವಕಾಶವನ್ನು ಕೈಚೆಲ್ಲದೆ ಬಳಸಿಕೊಂಡಳು ಎಂಬುದೂ ಅಷ್ಟೇ ಮುಖ್ಯ. ಒಟ್ಟಿನಲ್ಲಿ ಈ ಅಧ್ಯಾಯದಲ್ಲಿ ಹೊನ್ನಮ್ಮನ ಪರಿಚಯದೊಂದಿಗೆ, ಅವಳ ಜೀವನದ ಇತರ ವಿಚಾರಗಳನ್ನೂ ಪರಿಚಯಿಸಲಾಗಿದೆ.

ನಾಲ್ಕನೆಯ ಅಧ್ಯಾಯವು 'ಹದಿಬದೆಯ ಧರ್ಮ' ಕಾವ್ಯವನ್ನು ವಿವೇಚನೆಗೆ ಒಳಪಡಿಸುತ್ತದೆ. ಮುಖ್ಯವಾಗಿ ಇಲ್ಲಿ ಕೃತಿಯ ವಸ್ತು, ಅಲಂಕಾರ, ರಸ, ಛಂದಸ್ಸುಗಳನ್ನು ಅಧ್ಯಯನ ಮಾಡಲಾಗಿದೆ. ಕೃತಿಯ ವಸ್ತುವನ್ನು ದೀರ್ಘವಾದ ವಿವರಣೆಗೆ ಒಳಪಡಿಸಲಾಗಿದೆ.

ಹೆಣ್ಣನ್ನೇ ಕೇಂದ್ರವಾಗಿಟ್ಟುಕೊಂಡ ಕೃತಿ ಇದಾಗಿದೆ. ಹೆಣ್ಣು ಮಕ್ಕಳ ಮೇಲೆ ಅತಿ ಕಕ್ಕುಲಾತಿ ಇರುವ ಹೊನ್ನಮ್ಮ ಆಕೆಯ ಬದುಕು ಹಸನಾಗಬೇಕು ಎಂಬ ಹೆಬ್ಬಯಕೆ ಉಳ್ಳವಳು. ಹೀಗಾಗಿ, ಕೃತಿಯುದ್ದಕ್ಕೂ ಅವಳು ಮೆದುಮಾತಿನಲ್ಲಿ, ಹೆಣ್ಣು ಮತ್ತು ಹೆಣ್ಣಿನ ಜೀವನದಲ್ಲಿ ಪ್ರವೇಶಿಸುವ ಎಲ್ಲರನ್ನೂ ನೀತಿಪಾಠಕ್ಕೆ ಒಳಪಡಿಸುತ್ತಾಳೆ. ಹೆಣ್ಣಿನ ಬದುಕಿನ ಸಂಧಿಕಾಲವಾದ ಮದುವೆಯು ಅವಳ ಭವಿಷ್ಯವನ್ನೇ ಹಸನು ಮಾಡುವ ಅಥವಾ ಹಾಳುಮಾಡುವ ನಿರ್ಣಾಯಕ ಘಟ್ಟವಾಗುವುದು ಹೊನ್ನಮ್ಮನನ್ನು ಅಂತರಾಳದಲ್ಲಿ ಕಲಕಿರಬೇಕು. ಹೀಗಾಗಿಯೇ ಆಕೆ ಅತಿ ಜಾಗರೂಕತೆ ವಹಿಸುವ ಮನಸ್ಥಿತಿಗೆ ಒಳಗಾಗಿರಬೇಕು. ಆದರೆ ಇದು ಕಾವ್ಯದಲ್ಲಿ ಎಲ್ಲೂ ವ್ಯಕ್ತವಾಗುವುದಿಲ್ಲ. ಕಾವ್ಯದಲ್ಲಿ ಆಕೆ ಪತಿವ್ರತಾಧರ್ಮದ ಕುರಿತು ಸಂಭ್ರಮ ತಾಳಿದಂತೆ ಭಾಸವಾಗುತ್ತದೆ.

ಕಾವ್ಯದುದ್ದಕ್ಕೂ ಆಕೆ ಯಾವ ಯಾವ ವಿಚಾರಗಳಿಗೆ ಮನ್ನಣೆ ಕೊಟ್ಟಿದ್ದಾಳೆ ಎಂಬುದನ್ನು ಮಧು ವೆಂಕಾರೆಡ್ಡಿಯವರು ಗುರುತಿಸುತ್ತಾರೆ. ಅವುಗಳು ಹೀಗಿವೆ:

1. ಹದಿಬದೆಯ ಧರ್ಮದಲ್ಲಿ ಹೆಣ್ಣಿನ ಹಿರಿಮೆ
2. ಹೆಣ್ಣಿನ ಹಿರಿಮೆ
3. ಹೆಣ್ಣು–ಗಂಡಿನಲ್ಲಿ ತಾರತಮ್ಯವಿಲ್ಲ
4. ಗಂಡಿಗಿಂತ ಹೆಣ್ಣೇ ಹೆಚ್ಚು
5. ಹೆಣ್ಣಿನ ಬಗೆಗೆ ಬಂಧುಗಳ ವರ್ತನೆ
6. ಹೆಣ್ಣನ್ನು ಎಂಥಾ ವರನಿಗೆ ಧಾರೆಯೆರೆಯಬೇಕು?

ಈ ಭಾಗಗಳಲ್ಲಿ ಹೆಣ್ಣಿಗೆ ಪೂರಕವಾದ ವಿಚಾರಗಳನ್ನು ಹೊನ್ನಮ್ಮ ಒತ್ತಿ ಹೇಳುವುದನ್ನು ಗುರುತಿಸಲಾಗಿದೆ. 'ಪೆಣ್ಣು ಪೆತ್ತುದರಿಂದ ಪೆಸರೆನಿಸಿತು ಮಿಗೆ/ ಬಣ್ಣವೇರಿತು ಪಾಲ್ಗಡಲು' ಎಂದು ಸಮುದ್ರ ಮಥನದ ವೇಳೆ ಲಕ್ಷ್ಮಿ ಹುಟ್ಟಿದ್ದನ್ನು ಸಮೀಕರಿಸಿ ಹೇಳುವ ಆಕೆಯ ಜಾಣ್ಮೆಯನ್ನು ಗುರುತಿಸಬಹುದು. ಹಾಗೆಯೇ, ಹೆಣ್ಣುಮಕ್ಕಳನ್ನು ದೂಷಿಸುವುದನ್ನು ಆಕೆ ಖಂಡಿಸುತ್ತಾಳೆ. 'ಪೆಣ್ಣ ನಿಂದಿಸಲೇಕೆ ಪೆರರು' ಎಂದು ಕೇಳುತ್ತಾಳೆ. 'ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು/ ಕಣ್ಣು ಕಾಣದ ಗಾವಿಲರು' ಎಂಬ ಆಕೆಯ ಮಾತು ಜನಪ್ರಿಯವಾದುದು.

'ಕುವರನಾದೊಡೆ ಬಂದ ಗುಣವೇನದರಿಂದ/ ಕುವರಿಯಾದೊಡೆ ಕುಂದೇನು?' ಎಂದು ಪ್ರಶ್ನಿಸುತ್ತಾ ಪುರುಷ ಶ್ರೇಷ್ಠತೆಯನ್ನು ನಿರಾಕರಿಸುವಲ್ಲಿ ಹೊನ್ನಮ್ಮನ ಖಚಿತತೆಯನ್ನು ಗುರುತಿಸಬಹುದು. 'ಕುಲಪುತ್ರಿ ಕುಲಕೋಟಿಯನು ದ್ಧರಿಸುವಳು' ಎಂಬಲ್ಲಿ ಅವಳ ಆತ್ಮವಿಶ್ವಾಸವನ್ನು ಗಮನಿಸಬಹುದು. ಆಕೆ ಇಷ್ಟೆಲ್ಲಾ ಹೇಳಿದರೂ, ಕೊನೆಗೂ ಹೆಣ್ಣು ಮಗಳನ್ನು ಒಳ್ಳೆಯ ವರನಿಗೆ ಮದುವೆ ಮಾಡಿಕೊಡಬೇಕೆಂಬುದಕ್ಕೇ ಹೆಚ್ಚು ಮಹತ್ವ ಕೊಡುತ್ತಾಳೆಯೇ ಹೊರತು, ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಕುರಿತು ಆಕೆ ಏನನ್ನೂ ಹೇಳುವುದಿಲ್ಲ ಎಂಬುದನ್ನು ಸಂಶೋಧಕಿ ಗಮನಿಸುತ್ತಾರೆ.

'ಪುಟ್ಟಿದ ಮನೆಯೊಳು ಪೋರಿ ಪುರುಳುಗೊಂಬ/ದಿಟ್ಟ ಗಂಡು ಗಳಂತಿರಲಿ' ಎಂದು ಹೆಣ್ಣುಮಕ್ಕಳ ಬಂಧು ಬಳಗಕ್ಕೆ ತಿಳಿಹೇಳುವಲ್ಲಿ ಹೊನ್ನಮ್ಮನ ಅಂತರಾಳ ತಿಳಿದುಬರುತ್ತದೆ. ಗಂಡಿನಂತೆ ಹೆಣ್ಣು ಬಾಳಬೇಕು ಎಂಬ ಈ ಆಸೆಯನ್ನು ಆಕೆ ಕೇವಲ ಹುಟ್ಟಿದ ಮನೆಗೆ ಸೀಮಿತ ಗೊಳಿಸುವುದರ ಅನಿವಾರ್ಯತೆಯನ್ನು ಅರ್ಥೈಸಿಕೊಳ್ಳ ಬಹುದಾದರೂ, ಆಕೆಗೆ ಈ ಆಸೆ ಹುಟ್ಟುತ್ತದಲ್ಲ ಎಂಬುದೂ ಹೊನ್ನಮ್ಮ ತನ್ನನ್ನು ತಾನೇ ಇದರಾಚೆಗೆ ಚಿಂತಿಸದಂತೆ ಹತ್ತಿಕ್ಕಿಕೊಳ್ಳುವುದನ್ನೂ ಗುರುತಿಸಬೇಕಾಗುತ್ತದೆ. ಮದುವೆಯ ನಂತರವೂ ತವರವರು ಆಕೆಯನ್ನು ಪ್ರೀತಿಯಿಂದ ನಡೆಸಿಕೊಳ್ಳಬೇಕು ಎಂದು ಹೊನ್ನಮ್ಮ ಒತ್ತಾಯಿಸುತ್ತಾಳೆ.

ವಿವಾಹ ನಂತರದ ಹೆಣ್ಣಿನ ಬಾಳಿನ ಗೋಳಿನ ಹಲವು ಮಗ್ಗುಲುಗಳ ಪರಿಚಯವಿದ್ದೂ ಹೊನ್ನಮ್ಮ ಆ ಕುರಿತು ಮಾತ ನಾಡುವುದಿಲ್ಲ. ಬದಲಿಗೆ ಒಳ್ಳೆಯ ಪತಿಯ ಸಂಸರ್ಗ ಹೆಣ್ಣಿನ ಬಾಳನ್ನು ಸುಖಕರವಾಗಿಸುತ್ತದೆ ಎಂಬ ಕಡೆಗೇ ಆಕೆಯ ಗಮನ. ಹೀಗಾಗಿ, ವರನ ಅರ್ಹತೆ ಆಕೆಗೆ ಮುಖ್ಯ ವಿಚಾರವಾಗುತ್ತದೆ. ಆದ್ದರಿಂದಲೇ ಎಂತಹ ವರನಿಗೆ ಹೆಣ್ಣನ್ನು ಕೊಡಬಾರದು ಎಂಬುದನ್ನು ಆಕೆ ಹೇಳುತ್ತಾಳೆ. ವ್ಯರ್ಥವಾಗಿ ತಿರುಗಾಡದ, ಕೆಟ್ಟ ಬುದ್ಧಿಯಿಲ್ಲದ, ವೈರವನ್ನು ಸಾಧಿಸದ, ಸುಮ್ಮ ಸುಮ್ಮನೆ ಬಯ್ಯದ, ಹಿಂಸೆಕೊಡದ, ಒಳ್ಳೆಯ ಕುಲದಲ್ಲಿ ಹುಟ್ಟಿದ ವರನಿಗೆ ಮಗಳನ್ನು ಕೊಡಬೇಕು ಎಂದು ಹೇಳುತ್ತಾ 'ಬೀಳುಗುವ'ರರಿಗೆ, 'ನಡೆವೆಣ'ಗಳಿಗೆ ಮಗಳನ್ನು ಕೊಡಬೇಡಿ ಎಂದು ಎಚ್ಚರಿಸುತ್ತಾಳೆ. (ಇಂದಿನ 'ವಿರುದ್ಧ ನೆಲೆಯ ಓದಿ'ನ ಮೂಲಕ ಇಂತಹ ಕುವರರಿಗೆ ಹೆಣ್ಣನ್ನು ಕೊಡುತ್ತಿದ್ದರು ಮತ್ತು ಆಕೆ ಬಸವಳಿಯುತ್ತಿದ್ದಳು ಎಂಬುದನ್ನೂ ವಿಶ್ಲೇಷಿಸಲು ಈ ಕೃತಿಯಿಂದ ಸಾಧ್ಯ. ಇಂತಹ ಅಧ್ಯಯನಕ್ಕೆ ಈ ಕೃತಿಯಲ್ಲಿ ಅಪಾರ ಅವಕಾಶವಿದೆ.)

ಹಾಗೆಯೇ, ಪತಿಯಾದವನು ಸತಿಯನ್ನು ಹೇಗೆ ನಡೆಸಿಕೊಳ್ಳಬೇಕು ಎಂಬ ಕುರಿತೂ ಹೊನ್ನಮ್ಮ ವಿವರಿಸುತ್ತಾಳೆ. ಪ್ರೀತಿಯಿಂದಲೇ ಹೆಣ್ಣನ್ನು ಒಲಿಸಿಕೊಳ್ಳಬೇಕು. ಮುಂದೆ ಅವಳಿಗೆ ಸಂಸಾರ ಭಾರವನ್ನು ವಹಿಸಿ ಕೊಡಬೇಕು. ತನ್ನ ಆಯ-ವ್ಯಯವನ್ನು ಅವಳೊಡನೆ ಚರ್ಚಿಸಬೇಕು. ಅವಳಿಗೆ ಹೊನ್ನು ರನ್ನಗಳನ್ನು ತಂದುಕೊಡಬೇಕು. ಅವಳನ್ನು ಗೌರವದಿಂದ ನಡೆಸಿಕೊಳ್ಳಬೇಕು ಎಂದೆಲ್ಲ ಆಕೆ ಗಂಡಿಗೂ ಉಪದೇಶ ವನ್ನಿತ್ತಿದ್ದಾಳೆ.

ಇಷ್ಟೆಲ್ಲ ಹೇಳಿದ್ದರೂ ಈ ಕೃತಿ ಪ್ರಧಾನವಾಗಿ ಹೇಳುವುದು ವಿವಾಹಿತ ಹೆಣ್ಣುಮಗಳ ಕರ್ತವ್ಯಗಳನ್ನು ಕುರಿತೇ. ಗಂಡಿನ ಆಜ್ಞಾನುವರ್ತಿ ಯಾಗುವುದರ ಕುರಿತೇ. ಗಂಡನು ಹೆತ್ತವರಿಗಿಂತ ಮಿಗಿಲಾದವನು. ಆತನ ಆಜ್ಞೆಗೆ ಎದುರಾಡದೆ, ಕೊಬ್ಬದೆ, ಕೂಗದೆ ತಲೆಬಾಗಿ ನಡೆದುಕೊಳ್ಳಬೇಕು. ಅತ್ತೆ-ಮಾವರ ಪಾದಸೇವೆ ಮಾಡಬೇಕು. ಸೊಸೆಯಾದವಳು ತನ್ನ ಅತ್ತಿಗೆ-ನಾದಿನಿಯರೊಂದಿಗೆ ಮನಸ್ಸನ್ನು ಹಂಚಿಕೊಳ್ಳುತ್ತ, ಸವತಿಯರೊಂದಿಗೂ ಹೊಂದಿಕೊಂಡು ಬಾಳಬೇಕು. ಹೊಟ್ಟೆಯಲ್ಲಿ ಹುಟ್ಟಿದ ಮಗನಾದರೂ ವಯಸ್ಸಿಗೆ ಬಂದಾಗ ಅವನನ್ನು ದೃಷ್ಟಿಸಿ ನೋಡಬಾರದು. ಮನೆಗೆಲಸವನ್ನೆಲ್ಲ ಗೊಣಗದೆ ಮಾಡಬೇಕು. ಹೀಗೆ ಅನೇಕ ಸಲಹೆಗಳನ್ನು ನೀಡುತ್ತಾಳೆ. ಇಲ್ಲೆಲ್ಲಾ ಆಕೆ ಬೇರೆಡೆ ತೋರಿದ ಆರೋಗ್ಯಕರ ನಿಲುವಿಗಿಂತ ಹರದಾರಿ ದೂರ ನಿಲ್ಲುತ್ತಾಳೆ. ಅವಳ ಈ ಸಾಂಪ್ರದಾಯಿಕ ನಿಲುವು ಸಹಜವಾಗಿಯೇ ಇಂತಹ ನಿಲುವಿಗೆ ಬದ್ಧವಾದ ಸಮಾಜದಲ್ಲಿ ಮಾನ್ಯತೆ ಪಡೆಯುತ್ತದೆ. ಹೊನ್ನಮ್ಮನ ಮನಸ್ಥಿತಿಯನ್ನು ಇಂದು ಬೇರೆ ಬೇರೆ ದೃಷ್ಟಿಗಳಿಂದ ವಿವೇಚಿಸಲು ಸಾಧ್ಯವಿದೆ. ಪುರುಷನ ಯಾಜಮಾನ್ಯ ನೆಲೆಗಳು ಚಿಂತನಾ ಕ್ರಮದೊಳಗೆ ಸೇರಿಕೊಂಡು ಆಳಲು ತೊಡಗುತ್ತವೆ. ಇದನ್ನು ಒಪ್ಪಿಕೊಳ್ಳುವ ಹೆಣ್ಣು ತನಗರಿವಿಲ್ಲದಂತೆಯೇ ತನ್ನ ಶೋಷಣೆಗೆ ತಾನೇ ಒಪ್ಪಿಗೆ ನೀಡುತ್ತಾಳೆ ಎನ್ನುವುದನ್ನು ಗಮನಿಸಬಹುದು. ಗ್ರಾಂಶಿಯ* ಚಿಂತನೆಗಳಿಂದ ಈ ಕೃತಿಯನ್ನು ಅಧ್ಯಯನ ಮಾಡಿದಲ್ಲಿ ಅದು ಬೇರೆಯೇ ನೋಟಗಳನ್ನು ತೆರೆದಿಡಬಲ್ಲುದು. ಪ್ರಸ್ತುತ ಸಂಶೋಧನೆಯಲ್ಲಿ ಹೊನ್ನಮ್ಮ ಯಾಕೆ ಹೀಗೆ ಮಾತನಾಡಿದ್ದಾಳೆ ಎಂಬುದಕ್ಕಿಂತ ಏನನ್ನು ಹೇಳಿದ್ದಾಳೆ ಎಂಬುದರ ಕಡೆಗೆ ಮಾತ್ರ ಗಮನಹರಿಸಲಾಗಿದೆ. ಹೀಗಾಗಿಯೇ ಸಂಶೋಧಕಿಯು, 'ಸಮಾನತೆ' ಎಂಬ ಪದ ಮೋಹಕ. ಆದರೆ ಅದರ ಪರಿಣಾಮ ಮಾತ್ರ ಅಪಾಯಕಾರಿ ಎಂಬ ನಂಬಿಕೆ ಹೊನ್ನಮ್ಮನದು ಎಂಬ ಸರಳ ತೀರ್ಮಾನಕ್ಕೆ ಬರುತ್ತಾರೆ.

ಹೀಗೆ ಕಾವ್ಯವಸ್ತುವನ್ನು ದೀರ್ಘವಾಗಿ ವಿವೇಚಿಸುವ ಈ ಅಧ್ಯಾಯದ ಕೊನೆಯಲ್ಲಿ ಈ ಕಾವ್ಯದಲ್ಲಿ ಬಳಕೆಯಾದ ಛಂದಸ್ಸು, ರಸ, ವರ್ಣನೆಗಳು ಇತ್ಯಾದಿಗಳ ವಿವರವನ್ನೂ ನೀಡಲಾಗಿದೆ. ಹದಿಬದೆಯ ಧರ್ಮವು ಸಾಂಗತ್ಯ ಕಾವ್ಯವಾಗಿದ್ದು, ಯಾವುದೇ ನಿಶ್ಚಿತ ಕಥೆಯನ್ನು ಹೊಂದಿಲ್ಲ. ನೀತಿ-ಉಪದೇಶಕ್ಕೆ ಹೆಚ್ಚಿನ ಮಹತ್ವ ನೀಡಿದ ಒಂದು ವಿಶಿಷ್ಟ ಕಾವ್ಯವೂ ಹೌದು. ಹಾಗೆಯೇ ಆಕೆ ಇನ್ನೂ ಕೆಲವು ಸಂಪ್ರದಾಯಗಳನ್ನು ಮುರಿದಿದ್ದಾಳೆ. ಹಿಂದಿನವರಂತೆ ಅಗತ್ಯ ಇದ್ದರೂ/ಇಲ್ಲದಿದ್ದರೂ ಹದಿನೆಂಟು ವರ್ಣನೆಗಳನ್ನು ಮಾಡಬೇಕೆಂಬ ಕಟ್ಟಿಗೆ ಆಕೆ ಒಳಗಾಗಿಲ್ಲ. ಅನಗತ್ಯವಾಗಿ ಹದಿನೆಂಟು ವರ್ಣನೆ ಮಾಡುವ ಬವಣೆ ಬೇಕಾಗಿಲ್ಲ ಎಂದು ನೇರವಾಗಿ ಹೇಳಿಕೊಂಡಿದ್ದಾಳೆ. ಎಲ್ಲೆಲ್ಲಿ ಬೇಕೋ ಅಲ್ಲಲ್ಲಿ ಸೂಕ್ತ ವರ್ಣನೆಗಳನ್ನು ರೂಪಕ, ಉಪಮೆ, ಅಲಂಕಾರಗಳನ್ನು, ನುಡಿಗಟ್ಟುಗಳನ್ನು, ಗಾದೆ ಮಾತುಗಳನ್ನು ಬಳಸಿ ಕೊಳ್ಳುತ್ತಾಳೆ. ಸಂಸ್ಕೃತಕ್ಕಿಂತ ಹೆಚ್ಚಾಗಿ ಸರಳ ಕನ್ನಡವನ್ನು ಉಪಯೋಗಿಸುತ್ತಾಳೆ. ಭಕ್ತಿ ಮತ್ತು ಶೃಂಗಾರ ರಸಗಳನ್ನು ಪ್ರಧಾನವಾಗಿ ಅಭಿವ್ಯಕ್ತಿಸಿದ್ದಾಳೆ. ಆದಿ ಪ್ರಾಸವನ್ನು ಬಿಡದೆ ಬಳಸಿ, ಮಧ್ಯ ಮತ್ತು ಅಂತ್ಯ ಪ್ರಾಸಗಳನ್ನು ಹದವಾಗಿ ಬಳಸಿಕೊಳ್ಳುತ್ತಾಳೆ. ಈ ಕುರಿತು ಉದಾಹರಣೆಗಳೊಂದಿಗೆ ವಿವರವಾಗಿ ಸಂಶೋಧಕಿ ಮಾಹಿತಿ ನೀಡಿದ್ದಾರೆ.

ಐದನೆಯ ಅಧ್ಯಾಯ **'ಹದಿಬದೆಯ ಧರ್ಮ: ಸಂಸ್ಕೃತಿಯ ಆಕರ'** ಎಂಬ ಶೀರ್ಷಿಕೆಯಡಿಯಲ್ಲಿದೆ. ಹದಿಬದೆಯ ಧರ್ಮದಲ್ಲಿ ವ್ಯಕ್ತವಾಗಿರುವ ನಂಬಿಕೆಗಳನ್ನು ಆಧರಿಸಿಕೊಂಡು ಈ ಅಧ್ಯಾಯವನ್ನು ರೂಪಿಸಲಾಗಿದೆ. ಪತಿಭಕ್ತಿ, ಪತಿವ್ರತೆಯ ಮಹಿಮೆ, ಪತಿಯೊಡನೆ ಸತಿ ನಡೆದುಕೊಳ್ಳುತ್ತಿದ್ದ ರೀತಿ, ಪತಿ ಸತಿಯೊಂದಿಗೆ ವರ್ತಿಸುತ್ತಿದ್ದ ರೀತಿ, ಸ್ತ್ರೀ ಸಂಸ್ಕೃತಿಗೆ ಸಂಬಂಧಿಸಿದ ಅಂಶಗಳು – ಮೊದಲಾದವನ್ನು ಇಲ್ಲಿ ಗಮನಿಸಲಾಗಿದೆ. ಈಗಾಗಲೇ ಗಮನಿಸಿರುವಂತೆ ಇಂತಹ ವಿಚಾರಗಳಲ್ಲಿ ಹೊನ್ನಮ್ಮನದು ಸಾಂಪ್ರದಾಯಿಕ ನಿಲುವು. "ಹೊನ್ನಮ್ಮ ತನ್ನ ಕಾವ್ಯದಲ್ಲಿ ಹೇಳಿದುದು ಪರಂಪರಾಗತ ಸಂಸ್ಕೃತಿಯನ್ನು – ತನ್ನ ಕಾಲದ ಸಮಾಜದಲ್ಲಿದ್ದ ಸಹಜವಾದ ಸಂಗತಿಗಳನ್ನಾಧರಿಸಿದ ಸಂಸ್ಕೃತಿಯನ್ನು. ಅದರಲ್ಲಿಯೂ ಹೊನ್ನಮ್ಮನ ದೃಷ್ಟಿ ಕೇಂದ್ರೀಕೃತವಾದುದು ಸಾಧ್ವಿ ಸತಿಯ ಜೀವನದ ಮೇಲೆ. ಅದರಿಂದ ಅವಳ ವಿಚಾರಗಳೆಲ್ಲ ಸತಿಯ ನಡೆ-ನುಡಿ, ಆಚಾರ-ವಿಚಾರ, ಜೀವನ ವಿಧಾನವನ್ನು ಅನುಸರಿಸಿ ಹರಿಯುತ್ತವೆ." ಎಂದು ಲೇಖಕಿ ಅಭಿಪ್ರಾಯ ಪಡುತ್ತಾರೆ.

ಆರನೆಯ ಅಧ್ಯಾಯವು ಹೊನ್ನಮ್ಮನ ಕಾವ್ಯ ವಸ್ತುವಿನ ಪ್ರಸ್ತುತತೆಯನ್ನು "ಹದಿಬದೆಯ ಧರ್ಮ: ಅಂದು-ಇಂದು" ಎಂಬ ತಲೆಬರಹದಲ್ಲಿ ವಿಮರ್ಶೆಗೆ ಒಳಪಡಿಸಿದೆ. ಈ ಕಾವ್ಯದಲ್ಲಿ ವಿವೇಚನೆಗೆ ಒಳಪಟ್ಟ ಎಷ್ಟೋ ವಿಚಾರಗಳು ಇಂದಿನ ಕಾಲಕ್ಕೆ ಪ್ರಸ್ತುತವೆನಿಸುವುದಿಲ್ಲ.

---

* ಗ್ರಾಂಶಿ ಇಟಲಿಯ ಲೇಖಕ, ರಾಜಕಾರಣಿ, ರಾಜಕೀಯ ಸಿದ್ಧಾಂತಕಾರ, ಭಾಷಾಶಾಸ್ತ್ರಜ್ಞ ಮತ್ತು ತತ್ತ್ವಶಾಸ್ತ್ರಜ್ಞ, ಸಾಂಸ್ಕೃತಿಕ ಯಾಜಮಾನ್ಯದ ಬಗ್ಗೆ ಪ್ರಖರವಾದ ಸ್ವೋಪಜ್ಞ ಚಿಂತನೆಗೆ ಖ್ಯಾತನಾದವನು.

'ಒಂದು ಕಾಲಲ್ಲಿ ಒದ್ದರೆ ಆತನ ಇನ್ನೊಂದು ಕಾಲಿಗೆ ಬಿದ್ದು ಅವನ ಕ್ಷಮೆ ಕೇಳಬೇಕು' ಎಂಬ ಅಭಿಮಾನ ರಹಿತ ಅವಮಾನದ ಸ್ಥಿತಿಯನ್ನು ಯಾರೂ ಒಪ್ಪಲು ಸಾಧ್ಯವಿಲ್ಲ. ಇಂತಹ ಅನೇಕ ವಿಚಾರಗಳು ಈ ಕಾವ್ಯದಲ್ಲಿ ಬರುತ್ತವೆ. ಇವುಗಳನ್ನೆಲ್ಲಾ ಕೂಲಂಕಷವಾಗಿ ಚರ್ಚಿಸುವ ಲೇಖಕಿ ಅದರ ಅಪ್ರಸ್ತುತತೆಯನ್ನೂ ಒಪ್ಪಿಕೊಳ್ಳುತ್ತಾರೆ.

ಹಾಗೆಯೇ ಹೊನ್ನಮ್ಮ ಎತ್ತುವ ಕೆಲವು ಮುಖ್ಯ ಪ್ರಶ್ನೆಗಳು ಇಂದಿಗೂ ಪ್ರಸ್ತುತವಾಗಿರುವುದನ್ನೂ ಪ್ರಸ್ತಾಪಿಸುತ್ತಾರೆ. ಮುಖ್ಯವಾಗಿ ಗಂಡು-ಹೆಣ್ಣು ಎಂಬ ಭೇದ ಮಾಡಬಾರದು ಎಂದು ಹೇಳುವ ಕುವರನಾದರೆ ಗುಣವೇನು? ಕುವರಿಯಾದರೆ ಕುಂದೇನು? ಮೊದಲಾದ ಆಕೆಯ ಮಾತುಗಳು ಇಂದಿಗೂ ಪ್ರಸ್ತುತವಾಗಿರುವುದನ್ನು ಗುರುತಿಸುತ್ತಾರೆ.

ನಂತರದ ಅಧ್ಯಾಯದಲ್ಲಿ ಕನ್ನಡ ಕವಯಿತ್ರಿಯರಲ್ಲಿ ಹೊನ್ನಮ್ಮನ ಸ್ಥಾನ ನಿರ್ದೇಶನ ಮಾಡುತ್ತಾರೆ. ಕನ್ನಡದ ಬೆರಳೆಣಿಕೆಯ ಕವಯಿತ್ರಿಯರಲ್ಲಿ ಆಕೆ ಮೊದಲ ಮೂರು-ನಾಲ್ಕು ಸ್ಥಾನಗಳೊಳಗೇ ನಿಲ್ಲುವ ಯೋಗ್ಯತೆ ಪಡೆದಿದ್ದಾಳೆ ಎಂಬುದು ಸಂಶೋಧಕಿಯ ನಿಲುವು.

ಒಟ್ಟಾರೆಯಾಗಿ ಈ ಸಂಶೋಧನಾ ಕೃತಿಯು ಕೃತಿಕೇಂದ್ರಿತ ಓದನ್ನೇ ಪ್ರಧಾನವಾಗಿಸಿಕೊಂಡಿದೆ. ಕೃತಿಯನ್ನು ಅರ್ಥೈಸಿಕೊಳ್ಳಲು, ವಿವೇಚಿಸಲು ಕನ್ನಡದ ಕೃತಿಗಳೊಂದಿಗೆ, ಸಂಸ್ಕೃತ ಮತ್ತು ಇಂಗ್ಲಿಷ್ ಆಕರಗಳನ್ನು ಪೂರಕವಾಗಿ ಬಳಸಿಕೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಹಲವು ಮಾಹಿತಿಗಳನ್ನು ಈ ಗ್ರಂಥ ನೀಡುತ್ತದೆ. ಆದರೆ, ಇಂಗ್ಲಿಷ್ ಮೂಲದ ಚಿಂತನೆಗಳನ್ನು ಹದಿಬದೆಯ ಧರ್ಮ ಕೃತಿಯೊಂದಿಗೆ ಬೆಸೆದು ಓದುವ ಕ್ರಮ ಇಲ್ಲಿ ಕಂಡು ಬರುವುದಿಲ್ಲ. ಅದಕ್ಕೆ ಮುಖ್ಯ ಕಾರಣ ಆಧುನಿಕ ಸಿದ್ಧಾಂತ ಚಿಂತನೆಗಳ ಮೂಲಕ ಪ್ರಾಚೀನ ಕೃತಿಗಳನ್ನು ಅಧ್ಯಯನ ಮಾಡಬಾರದು ಎಂಬ ನಂಬಿಕೆಗೆ ಸಂಶೋಧಕಿ ಒಳಪಟ್ಟಿರುವುದೇ ಆಗಿದೆ. ಇಷ್ಟಾಗಿಯೂ ಇಂದಿನ ಸಮಾಜವಾದಿ, ಸಮತಾವಾದಿ ಸಿದ್ಧಾಂತಗಳ ಉಲ್ಲೇಖವನ್ನು ಸಂಶೋಧಕಿ ಮಾಡುತ್ತಾರೆ. ಈ ಕುರಿತಾದ ಗೊಂದಲ ನೀಗಿಕೊಳ್ಳಲು ಸಾಧ್ಯವಾಗಿದ್ದರೆ ಈ ಸಂಶೋಧನೆಯು ಇನ್ನಷ್ಟು ಮಹತ್ವ ಪಡೆದುಕೊಳ್ಳುತ್ತಿತ್ತು.

ಸಂಶೋಧನೆಗೆ ಲೇಖಕಿ ಬಳಸಿಕೊಂಡಿರುವ ಭಾಷೆ ಸರಳವಾಗಿದ್ದು ಸ್ಪಷ್ಟವಾಗಿದೆ. ಸರಳ ಶೈಲಿಯು ಓದುಗರನ್ನು ನೇರವಾಗಿ ತಲುಪಲು ಶಕ್ತವಾಗಿದೆ. ಸಂಶೋಧಕರು ಅಲ್ಲಲ್ಲಿ ತಮ್ಮದೇ ಆದ ವಿಮರ್ಶೆಯ ಒಳನೋಟಗಳನ್ನು ನೀಡುತ್ತಾರೆ. ಆದರೆ, ಹೀಗೆ ನೀಡುವಾಗ ಹೊನ್ನಮ್ಮನನ್ನು ಮತ್ತು ಕೃತಿಯನ್ನು ಸಮರ್ಥಿಸುವುದರ ಕಡೆಗೇ ಅವರ ಗಮನ ಹೆಚ್ಚಾಗಿರುವುದು ಕಾಣುತ್ತದೆ. ಕೃತಿಯ ಪ್ರಸ್ತುತತೆಯನ್ನು ವಿವೇಚಿಸುವ ಸಂದರ್ಭದಲ್ಲಿ ಮಾತ್ರ ಕೃತಿಯ ಮಿತಿಯನ್ನು ಕುರಿತು ವಸ್ತುನಿಷ್ಠವಾಗಿ ಚರ್ಚಿಸಿದ್ದಾರೆ.

ಕನ್ನಡ ಸಾಹಿತ್ಯ ಚರಿತ್ರೆಯು ಮಹಿಳೆಯರ ಕೃತಿಗಳನ್ನು ನಿರ್ಲಕ್ಷಿಸುತ್ತಾ ಬಂದ ಇತಿಹಾಸ ನಮ್ಮ ಕಣ್ಮುಂದಿದೆ. ಈ ಹಿನ್ನೆಲೆಯಲ್ಲಿ ಸಂಶೋಧಕರು ಹೊನ್ನಮ್ಮನ ಕೃತಿಯನ್ನು ಸಂಪೂರ್ಣ ಅಧ್ಯಯನಕ್ಕೆ ಒಳಪಡಿಸಿರುವುದು ಸ್ತುತ್ಯರ್ಹ ಸಂಗತಿ. ಇಂತಹ ಅಧ್ಯಯನವು ಹೆಣ್ಣುಮಕ್ಕಳ ಬರಹಕ್ಕೆ ಒದಗುವ ತೊಂದರೆಗಳನ್ನೂ, ಸಾಧ್ಯತೆಗಳನ್ನೂ ಅರಿಯಲು ಸಹಕಾರಿ. ಹೊನ್ನಮ್ಮನ ಹದಿಬದೆಯ ಧರ್ಮ ಕಾವ್ಯದ ಸ್ವರೂಪವನ್ನು ನಿರ್ಧರಿಸುವ ಬಾಹ್ಯ ಮತ್ತು ಆಂತರಿಕ ಸಂಗತಿಗಳನ್ನು ಅರಿಯಲು ಕೂಡ ಇಂತಹ ಅಧ್ಯಯನಗಳು ನೆರವಾಗಬಲ್ಲುದು.

ಈ ಅಧ್ಯಯನವು ಇನ್ನೊಂದು ಅಧ್ಯಯನಕ್ಕೆ ಪ್ರೇರಣೆಯಾಗುವುದೂ ಸಾಧ್ಯ. ಈ ಅಧ್ಯಯನವು ವಿವರಣಾತ್ಮಕ ಅಧ್ಯಯನವಾಗಿದೆ. ಇದನ್ನೇ ವಿಶ್ಲೇಷಣಾತ್ಮಕ ಅಧ್ಯಯನಕ್ಕೆ ಬಳಸಿಕೊಳ್ಳಲು ಅವಕಾಶವಿದೆ. ಹೆಣ್ಣಿಗೆ ಹೇಗೆ ಮನೆಯೊಳಗಿನ ಜಗತ್ತನ್ನೇ ನಿರ್ಬಂಧಿಸಲಾಯಿತು, ಹೇಗೆ ಆ ಮನೆಯೊಳಗಿನ ಜಗತ್ತೇ ತನ್ನ ಜಗತ್ತೆಂದು ಆಕೆಯೇ ಒಪ್ಪಿಕೊಂಡು ಬಿಡುವಂತೆ ಮಾಡಲಾಯಿತು, ಮತ್ತು ಮುಂದೆ ಈ ಮನೆಯೊಳಗಿನ ಅನುಭವ ಲೋಕವನ್ನು ಒಂದು ಸಾಮಾನ್ಯ ಅನುಭವ ಎಂದು ಹೇಗೆ ಅಮಾನ್ಯ ಗೊಳಿಸಲಾಯಿತು ಎಂಬುದನ್ನೂ, ಈ ಅನುಭವದ ಕಿರು ವ್ಯಾಪ್ತಿಯೊಳಗೆ ಅವಳಾದರೂ ಹೇಗೆ ತತ್ವಜ್ಞಳೋ, ಪಂಡಿತೆಯೋ, ಆಗಲು ಸಾಧ್ಯವಾಗದೆ ಹೋಯಿತು ಮತ್ತು ಇದರಿಂದಾಗಿಯೇ ಇವಳು ರಚಿಸುವ ಸಾಹಿತ್ಯ ಪುರುಷ ಸಾಹಿತ್ಯವನ್ನು ಸರಿಗಟ್ಟಲಾಗದು ಎಂದು ದೂಷಿಸಲಾಗುತ್ತದೆ ಎಂಬುದನ್ನು ಹೊನ್ನಮ್ಮನ ಸಂದರ್ಭದಲ್ಲೂ ಅಧ್ಯಯನ ಮಾಡಲು ಅವಕಾಶವಿದೆ. ಗಂಡಿನ ಅನುಭವ 'ವೀರಕಾವ್ಯ'ದ ಮನ್ನಣೆ ಪಡೆಯುತ್ತದೆ. ಅದೇ ಹೊನ್ನಮ್ಮ ತನ್ನ ಸೀಮಿತ ಅನುಭವದಲ್ಲಿ ಕಾವ್ಯ ಬರೆಯಬೇಕಾದಾಗ, ಗಂಡು ಮೆಚ್ಚಿ ತಲೆದೂಗಬಹುದಾದ ವಸ್ತುವನ್ನೇ ಆರಿಸಿಕೊಳ್ಳುತ್ತಾಳೆ. ಇಂತಹ ಒತ್ತಡಗಳೂ ಮಹಿಳೆಯ ಕಾವ್ಯ ಸ್ವರೂಪವನ್ನು ನಿರ್ಧರಿಸುತ್ತವೆ ಎಂಬುದನ್ನು ಅಧ್ಯಯನ ಮಾಡಲೂ ಅವಕಾಶ ಇದೆ. ಹೀಗೆ ಈ ಸಂಶೋಧನಾ ಪ್ರಬಂಧವು ಮೊದಲ ಹೆಜ್ಜೆ ಇಟ್ಟಿದೆ. ಹಾಗೆಯೇ, ಅದನ್ನು ವಿಸ್ತರಿಸುವ ಅವಕಾಶವನ್ನು ಮುಂದೆ ಅಧ್ಯಯನ ಮಾಡುವವರಿಗೆ ತೆರೆದಿಟ್ಟಿದೆ. ❑

ಮಹಿಳೆಯರು ಎದುರಿಸುವ ಸಮಸ್ಯೆಗಳನ್ನು ಪುರುಷರು ಎದುರಿಸುವುದಿಲ್ಲ. ಮಹಿಳೆಯರು ಕುಟುಂಬ ಜವಾಬ್ದಾರಿ ಹಾಗೂ ಹೊಣೆಗಾರಿಕೆಯನ್ನು, ಹೊರಬೇಕಾಗುತ್ತದೆ. ಇವುಗಳನ್ನು ಸದಾ ನೆನಪಿಸಿಕೊಳ್ಳಲೇಬೇಕಾಗುತ್ತದೆ. ಮನೆಗೆ ಅತಿಥಿಗಳು ಬಂದಾಗ ಆತಿಥ್ಯವನ್ನು ನೀಡಲೇಬೇಕಾಗುತ್ತದೆ. ಆದರೆ ಪುರುಷ ಲೇಖಕನಾದರೆ, ಆತ ಬರೆಯುತ್ತಿರುತ್ತಾನೆ. ಆತನಿಗೆ ತೊಂದರೆ ಕೊಡಬೇಡಿ ಎಂದು ಸಾಮಾನ್ಯವಾಗಿ ಹೇಳುತ್ತಾರೆ. ಆದರೆ ಮಹಿಳೆಯರ ಬಗ್ಗೆ ಈ ಧೋರಣೆ ಇರುವುದಿಲ್ಲ. ಅತಿಥಿಗಳನ್ನು ಒಂದು ನಿರ್ದಿಷ್ಟ ಸಮಯದಲ್ಲಿ ಮನೆಗೆ ಬರುವಂತೆ ಹೇಳಲು ಸಾಧ್ಯವಿಲ್ಲ. ಸದ್ಯ ಅವರ ಮನೆಗೆಹೋಗುವುದೇ ಬೇಡ ಎಂದು ಭಾವಿಸುತ್ತಾರೆ. ಅದೇ ರೀತಿಯಲ್ಲಿ ಇಂದು ನಾನು ಅಡಿಗೆ ಮಾಡುವುದಿಲ್ಲ. ದಿನವೆಲ್ಲಾ ಬರೆಯುತ್ತೇನೆ ಎಂದು ಹೇಳಲು ಸಾಧ್ಯವಿಲ್ಲ. ಇಂತಹ ಸಂದರ್ಭದಲ್ಲಿ ಬರೆಯಲೂ ಸಾಧ್ಯವಾಗುವುದಿಲ್ಲ. ನನ್ನ ಬರವಣಿಗೆಗೆ ಸಂಬಂಧಪಟ್ಟ ಸಭೆ, ಸಮಾರಂಭಗಳಿಗೂ ಹೋಗಬೇಕೆಂದರೆ ಮನೆಯ ಎಲ್ಲಾ ಜವಾಬ್ದಾರಿಗಳು ನಿರ್ವಹಿಸಿ ಹೋಗಬೇಕಾಗುತ್ತದೆ. ಹಾಗಾಗಿ ನಾನು ಹೊರಗೆ ಹೋಗುವುದು ತುಂಬಾ ಕಡಿಮೆ. ಕುಟುಂಬಕ್ಕೆ ಸಂಬಂಧಪಟ್ಟ ವಿವಾಹ, ಸಾವು ಮುಂತಾದವುಗಳಿಗೆ ಮಾತ್ರ ಹೋಗುತ್ತೇನೆ. ಹಾಗಾಗಿ ನನಗಾಗಿ ಸಿಗುವ ಸಮಯ ತುಂಬಾ ಕಡಿಮೆ. ನನಗಾಗಿ ಸಿಗುವ ಕಡಿಮೆ ಸಮಯವನ್ನು ನಾನು ಬರವಣಿಗೆಗಾಗಿ ಮೀಸಲಿಡುತ್ತೇನೆ. ಹೀಗಾಗಿ ಇವು ನನಗೆ ನಾನೇ ಹಾಕಿಕೊಂಡ ಮಿತಿಗಳು.

–ಬಿ.ಎಮ್. ಜುಹಾರಾ
ಮಲೆಯಾಳಂ ಲೇಖಕಿ
ಸಂದರ್ಶನವೊಂದರಲ್ಲಿ, 'ಜಸ್ಟ್ ಬಿಟ್ವೀನ್ ಅಜ್' ಪುಸ್ತಕದಿಂದ

ವಿವಾಹಕ್ಕೆ ಮೊದಲು ಹೆಚ್.ಐ.ವಿ. ಪರೀಕ್ಷೆ ಕಡ್ಡಾಯಗೊಳಿಸಿ

■ ಕವನ

ನಮ್ಮ ಕುಟುಂಬದಲ್ಲಿ ಹೆಣ್ಣುಮಕ್ಕಳನ್ನು ಬೆಳೆಸುವ ವಿಧಾನವೇ ಬೇರೆ. ಹೆಣ್ಣುಮಕ್ಕಳಿಗೆ ವಿದ್ಯೆ ಕಲಿಸಿದರೂ, ಆಕೆ ಮದುವೆಯಾಗಿ ಬೇರೆಯವರ ಮನೆಗೆ ಹೋಗುವವಳು. ವಿವಾಹವಾಗುವುದೇ ಜೀವನದ ಪ್ರಮುಖ ಉದ್ದೇಶ ಎಂಬ ಧೋರಣೆಯನ್ನು ಚಿಕ್ಕಂದಿನಿಂದಲೇ ಆಕೆಯ ತಲೆಯಲ್ಲಿ ತುಂಬುತ್ತಾರೆ, ಆಕೆಯ ಮದುವೆ ಮಾಡಿ ಕಳಿಸಿ ತಮ್ಮ ಜವಾಬ್ದಾರಿಯನ್ನು ಕಳಚಿಕೊಳ್ಳುವ ಆತುರದಲ್ಲಿ ತಂದೆ-ತಾಯಿಯರಿರುತ್ತಾರೆ. ಈ ಆತುರದಲ್ಲಿ ಕೆಲವೊಮ್ಮೆ ಗಂಡಿನ ಪೂರ್ವಾಪರಗಳನ್ನು ಸರಿಯಾಗಿ ವಿಚಾರಿಸದೇ ಹೆಣ್ಣುಮಕ್ಕಳ ಮದುವೆ ಮಾಡಿ ಅವರ ಬದುಕನ್ನು ನರಕ ಮಾಡಿದ ನಿದರ್ಶನಗಳು ನಮ್ಮ ಮುಂದಿವೆ.

ಮೊನ್ನೆ ಕೆಲಸದ ನಿಮಿತ್ತ ಆಸ್ಪತ್ರೆಗೆ ಹೋಗಿದ್ದೆ. ಅದೇ ಆಸ್ಪತ್ರೆಯಲ್ಲಿ ನನ್ನ ಪರಿಚಿತರೊಬ್ಬರು ಲ್ಯಾಬ್ ಟೆಕ್ನೀಷಿಯನ್ ಕೆಲಸ ಮಾಡುತ್ತಿದ್ದಾರೆ. ಅವರನ್ನು ಭೇಟಿಯಾದ ಸಂದರ್ಭದಲ್ಲಿ ಒಬ್ಬ ವ್ಯಕ್ತಿ HIV ಪರೀಕ್ಷೆಗೆಂದು ಅವರ ಬಳಿ ಬಂದಿದ್ದರು. ಪರೀಕ್ಷೆಯಾದ ನಂತರ ಆ ವ್ಯಕ್ತಿಗೆ HIV ಸೋಂಕು ಇರುವುದು ದೃಢಪಟ್ಟಿತ್ತು. ತಲೆ ತಗ್ಗಿಸಿದ ವ್ಯಕ್ತಿಯ ಕಣ್ಣಲ್ಲಿ ನೀರು ಹರಿಯುತ್ತಿತ್ತು. ಇದನ್ನೆಲ್ಲಾ ಮೂಕವಿಸ್ಮಿತಳಾಗಿ ನಾನು ನೋಡುತ್ತಿದ್ದೆ, ಆ ವ್ಯಕ್ತಿ ಸ್ವಲ್ಪ ಸಮಾಧಾನಕ್ಕೆ ಬಂದ ನಂತರ ನಾನು ಎರಡು ಸಾಂತ್ವನದ ಮಾತುಗಳನ್ನಾಡಿದೆ. ಅವನು ನಿಧಾನವಾಗಿ ತನ್ನ ಕಥೆಯನ್ನು ಹೇಳತೊಡಗಿದ. ಅವನ ವೃತ್ತಾಂತ ಕೇಳಿದ ನಾನು ದಂಗಾದೆ, ಅವನಿಗೆ ಮದುವೆಯಾಗಿ ಕೇವಲ 3 ದಿನವಾಗಿತ್ತು. ದಿನ ಚೆನ್ನಾಗಿಲ್ಲ ಎಂಬ ಕಾರಣಕ್ಕೆ ಸಾಂಪ್ರದಾಯಕವಾದ ಮೊದಲ ರಾತ್ರಿಯನ್ನು ಮುಂದೂಡಲಾಗಿತ್ತು. ಅವನಿಗೆ ಏನೋ ಚರ್ಮದ ತೊಂದರೆ ಉಂಟಾಗಿ ಅದನ್ನ ಪರೀಕ್ಷಿಸಿಕೊಳ್ಳಲು ವೈದ್ಯರ ಬಳಿ ಬಂದಿದ್ದ. ಆಗ ಅವನಿಗೆ ಆಘಾತಕಾರಿಯಾದ HIV ಸೋಂಕಿನ ವಿಚಾರ ತಿಳಿದು ಬಂದಿತು. "ಮೇಡಂ ನಾನು ನನ್ನ ಹೆಂಡತಿಯೊಡನೆ ಸಂಸಾರ ಪ್ರಾರಂಭಿಸಲೇ? ಅಥವಾ ಬೇಡವೆ? ಒಂದು ವೇಳೆ ನಾನು ಸಂಸಾರ ಬೇಡವೆಂದರೆ ಅದು ಅವಳ ಜೀವನದ ಪ್ರಶ್ನೆ. ಜೊತೆಗೆ ಅವರ ಕುಟುಂಬದ ಕಡೆಯವರಿಂದ ನಾನು ತುಂಬಾ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ" ಎಂದು ತನ್ನ ಸಮಸ್ಯೆಯನ್ನು ನನ್ನ ಎದುರಿಗೆ ಬಿಚ್ಚಿಟ್ಟ.

ನಾನು ತಕ್ಷಣ ಪ್ರತಿಕ್ರಿಯಿಸಿದೆ. ನೀವು ಒಂದು ಸತ್ಯವನ್ನು ಹೇಳಿದರೆ ಅವಳ ಜೀವನವನ್ನು ರಕ್ಷಿಸಿದಂತಾಗುತ್ತದೆ. ಆದರೆ ಸತ್ಯವನ್ನು ಮುಚ್ಚಿಟ್ಟರೆ ಅವಳ ಜೀವನದ ದುರಂತಕ್ಕೂ ನೀವು ಹೊಣೆಗಾರರಾಗುತ್ತೀರಾ. ಜೊತೆಗೆ ಮುಂದೆ ಹುಟ್ಟುವ ಮಗುವಿನ ಪಾಲಿಗೂ ನೀವೇ ಮುಳ್ಳಾಗುತ್ತೀರಾ ಎಂದು ನನ್ನ ಅನಿಸಿಕೆಯನ್ನು ನೇರವಾಗಿ ಹೇಳಿದೆ. ಇರುವ ವಿಷಯವನ್ನು ಅವಳ ಕಡೆಯವರಿಗೆ ನೇರವಾಗಿ ತಿಳಿಸಿ, ಇಂತಹ ಸಂದರ್ಭದಲ್ಲಿ ಅವರು ಒಪ್ಪಿಕೊಳ್ಳುತ್ತಾರೆ. ಈ ಮದುವೆಯನ್ನು ಮುರಿಯುವುದರಿಂದ ಆ ಹುಡಿಗಿಗೆ ಹೊಸ ಬದುಕನ್ನು ನೀವು ನೀಡಿದಂತಾಗುತ್ತದೆಯೆಂದು ಸೇರಿಸಿದೆ.

ಎಷ್ಟೋ ಜನ ತಂದೆ ತಾಯಂದಿರು ಬಡತನ ಅಥವಾ ಪರಿಸ್ಥಿತಿಯ ಒತ್ತಡಕ್ಕೆ ಒಳಗಾಗಿ ಹೇಗಾದರೂ ಮಾಡಿ ತಮ್ಮ ಹೆಣ್ಣುಮಕ್ಕಳನ್ನು ಹಸೆಮಣೆಯೇರಿಸಿ ತಮ್ಮ ಜವಾಬ್ದಾರಿಯನ್ನು ಕಳೆದುಕೊಳ್ಳುವ ಆತುರದಲ್ಲಿ ಎರಡನೆ ಸಂಬಂಧಕ್ಕೆ, ಮೂರನೆ ಸಂಬಂಧಕ್ಕೆ ಮದುವೆ ಮಾಡಿಕೊಡುತ್ತಾರೆ. ಮಕ್ಕಳಿಗೆ ಭವಿಷ್ಯ ಕೊಟ್ಟೆವು ಎಂಬ ಭ್ರಮೆಯಲ್ಲಿ ತಮಗರಿವಿಲ್ಲದಂತೆ ತಮ್ಮ ಮಕ್ಕಳ ಬದುಕಿಗೆ ಬೆಂಕಿ ಇಟ್ಟಿರುತ್ತಾರೆ. ಇಂತಹ ಕಾರಣದಿಂದಲೇ ಎಷ್ಟೋ ಮುಗ್ಧ ಹೆಣ್ಣುಮಕ್ಕಳು HIV ಸೋಂಕಿನಂತಹ ಮಾರಿಗೆ ಬಲಿಯಾಗಿ ತಮ್ಮ ಜೀವನವನ್ನು ಕತ್ತಲಲ್ಲಿ ಕಳೆಯುತ್ತಿದ್ದಾರೆ.

ಈಗಾಗಲೇ ಈ ಸೋಂಕು ಎಲ್ಲ ಕಡೆ ತನ್ನ ಕಬಂಧ ಬಾಹುಗಳನ್ನು ಚಾಚಿದೆ. ಈ ಸುಳಿಯಲ್ಲಿ ಸಿಲುಕಿದ ಹೆಣ್ಣುಮಕ್ಕಳ ಬಾಳು ಮತ್ತಷ್ಟು ಘೋರ. ತಮ್ಮ ಮಕ್ಕಳ ಭವಿಷ್ಯವನ್ನು ರೂಪಿಸಬೇಕಾದ ತಂದೆ ತಾಯಿಯರು ಗಂಭೀರವಾಗಿ ಯೋಚಿಸುವುದು ಒಳಿತು. ಇದಕ್ಕೆ ಪೂರಕವಾಗಿ ಸರ್ಕಾರವೂ ಕೂಡ ಎಚ್ಚೆತ್ತು ಪ್ರತಿಯೊಬ್ಬ ಗಂಡು ಹಾಗೂ ಹೆಣ್ಣು ತಮ್ಮ ಮದುವೆಗೆ ಮುಂಚೆ HIV ಪರೀಕ್ಷೆ ಮಾಡಿಸುವುದನ್ನು ಕಡ್ಡಾಯಗೊಳಿಸಬೇಕು. ❑




ನೀನು ನಿರ್ಮಿಸಿದಂತೆ
ನಿನ್ನದೇ ವಿಸ್ತಾರದ ಲೋಕದಲಿ
ಏನುಂಟು ಏನಿಲ್ಲ... ... ...
ಇದ್ದದ್ದು ನಿನ್ನದೆ
ಕಡೆಗಣಿಸಿದ್ದು ನಿನ್ನದೇ
ನಿನ್ನ ಪ್ರಪಂಚದ ಗೂಡೊಂದಕಲ್ಲಿ
ರೆಕ್ಕೆಯಿದ್ದು ಸೋತು
ಬಿದ್ದ ಹಕ್ಕಿ ನಾನು... ... ...

ಸಾಗರದಿ ಅಂಡಲೆಸಿ
ದಡದಿ ದಬ್ಬ ಮತ್ತದೇ
ವರ್ತುಲಕೆ ಸೆಳೆವ ನಿನ್ನ ಸೆಳಕು
ಒಳಗೊಳಗೆ ಬಂಧಿಯಾಗಿ
ಅಂಡಲೆವ ಭಾವಗಳ
ಕಂಡ ಸೂರ್ಯನದು ದಿಗಂತದ
ಹರಹಲ್ಲಿ ಸುಖಾಸುಮ್ಮನೆ
ನಡೆವ ಸಲೀಸು ಪಯಣ
ಮೈತುಂಬ ಹೊತ್ತ ಕಿರಣ

ಅದೊಂದು ದಿನ ಬೀಸಿತು
ಚಂಡ ಮಾರುತ
ಬಿರುಕು ಬಿಟ್ಟ ಗೂಡೊಳಗೆ
ಹಣಿಕಿತು ಸಣ್ಣ ಕಿರಣ

ರೆಕ್ಕೆ ಚಲಿಸಿತು
ಕಾಲು ಅಲುಗಿತು
ಎದೆ ಹಗುರಾಗಿ
ಬಂಧನದ ಬಿಗಿ ಸಡಿಲಾಗಿ
ಮುಲುಗುಡುವ ಬಸಿರ ಭಾವಗಳಲಿ
ಕುಂತಿ ಮಂಡೋದರಿ ದ್ರೌಪದಿ
ಸೀತೆ ಅಹಲ್ಯೆ ಎಲ್ಲ
ಎಲ್ಲರೆದೆಯಲಿಬಿರಿದ ಖುಷಿ
ಸಾಗಿ ತೂಗಿ ಹೊಚ್ಚ ಹೊಸ
ಗಾಳಿ ಕುಡಿವ ಮನೋಸ್ಥಿತಿ

■ ಸುಶೀಲಾ ಸೋಮಶೇಖರ್, ಹಾಸನ



ಗಂಡಿಗೆ ಗಂಡೇ ಶತ್ರುವಲ್ಲವೇ?

■ ಡಾ. ಸಬಿತಾ ಬನ್ನಾಡಿ

ಕತೆಯೊಂದರ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಯೊಬ್ಬ ಕೇಳಿದ ಪ್ರಶ್ನೆ ಹೀಗಿತ್ತು,"ಗಂಡ ಅಕಸ್ಮಾತ್ ಹೊಡ್ದಾಗ ಆಕಿ ಸತ್ತಿರ್‌ಬಹುದು. ಅದನ್ನ ಕೊಲೆ ಅಂತ ಹೆಂಗ್ ಹೇಳ್ತೀರಿ? ಮನ್ಯಾಗ ಗಲಾಟಿ ಆಗುದ್ ಇದ್ದೇ ಇರ್ತತೆ. ಸಿಟ್ ಬಂದಾಗ ಹೊಡ್ಯೋದು ನ್ಯಾಚುರಲ್ ಅಲ್ರೀ, ಹಂಗ್ ಆಗಿರ್‌ಬೌದಲ್ಲಾ?" ಎಲ್ಲಾ ಚರ್ಚೆಯ ಕೊನೆಯಲ್ಲಿ ಈ ಪ್ರಶ್ನೆಯನ್ನು ಎತ್ತಿಕೊಂಡ ನಾನು ಎಲ್ಲರನ್ನು ಉದ್ದೇಶಿಸಿ ಕೇಳಿದೆ. ಹೆಂಡ್ತಿಗೆ ಗಂಡ ಸಿಟ್ಟಿನಲ್ಲಿ ಹೊಡೆಯುವುದು ಸಹಜ, ಹಾಗೆ ಅಕಸ್ಮಾತ್ ಹೊಡೆತ ಮಾರಣಾಂತಿಕವಾಗಿ ಆಕೆ ಸಾಯುವುದು ನಿಮಗೆ ಸಹಜ ಅನಿಸುತ್ತೆ. ಅದೇ ಹೆಂಡತಿ ಗಂಡನನ್ನು ಕೊಂದರೆ ಅದು ಅಸಹಜ ಆಗಿ ಬಿಡುತ್ತಾ? ಎಲ್ಲರ ಮೌನಕ್ಕೂ, ಆ ಪ್ರಶ್ನೆ ಕೇಳಿದ್ದ, ಮುಗ್ಧತೆಯನ್ನು ಇನ್ನೂ ಉಳಿಸಿಕೊಂಡಿದ್ದ ಆ ಹುಡುಗ ಸ್ವಲ್ಪ ಆಘಾತಕ್ಕೂ ಒಳಗಾದರು. ಹಳ್ಳಿಯೊಂದರಿಂದ ಬಂದಿರುವ ಆ ಹುಡುಗನ ತಲೆಯಲ್ಲಿ ಈ ಸಹಜತೆ/ಅಸಹಜತೆಗಳು ತೂರಿಕೊಂಡಿರುವ ಬಗೆ ಇದು.

ಅದೇ ಚರ್ಚೆಯಲ್ಲಿ, ಬಹುಶಃ ಸಾವಿರದಾ ನೂರು ಬಾರಿ ಪುನರಾವರ್ತನೆಯಾಗಿರುವ ಅದೇ ಹಳೆಯ ಪ್ರಶ್ನೆ, ಹೆಣ್ಣುಮಕ್ಕಳ ವಿಷಯ ಬಂದಾಗೆಲ್ಲಾ ಬರಲೇ ಬೇಕಾದ ಪ್ರಶ್ನೆ, ನಮಗಂತೂ ಅತೀ ನಿರೀಕ್ಷಿತ ಪ್ರಶ್ನೆ 'ಹೆಣ್ಣಿಗೆ ಹೆಣ್ಣೇ ಶತ್ರುವಲ್ಲವೇ?' ಎಂಬ ಬಾಣ ಬಂದು ಎರಗಿತು. ಪಾಪ! ತನ್ನೊಳಗೂ ಅದೇ ನಂಬಿಕೆಯನ್ನು ಇಷ್ಟ ಇದ್ದೋ ಇಲ್ಲದೆಯೋ ನಂಬಿರುವ ಅಥವಾ ಉತ್ತರ ಗೊತ್ತಿಲ್ಲದೆಯೋ ಇರುವ ಹುಡುಗಿ, 'ಹೌದು ಈ ಸನ್ನಿವೇಶದಲ್ಲಿ ಹೆಣ್ಣಿಗೆ ಹೆಣ್ಣೇ ಶತ್ರವಾಗಿರುವುದು ಕಂಡು ಬರುತ್ತದೆ' ಎಂದಳು. ಇದು ಅತ್ಯಂತ ಸೇಫ್ ಉತ್ತರ! ಈ ಚರ್ಚೆಯ ಕೊನೆಯಲ್ಲಿ ನಾನವರಿಗೆ ಒಂದು ಪ್ರಶ್ನೆ ಹಾಕಿದೆ: 'ಗಂಡಿಗೆ ಗಂಡೇ ಶತ್ರುವಲ್ಲವೇ?' ಮತ್ತೊಮ್ಮೆ ತರಗತಿ ಮೌನಕ್ಕೆ ಶರಣಾದರೆ, ಹಲವರ ಅದರಲ್ಲೂ ಹೆಣ್ಣುಮಕ್ಕಳ ಕಣ್ಣಲ್ಲಿ ಒಂದು ಸಣ್ಣ ಮಿಂಚು ಕಾಣಿಸಿತು. ಇವರೆಲ್ಲರೂ ಪ್ರಥಮ ಎಂ.ಎ ಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಎಂಬುದು ಗಮನಿಸಬೇಕಾದ ಅಂಶ.

ಗಂಡಿಗೆ ಗಂಡೇ ಶತ್ರುವಾಗಿರುವುದು ಒಂದು ವಿಷಯವೇ ಅಲ್ಲ ನಮಗೆ, ಅದು ಚರ್ಚೆಗೆ ಇರುವ ಪ್ರಶ್ನೆಯೂ ಅಲ್ಲ ನಮಗೆ. ಮತ್ತು ಅದೊಂದು ಅತ್ಯಂತ ಸಹಜ ವಿದ್ಯಮಾನವಾಗಿ ನಮಗೆ ಕಾಣುತ್ತದೆ. ಮಾತ್ರವಲ್ಲ, ಇಬ್ಬರು **ಪುರುಷರ ನಡುವಣ ಹೋರಾಟ ಶೌರ್ಯದ ಸಂಕೇತ!** ಆದರೆ, ಇಬ್ಬರು ಹೆಣ್ಣುಮಕ್ಕಳ ಸಹಜ ಜಗಳ, ಅಸೂಯೆ, ಸಣ್ಣ ಪುಟ್ಟ ರಾಜಕಾರಣಗಳಿಗೆ ಮಾತ್ರ ಒಂದೇ ಉತ್ತರ: 'ಹೆಣ್ಣಿಗೆ ಹೆಣ್ಣೇ ಶತ್ರು'– ಇದೊಂದು ಪದಗುಚ್ಛವನ್ನು ಯಾವ ಮಹಾನುಭಾವ ಸೃಷ್ಟಿಸಿದನೋ, ಹೆಂಗಸರ ಬಾಯಿಮುಚ್ಚಿಸಲು – ಹೆಂಗಸರು ಮಾತಾಡಲು ಪ್ರಾರಂಭಿಸಿ ದಂದಿನಿಂದ ಅಸ್ತ್ರವಾಗಿ ಬಳಕೆಯಾಗಿದೆ. ಹೆಂಗಸರಿಬ್ಬರ ನಡುವೆ ಕದನಕ್ಕೆ ಅವರು ಹೆಂಗಸರಾಗಿರುವುದು ಕಾರಣವಲ್ಲ, ಅದರಾಚೆಗಿನ ಅಧಿಕಾರ, ಆಸ್ತಿ ಇತ್ಯಾದಿ ಗಂಡಸರಿಗೂ ಹೆಂಗಸರಿಗೂ ಸಮಾನವಾದ ಅನೇಕ ವಿಚಾರಗಳೂ ಇರುತ್ತವೆ. ಅದನ್ನೆಲ್ಲಾ ಗಮನಿಸದೆ, ಹೆಂಗಸರು ಹೆಂಗಸರೊಂದಿಗೆ ಜಗಳವಾಡುವುದೇ ಒಂದು ಅಪರಾಧ ಎಂಬಂತೆ ಬಿಂಬಿಸಲಾಗುತ್ತದೆ. ಇದು ಸೆಮಿನಾರುಗಳಲ್ಲಿ ವಿದ್ಯಾರ್ಥಿಗಳು ಕೇಳುವ ಬಾಲಿಷ ಪ್ರಶ್ನೆ ಅಂತ ಸಮಾಧಾನ ಮಾಡಿಕೊಳ್ಳುವಂತಿಲ್ಲ. ಈ ಚಾಳಿಗೆ ಹಲವರು ಬಲಿಯಾಗಿದ್ದಾರೆ.

ಕೆಲವು ವರ್ಷಗಳ ಹಿಂದೆ ಕುವೆಂಪು ವಿ.ವಿ.ಯಲ್ಲಿ ದಲಿತ ಮಹಿಳೆಯ ಕುರಿತು ಪ್ರಬಂಧ ಮಂಡನೆ ನಡೆಯಿತು. ಮಂಡನೆ ಮುಗಿಯುವುದನ್ನೇ ಕಾದು ಕುಳಿತಿದ್ದ ಕೆಲವು ವಿಶ್ವವಿದ್ಯಾನಿಲಯದ ಪುರುಷ ಪ್ರಾಧ್ಯಾಪಕರು ಪ್ರಶ್ನೆಗಳ ದಾಳಿ ಶುರುಮಾಡಿದರು. ವೇದಿಕೆಯಲ್ಲಿದ್ದವರೆಲ್ಲಾ ಮಹಿಳೆಯರೇ. ಈ ಪುರುಷರಲ್ಲಿ ದಲಿತ, ಅಲ್ಪಸಂಖ್ಯಾತ ಹಿನ್ನೆಲೆಯಿಂದ ಬಂದವರೂ ಇದ್ದರು. ಯಾರೋ ಒಬ್ಬರು ಸವಕಲು ಧಾರಾವಾಹಿಯೊಂದರ ಎರಡು ಸ್ತ್ರೀ ಪಾತ್ರಗಳನ್ನು ಉದಾಹರಿಸಿ, ಸುಂದರ ಇಂಗ್ಲೀಷಿನಲ್ಲಿ ಕೇಳಿದ ಪ್ರಶ್ನೆಯ ಸಾರಾಂಶ ಇದೇ ಹೆಣ್ಣಿಗೆ ಹೆಣ್ಣೇ ಶತ್ರುವಲ್ಲವೇ? ಎಂಬುದೇ. ಇನ್ನೊಬ್ಬರಂತೂ ದೊಡ್ಡದನಿಯಲ್ಲಿ, ಅಸಹನೆಯಲ್ಲಿ 'ಸ್ತ್ರೀ ವಾದ ಯಾಕ್ರೀ ಬೇಕು? ಮಾನವತಾ ವಾದ ಸಾಕಾಗಲ್ವೇನ್ರಿ?' ಎಂದು ಹರಿಹಾಯ್ದರು. ಅದೇ ಹೊತ್ತಿಗೆ ಇಂಗ್ಲಿಷ್ ಎಂ.ಎ. ವಿದ್ಯಾರ್ಥಿನಿಯೊಬ್ಬಳು ತನ್ನೂರಿನ ಘಟನೆಯೊಂದನ್ನು ಹೇಳಿ, ಇಲ್ಲಿ ಮಾನವತಾವಾದ ಇದ್ದರೆ ಸಾಕಲ್ಲ. ಸ್ತ್ರೀವಾದದ ಅವಶ್ಯಕತೆ ಇದೆಯೇ ಎಂದು ಕೇಳಿದಳು. ದಲಿತರೇ ದಲಿತ ಮಹಿಳೆಯ ಪ್ರಶ್ನೆ ಬಂದಾಗ ಹೀಗೆ ವರ್ತಿಸುವುದು, ಅದೂ ಉನ್ನತ ಶಿಕ್ಷಣ ಪಡೆದವರು, ಆಘಾತಕಾರಿ. ಮಾನವತಾವಾದ ಅಸ್ತಿತ್ವದಲ್ಲಿದ್ದಿದ್ದೇ ಆದರೆ, ದಲಿತರು ಹೋರಾಟ ಮಾಡಬೇಕಾದ ಅವಶ್ಯಕತೆಯೇ ಇರುತ್ತಿರಲಿಲ್ಲ, ಹಾಗೆಯೇ ಸ್ತ್ರೀಯರೂ ಎಂಬ ಕಾಮನ್‌ಸೆನ್ಸ್ ಕೂಡ ನಮ್ಮಲ್ಲಿ ಇಲ್ಲದಿರುವುದಕ್ಕೆ ದುಃಖ ಪಡದೆ ಬೇರೆ ಗತ್ಯಂತರವಿಲ್ಲ. ಸ್ತ್ರೀವಾದವೂ ಒಂದು ಸಹಜ ಪ್ರಕ್ರಿಯೆ. ಇದಕ್ಕೆ ನಾವು ಕಿವಿಗೊಡಬೇಕು ಎಂಬ ಮಾನವೀಯ ಅಂಶದ ಪರಿವೆಯೇ ಇಲ್ಲದವರು ಮಾನವತಾವಾದದ ಮಾತಾಡುವುದು ನಮ್ಮ ನಡುವಿನ ವ್ಯಂಗ್ಯ.

ಇತ್ತೀಚೆಗೆ, ಕರ್ನಾಟಕದಲ್ಲಿ ನಡೆದ ರಾಜಕೀಯ ಏರುಪೇರುಗಳ ಸಂದರ್ಭದಲ್ಲಿ ಸಚಿವೆಯ ಕುರಿತು ಸಂಸದೆ ನೀಡಿದ ಪ್ರತಿಕ್ರಿಯೆಯನ್ನು ಟಿ.ವಿ.ಯಲ್ಲಿ ಪದೇ ಪದೇ ಬಿತ್ತರಿಸಲಾಯಿತು. ಹೀಗೆ ಬಿತ್ತರಿಸುವುದರ ಹಿಂದಿದ್ದ ಮನಃಸ್ಥಿತಿಯೂ ಹೆಣ್ಣಿಗೆ ಹೆಣ್ಣೇ ಶತ್ರು ಎಂಬುದನ್ನು ಪ್ರೂವ್ ಮಾಡುವ ಸಂಭ್ರಮದ್ದೇ ಆಗಿತ್ತು. ಆದರೆ, ಇಲ್ಲಿ ಹೆಣ್ಣು–ಗಂಡುಗಳ ಪ್ರಶ್ನೆ ಮೀರಿದ ರಾಜಕೀಯಗಳು ಇದ್ದವು ಎಂಬುದು ಎಲ್ಲರಿಗೂ ತಿಳಿದಿರುವ ಸತ್ಯ. ಇದು ತಿಳಿದವರಿಗೆ ಹಿಡಿದಿರುವ ಗರ ಅಷ್ಟೇ. ಉನ್ನತ ಶಿಕ್ಷಣ ಪಡೆಯುತ್ತಿರುವವರು, ಪಡೆದವರು ಈ ಕ್ಷಣಕ್ಕೂ ಸೆಮಿನಾರುಗಳಲ್ಲಿ ಇದೇ ಹಳೆಯ ಪ್ರಶ್ನೆ ಕೇಳುತ್ತಿರುವುದರ ಕುರಿತು ಆಗಾಗ ಖಾಸಗಿ ವರದಿಗಳು ಬರುತ್ತಲೇ ಇರುತ್ತವೆ. ಇವರಿಗೀಗ ನಾವು ಹೇಳಬೇಕಾದ್ದು ಉತ್ತರವಲ್ಲ, ಕೇಳಬೇಕಾದ್ದು ಪ್ರಶ್ನೆ: 'ಪುರುಷರಿಗೆ ಪುರುಷನೇ ಶತ್ರುವಲ್ಲವೇ?' ❑

ಭಕ್ತಿ ಚಳವಳಿ – ಮಹಿಳಾ ಅಭಿವ್ಯಕ್ತಿ

■ ಲೀಲಾವತಿ ಎಸ್. ರಾವ್, ಮೈಸೂರು

ಭಾರತದಲ್ಲಿ ಭಕ್ತಿ ಪಂಥಕ್ಕೆ ದೀರ್ಘ ಇತಿಹಾಸವಿದೆ. ವೈದಿಕ ಸಾಹಿತ್ಯದಲ್ಲಿಯೇ ಅದರ ಉಗಮವನ್ನು ಕಾಣಬಹುದು ಎಂಬ ಅಭಿಪ್ರಾಯವೂ ಇದೆ. ಜಾಗತಿಕ ವಾಗಿಯೂ ಧರ್ಮ ಆಯಾ ಭೌಗೋಳಿಕ, ಚಾರಿತ್ರಿಕ, ಸಾಂಸ್ಕೃತಿಕ ನೆಲೆಗಳಿಂದ ಭಿನ್ನ ಭಿನ್ನವಾದ ವ್ಯಾಪ್ತಿಗಳನ್ನು ಹೊಂದಿದೆ. ಭಾರತದ ಹಿಂದೂಧರ್ಮ ದೈವದ ಬಗ್ಗೆ ಉದಾರವಾಗಿರುವಂತೆಯೇ, ಜಾತಿ ಪದ್ಧತಿಯ ವಿಷಯದಲ್ಲಿ ನಿಷ್ಠೂರವೂ, ಆಚರಣೆಯ ವಿಷಯದಲ್ಲಿ ಕರ್ಮಠವೂ ಆದದ್ದೇ ಪ್ರಾಯಃ ಭಕ್ತಿ ಪಂಥ ದೇಶಾದ್ಯಂತ ವಿಪುಲವಾಗಿ ಹರಡಲು ಕಾರಣವಾಗಿರಬಹುದು.

ಭಕ್ತಿ ಒಂದು ಚಳವಳಿಯಾಗಿ ರೂಪುಗೊಂಡಾಗ ಅದು ಕೇವಲ ಸಾಹಿತ್ಯ ಸೃಷ್ಟಿಗಷ್ಟೇ ಸೀಮಿತವಾಗದೆ, ಸಾಮಾಜಿಕ ವಾಗಿಯೂ ಕೆಲಸ ಮಾಡಿದೆ. ಪಾರಮಾರ್ಥದ ಬಾಗಿಲನ್ನು ಸಮಾಜದ ಎಲ್ಲರಿಗೂ ಮುಕ್ತವಾಗಿ ತೆರೆದವರು ಭಕ್ತಿ ಪಂಥದವರು. ಆಚಾರ್ಯತ್ರಯರು ಮೋಕ್ಷಕ್ಕೆ ಭಕ್ತಿಯನ್ನೇ ಮುಖ್ಯ ಸಾಧನವೆಂದು ಹೇಳಿದ್ದಾರೆ. ಈ ಮೂವರು ಆಚಾರ್ಯರ ಕಾರ್ಯಕ್ಷೇತ್ರ ಕರ್ನಾಟಕವೇ ಆದದ್ದು ಆಶ್ಚರ್ಯದ ಸಂಗತಿ! ಕೇರಳದ ಶಂಕರಾಚಾರ್ಯರು ಶೃಂಗೇರಿಯನ್ನು ತಮ್ಮ ಆಧ್ಯಾತ್ಮ ಚಿಂತನೆಯ ನೆಲೆಯನ್ನಾಗಿ ಮಾಡಿಕೊಂಡರೆ, ತಮಿಳುನಾಡಿನ ರಾಮಾನುಜಾಚಾರ್ಯರು ಮೇಲುಕೋಟೆಯನ್ನು ತಮ್ಮ ಸಾಧನಾಕ್ಷೇತ್ರವನ್ನಾಗಿಸಿಕೊಂಡರು. ಮಧ್ವಾಚಾರ್ಯರಂತೂ ಕನ್ನಡನಾಡಿನಲ್ಲೇ ಹುಟ್ಟಿ ಬೆಳೆದವರು. ಇವರು ತೋರಿದ ಭಕ್ತಿಮಾರ್ಗದಲ್ಲಿ ಶರಣರು, ಆಳ್ವಾರರು, ದಾಸರು ಭಕ್ತಿಪಂಥವನ್ನು ಗಟ್ಟಿಗೊಳಿಸಿದರು. ಭಕ್ತಿಮಾರ್ಗದ ಬೆಳವಣಿಗೆಯಲ್ಲಿ, ಅದರ ವಿವಿಧ ಮಜಲುಗಳ ಹೋರಾಟದಲ್ಲಿ ಕರ್ನಾಟಕದ ಪಾತ್ರ ಮುಖ್ಯವಾದುದು.

ವೇದ ಉಪನಿಷತ್ತು, ಧರ್ಮಶಾಸ್ತ್ರಗಳು, ಮತಾಚರಣೆಗಳು ಇತ್ಯಾದಿಗಳನ್ನು ತಮ್ಮ ಸ್ವತ್ತೆಂದು ಭಾವಿಸಿದ್ದ ಮೇಲ್ವರ್ಗ, ಸಮಾಜದ ಮುಖ್ಯ ಅಂಗಗಳಾಗಿದ್ದ ಕೆಳಸ್ತರದ ಜನತೆಯನ್ನು, ಮಹಿಳೆಯರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿತ್ತು. ದೇವರು, ಧರ್ಮ, ಆಚಾರ ವಿಚಾರಗಳಿಗೂ ತಮಗೂ ಯಾವುದೇ ಸಂಬಂಧವಿಲ್ಲ, ಎಂದೆಂದಿಗೂ ತಮಗೆ ಮುಕ್ತಿ ಇಲ್ಲ ಎಂದೇ ಭಾವಿಸಿ ಸಾಮಾನ್ಯರು ಬದುಕುತ್ತಿದ್ದ ಕಾಲದಲ್ಲಿ, ದೇವರ ಕಣ್ಣಿನಲ್ಲಿ ಎಲ್ಲರೂ ಸಮಾನರು. ಮೇಲು ಕೀಳು, ಹೆಣ್ಣುಗಂಡು ಎಂಬ ಭೇದಭಾವವಿಲ್ಲದೆ ಭಕ್ತಿಯಿಂದ ಕರೆದರೆ ಭಗವಂತ ಓಗೊಡುತ್ತಾನೆ. ಶಾಸ್ತ್ರವಲ್ಲ ಅಂತರಂಗದ ಭಕ್ತಿ ಮುಖ್ಯ. ಪ್ರೀತಿಯಿಂದ ನೀಡುವ ಒಂದು ಹೂ ಅವನನ್ನು ಒಲಿಸಲು ಸಾಕು. ಅದೂ ಬೇಡ ಕೇವಲ ನಾಮಸ್ಮರಣೆಯೊಂದೇ ಸಾಕು ಎಂಬಂತಹ ಸುಲಭಮಾರ್ಗವನ್ನು ಭಕ್ತಿಪಂಥ ತೋರಿದಾಗ ಅದು ಶ್ರೀಸಾಮಾನ್ಯನನ್ನು ತಟ್ಟಿತು, ಮುಟ್ಟಿತು, ಅಪ್ಪಿತು. ಹಲವು ರೀತಿಯ ಕಷ್ಟ ಕಾರ್ಪಣ್ಯ, ನಿರಾಶೆ ಹತಾಶೆಗಳಿಂದ ಬಳಲುತ್ತಿದ್ದ ದಲಿತರು, ಮಹಿಳೆಯರು ಭರವಸೆಯ ಬೆಳಕನ್ನು ಕಾಣುವುದು ಸಾಧ್ಯವಾಯಿತು. ತಮಗೆ ಪ್ರವೇಶವೇ ಇಲ್ಲ ಎಂದು ಭಾವಿಸಿದ್ದ ಆಧ್ಯಾತ್ಮ ಸಾಧನೆಯ ಕ್ಷೇತ್ರದೊಳಗೆ ನಿರ್ಭಯವಾಗಿ ಕಾಲಿಡುವ ಅವಕಾಶ ದೊರೆಯಿತು.

ಕರ್ನಾಟಕದಲ್ಲಿ ನಡೆದ ಮಹತ್ವದ ಕ್ರಾಂತಿ ಎಂದರೆ ಶಿವಶರಣರದ್ದು. ವೈದಿಕರ ಮಡಿಆಚಾರಗಳೆಂಬ ಕಟ್ಟು ಪಾಡುಗಳು, ವರ್ಗ ವ್ಯವಸ್ಥೆಯ ತಾರತಮ್ಯ ನೀತಿ, ಲಿಂಗ ತಾರತಮ್ಯ ಇತ್ಯಾದಿಗಳಿಂದ ಸಮಾಜ ಜಡ್ಡು ಗಟ್ಟಿ ಹೋಗಿತ್ತು. ಮಹಿಳೆಯರು ಒಂದೋ ಆರಾಧನೆ ಇಲ್ಲವೆ ತಿರಸ್ಕಾರಕ್ಕೆ ಗುರಿಯಾಗಿ ಪುರುಷ ಪ್ರಭುತ್ವದ ಹಿಡಿತದಲ್ಲಿ ನರಳುತ್ತಿದ್ದರು. ಕರ್ನಾಟಕದ ಶರಣರು ಲಿಂಗಸಮಾನತೆಯ ಮಾನವೀಯ ಕಾಳಜಿಯಿಂದ ಜನಪರ ಜೀವನಪರ ಹೋರಾಟವನ್ನು ವಚನ ಚಳವಳಿಯ ಮೂಲಕ ಪ್ರಾರಂಭಿಸಿದರು. ಜನಸಾಮಾನ್ಯರ ಪಾಲಿಗೆ ಅರ್ಥವಾಗದ ಭಾಷೆ ಸಂಸ್ಕೃತವನ್ನು, ಆ ಭಾಷೆಯ ಮೂಲಕ ಆಧ್ಯಾತ್ಮವನ್ನು ತಮ್ಮ ಸ್ವತ್ತಾಗಿಸಿಕೊಂಡು ಶೋಷಿಸುತ್ತಿದ್ದ ವರ್ಗದ ವಿರುದ್ಧವಾಗಿ ಮೂಡಿ ಬಂದ ಕಟ್ಟು ಹರಿದ ಭಕ್ತಿಮಾರ್ಗ ಶರಣರದ್ದು ಅನುಭಾವದ ಅಭಿವ್ಯಕ್ತಿಗೆ ಆಡುಭಾಷೆಯ ಕಸಿಕಟ್ಟಿದವರು ಅವರು. ಪತಿತ್ವದ ಪ್ರಭುತ್ವದ ಅಧಿಕಾರವನ್ನು ಪ್ರಶ್ನಿಸುವ ಹೆಣ್ಣು, ಪುರೋಹಿತಶಾಹಿಯ ವಿರುದ್ಧ ನಿಂತ ಕೆಳವರ್ಗ, ದೇವಭಾಷೆಗೆ ಪ್ರತಿಯಾಗಿ ಆಡುಭಾಷೆ ಹೀಗೆ ಸಂಸ್ಕೃತಿಯ ಒಳಗೆ ಪ್ರತಿಸಂಸ್ಕೃತಿಯೊಂದು ಮೂಡಿತು.

ಕನ್ನಡ ಸಾಹಿತ್ಯ ಬೆಳೆದು ಪಂಪ, ರನ್ನರಂತಹ ಶ್ರೇಷ್ಠ ಕವಿಗಳು ಬಂದ ಮೇಲೂ, ಕವಯಿತ್ರಿಯೊಬ್ಬಳ ದನಿಯನ್ನಾಲಿಸಲು ಎರಡು ಶತಕಗಳಿಗೂ ಹೆಚ್ಚು ಕಾಲ ಕಾಯಬೇಕಾಯಿತು. ದೀರ್ಘಕಾಲದ ನಿರೀಕ್ಷೆ ಸಫಲವಾಗುವಂತೆ ವಚನ ಸಾಹಿತ್ಯ ಕಾಲದಲ್ಲಿ ಅಕ್ಕಮಹಾದೇವಿ ಕಂಡುಬರುತ್ತಾಳೆ. ಅದುವರೆಗೆ ಕೇಳಿ ಅರಿಯದ ದಿಟ್ಟತನದಿಂದ ಸಮಾಜವನ್ನು, ವ್ಯವಸ್ಥೆಯನ್ನು ಧಿಕ್ಕರಿಸಿ ಆಧ್ಯಾತ್ಮಿಕ ಸಾಧನೆಯಲ್ಲಿ ಹೆಣ್ಣು ಏರಬಲ್ಲ ಎತ್ತರವನ್ನು ಸಾಬೀತು ಗೊಳಿಸಿದ್ದಾಳೆ. ಶ್ರೇಷ್ಠ ಅನುಭಾವಿಯೂ, ಕವಯಿತ್ರಿಯೂ ಆಗಿ ಎಲ್ಲ ಕಾಲ, ದೇಶಗಳ ವಿಮರ್ಶೆಯ ಕಮ್ಮಟದಲ್ಲೂ ಚೊಕ್ಕವಾಗಿ ಗಟ್ಟಿಯಾಗಿ ನಿಲ್ಲಬಲ್ಲವಳಾಗಿದ್ದಾಳೆ. ಸಮಾಜದ ವಿವಿಧ ಸ್ತರದ ಅನ್ಯಾಯಗಳ ವಿರುದ್ಧ ಸಿಡಿದು ನಿಂತು ಆಕೆ ಮಾಡಿದ ಪ್ರತಿಭಟನೆ ಅದೊಂದು ಬೇರೆಯದೆ ಬಗೆಯದು; ಅದು ಮುರಿದು ಕಟ್ಟುವ ಮಾದರಿಯಲ್ಲ; ಮುರಿದು ಕಟ್ಟುವ ಹಂಗನ್ನು ಇಟ್ಟುಕೊಳ್ಳದ ಮಾದರಿ. ಮಹಾಸಾಧಕಿಯಾದ ಆಕೆ ತನ್ನ ಸಾಧನೆಯ ಹಾದಿಯಲ್ಲಿ ಒದಗಿದ ಲೌಕಿಕ ಅನುಭವಗಳಿಗೆ ಪ್ರತಿಕ್ರಿಯಿಸಿದ್ದಾಳೆ. ತೀವ್ರವಾದ ಭಾವುಕತೆ, ಪ್ರಖರವಾದ ವೈಚಾರಿಕತೆ ಎರಡನ್ನು ಆಕೆಯ ವಚನಗಳಲ್ಲಿ ಕಾಣಬಹುದು. 'ಸಾವಿಲ್ಲದ ಕೇಡಿಲ್ಲದ ಚೆಲುವಂಗಾನೊಲಿದೆನವ್ವ' 'ಕಿಚ್ಚಿಲ್ಲದ ಬೇಗೆಯಲಿ ಬೆಂದೆನವ್ವ' 'ಚಿಲಿಪಿಲಿ ಎಂದೋದುವ ಗಿಳಿಗಳಿರಾ, ನೀವು ಕಾಣಿರೆ' ಇತ್ಯಾದಿ ವಚನಗಳು ಭಾವಗೀತೆಗಳ ಸೊಬಗಿನಿಂದ ಸೊಗಸಿದರೆ 'ವೇದಶಾಸ್ತ್ರ ಆಗಮ ಪುರಾಣಂಗಳೆಲ್ಲವೂ ಕೊಟ್ಟಿರುವ ಕುಟ್ಟಿದ ನುಚ್ಚು ತೌಡು ಕಾಣಿಭೋ' 'ಕೊಳಲ ದನಿಗೆ ಸರ್ಪ ತಲೆದೂಗಿದಡೇನು ಒಳಗಣ ವಿಷದ ಬಯಕೆ ಬಿಡದನ್ನಕ್ಕ' 'ಹೆಣ್ಣು ಹೆಣ್ಣಾದಡೆ ಗಂಡಿನ ಸೂತಕ, ಗಂಡು ಗಂಡಾದಡೆ ಹೆಣ್ಣಿನ ಸೂತಕ' ಇತ್ಯಾದಿ ವಚನಗಳಲ್ಲಿ ಆಕೆಯ ವಿಚಾರ ಸರಣಿಯನ್ನು ಗುರುತಿಸಬಹುದು.

'ಅಕ್ಕನೊಂದು ಮಹಿಳಾ ಸೃಷ್ಟಿಯ ಅದ್ಭುತ' ಎಂಬ ಉದ್ಗಾರಕ್ಕೆ ಪಾತ್ರಳಾದ ಅಕ್ಕ ತನ್ನ ಕಾಲದ ಸಮಾಜ, ಪ್ರಭುತ್ವ, ವ್ಯವಸ್ಥೆ ಎಲ್ಲವನ್ನು ಧಿಕ್ಕರಿಸಿ ದಿಟ್ಟತನದಿಂದ ಏಕಾಂಗಿಯಾಗಿ ಊರು ಬಿಟ್ಟು ಕಲ್ಯಾಣದ ಕಡೆಗೆ ಹೋಗುತ್ತಾಳೆ. ಅಲ್ಲಿ ಅಲ್ಲಮ ಪ್ರಭು "ಪತಿಯ ಕುರುವು ಹೇಳಿದರೆ ಬಂದು ಕುಳ್ಳಿರು ಅಲ್ಲದಿರೆ ತೊಲಗು ತಾಯೆ... ನಿನ್ನ ಪತಿಯಾರೆಂಬುದ ಹೇಳಾ ಎಲೆ ಅವ್ವಾ" ಎಂದು ನೇರವಾಗಿ ಆಕೆಯ ಖಾಸಗಿ ಬದುಕಿನ ವಿಷಯವನ್ನು

ಸಾರ್ವಜನಿಕವಾಗಿ ಪ್ರಶ್ನಿಸುತ್ತಾನೆ. ಅನುಭವ ಮಂಟಪದ ಹಿರಿಯರು ತನ್ನನ್ನು ಸ್ವೀಕರಿಸಬೇಕು ಮಾನ್ಯತೆ ದೊರೆಯಬೇಕು ಎಂಬ ಹಂಬಲ ಆಕೆಯದಾಗಿತ್ತೆ? ಪತಿತ್ವ, ಪ್ರಭುತ್ವಗಳನ್ನು ಧಿಕ್ಕರಿಸಿದ ಆಕೆಗೆ ಶರಣರ ಒಪ್ಪಿಗೆಯ ಮುದ್ರೆ ಅನಿವಾರ್ಯವಾಗಿತ್ತೆ? ಎಂಬ ಪ್ರಶ್ನೆ ಕೆಲವೊಮ್ಮೆ ಕಾಡುತ್ತದೆ. ಆದರೆ ಅಲ್ಲಮನ ಎಲ್ಲ ಪ್ರಶ್ನೆಗಳಿಗೂ ಸೂಕ್ತ ಉತ್ತರಕೊಟ್ಟು ಆಕೆ ಅಲ್ಲಮನಿಂದಲೇ ಉದ್ಧಾರವಾಗಲು ಬಂದವಳಂತೆ ಅವನೊಡ್ಡಿದ ಒರೆಯಲ್ಲಿ ಪುಟವಿದ್ದ ಬಂಗಾರದಂತೆ ಕಂಗೊಳಿಸಿ ಅವನ ಮೆಚ್ಚಿಗೆಯನ್ನು, ಇಡೀ ಶರಣ ಸಮೂಹದ ಮನ್ನಣೆಯನ್ನು ಪಡೆದುಕೊಳ್ಳುತ್ತಾಳೆ. ಅಲ್ಲಮನ ಉದ್ದೇಶವೂ ಇದೇ ಆಗಿದ್ದಿರಬೇಕು. ಪೂರ್ವೋತ್ತರಗಳೊಂದನ್ನೂ ವಿಚಾರಿಸದೆ ಆಕೆಯನ್ನು ಅನುಭವ ಮಂಟಪದೊಳಗೆ ಸೇರಿಸಿ ಕೊಳ್ಳುವುದಕ್ಕಿಂತ ಎಲ್ಲರೆದುರು ಆಕೆಯ ಸತ್ತ್ವವನ್ನು ಪರೀಕ್ಷೆಗೆ ಒಳಪಡಿಸಿ 'ಕಡಿದು ಕೊರೆದು ತೇಯ್ದಡೆ ಗಂಧವ ಸೂಸುವ ಚಂದನದಂತೆ' ಆಕೆ ಪರಿಮಳಿಸುವಂತೆ ಮಾಡುತ್ತಾನೆ.

ಅಕ್ಕನನ್ನು ಬಿಟ್ಟರೆ ಗಮನ ಸೆಳೆಯುವ ಪ್ರಮುಖ ವಚನಕಾರ್ತಿ ಮುಕ್ತಾಯಕ್ಕ. ಆಕೆ ಬುದ್ಧಿಜೀವಿ. ಯಾವುದನ್ನೂ ಪರೀಕ್ಷಿಸದೆ, ಕೆಣಕದೆ, ಪ್ರಶ್ನಿಸದೆ ತನಗೆ ಒಪ್ಪಿಗೆಯಾಗದೆ ಅಂಗೀಕರಿಸುವವಳಲ್ಲ. ತಾತ್ತ್ವಿಕ ಪರಿಜ್ಞಾನ, ಪ್ರಖರ ವೈಚಾರಿಕತೆ, ಸೈದ್ಧಾಂತಿಕ ವಿಶ್ಲೇಷಣೆ, ಸ್ವತಂತ್ರ ಮನೋಧರ್ಮ ಇತ್ಯಾದಿ ವಿಶೇಷ ಅರ್ಹತೆಗಳನ್ನು ಗಳಿಸಿದ ತತ್ತ್ವಜ್ಞಾನಿ ಮುಕ್ತಾಯಕ್ಕ.

ನೀಲಲೋಚನೆ, ಅಕ್ಕ ನಾಗಮ್ಮ, ಗಂಗಾಂಬಿಕೆ, ಸತ್ಯಕ್ಕ, ಅಕ್ಕಮ್ಮ, ಗೊಗ್ಗವ್ವೆ, ಮೋಳಿಗೆ ಮಹದೇವಮ್ಮ, ಕಾಳವ್ವೆ ಮುಂತಾದ ಹಲವು ಶರಣೆಯರು ವಚನ ಸಾಹಿತ್ಯಕ್ಕೆ ಕೊಡುಗೆ ನೀಡಿದ್ದಾರೆ. ಆದರೆ ಹೆಚ್ಚಿನವರ ವಚನಗಳಲ್ಲಿ ಸ್ವಂತಿಕೆಯ ಮುದ್ರೆ ಇಲ್ಲ. ತಮ್ಮ ಗಂಡಂದಿರನ್ನೇ ಅನುಸರಿಸಿ ಭಕ್ತಿಮಾರ್ಗದಲ್ಲಿ ನಡೆಯುವ, ಉಳಿದ ವಚನಕಾರರ ಅಭಿಪ್ರಾಯವನ್ನೇ ಸಮರ್ಥಿಸುವ, ಸಂಪ್ರದಾಯ ನಿಷ್ಠೆಯನ್ನೇ ಎತ್ತಿ ಹೇಳುವ ಬಗೆಗಳು ಹೆಚ್ಚಾಗಿ ಕಂಡುಬರುತ್ತವೆ. ಶಬ್ದಗಳ ಮೂಲಕ ನಾವು ಅಭಿವ್ಯಕ್ತಿಸಬಲ್ಲೆವು ಎಂಬುದನ್ನು ತೋರಿದ್ದಾರೆ ಅಷ್ಟೆ.

ಹೆಣ್ಣು ಗಂಡು ಎಂಬುದು ಹುಟ್ಟಿನಿಂದ ಬಂದ ದೈಹಿಕ ಭೇದವೇ ಹೊರತು ಒಳಗೆ ಸುಳಿಯುವ ಆತ್ಮ ಅಥವಾ ಜ್ಞಾನ ಹೆಣ್ಣೂ ಅಲ್ಲ ಗಂಡೂ ಅಲ್ಲ ಎಂಬ ಮಾತು ಅನೇಕ ಶರಣರ ವಚನಗಳಲ್ಲಿ ಬಂದಿದ್ದರೂ ನೀಲಮ್ಮ 'ಏಕೆನ್ನ ಪುಟ್ಟಿಸಿದೆಯಯ್ಯಾ ಹೆಣ್ಣು ಜನ್ಮದಲ್ಲಿ ಪುಣ್ಯವಿಲ್ಲದ ಪಾಪಿಯ? ನಾನು ಇಹಪರಕ್ಕೆ ದೂರಳಯ್ಯಾ' ಎಂದು ಪ್ರಲಾಪಿಸಿದರೆ ಲಿಂಗಮ್ಮ ತನ್ನ ಸಾಧನೆಯ ಕೀರ್ತಿಯನ್ನೆಲ್ಲಾ ದೈನ್ಯದಿಂದ ಇತರರಿಗೆ ಸಮರ್ಪಿಸುತ್ತಾಳೆ 'ತಮ್ಮೆಲ್ಲರ ತೊತ್ತಿನ ತೊತ್ತಿನ ಪಡಿದೊತ್ತಿನ ಮಗಳೆಂದು ಹೊತ್ತು ಹೊತ್ತಿಗೆ ಎಚ್ಚರವ ಪಾಲಿಸಿ ರಕ್ಷಣೆಯ ಮಾಡಿದ ಕಾರಣದಿಂದ ತಮ್ಮೆಲ್ಲರ ಶ್ರೀಪಾದದಲ್ಲಿಯೇ ನಿಜ ಮುಕ್ತಳಾದೆನಯ್ಯಾ' ಎನ್ನುತ್ತಾಳೆ. ಅಕ್ಕಮ್ಮ 'ಪುರುಷನ ಆಚಾರದಲ್ಲಿ ಸತಿ ನಡೆಯಬೇಕಲ್ಲದೆ ಸತಿಗೆ ಸ್ವತಂತ್ರ ಉಂಟೆ?' ಎಂದು ಕೇಳುತ್ತಾಳೆ. ಶರಣ ಚಳವಳಿಯಲ್ಲಿ ಸ್ತ್ರೀ ಸಮಾನತೆ, ಮಹಿಳಾ ಸ್ವಾತಂತ್ರ್ಯಕ್ಕೆ ಮಾನ್ಯತೆ ದೊರೆತಿದ್ದಾಗಲೂ ಸಂಪ್ರದಾಯಸ್ಥವಾದ ಮನಸ್ಸು ಆಗಾಗ ಹಿಂದಕ್ಕೆ ಚಲಿಸಿ ಇಂತಹ ಅಭಿಪ್ರಾಯಗಳು ಅಭಿವ್ಯಕ್ತವಾಗಿರಬಹುದು.

ವಚನಕಾರ್ತಿಯರ ವಚನಗಳನ್ನು ನೋಡುವಾಗ ಒಂದು ಅಂಶ ಅಚ್ಚರಿಯನ್ನು ಮೂಡಿಸುತ್ತದೆ. ಅದೆಂದರೆ ಜ್ಞಾನದಲ್ಲಿ ಹಿರಿಯಳೂ, ಸ್ಫೂರ್ತಿಯ ಸೆಲೆಯೂ ಆದ ಮಹಾದೇವಿಯ ಬಗ್ಗೆ ಅವರು ವಹಿಸಿರುವ ದಿವ್ಯ ಮೌನ. ಅಲ್ಲಮ, ಬಸವಣ್ಣ ಮುಂತಾದ ಅನೇಕ ಹಿರಿಯ ಶರಣರು ಮನತುಂಬಿ ಆಕೆಯನ್ನು ಕೊಂಡಾಡಿ ಗೌರವಿಸಿರುವಾಗ ಒಬ್ಬಳೇ ಒಬ್ಬಳಾದರೂ ವಚನಕಾರ್ತಿ ಅವಳನ್ನು ಹೆಸರಿಸದೆ ಇರುವುದು ಆಶ್ಚರ್ಯ. ಅಕ್ಕನ ಬಗ್ಗೆ ಅವರ ಗಾಢ ಮೌನ ಅರ್ಥವಾಗದ್ದು. ಆಕೆಯ ಪ್ರಭಾವ ಇವರ ಮೇಲೆ ಬೀಳಲಿಲ್ಲವೇ? ಗಂಡನನ್ನು ಬಿಟ್ಟು ಬಂದವಳೆಂದು ತಿರಸ್ಕರಿಸಿದರೇ? ಹಾಗೆಂದು ಸಮಕಾಲೀನ ಶರಣರ ಬಗ್ಗೆ ಇವರು ಮೌನವಹಿಸಿಲ್ಲ. ಅಲ್ಲಮ, ಬಸವಣ್ಣ, ಚನ್ನಬಸವಣ್ಣ, ಸಿದ್ಧರಾಮ, ಮಡಿವಾಳಯ್ಯ, ದಾಸಿಮಯ್ಯ ಮುಂತಾದವರನ್ನು ಅನೇಕ ವಚನಕಾರ್ತಿಯರು ಸ್ತುತಿಸಿದ್ದಾರೆ. ಆಯ್ದಕ್ಕಿ ಲಕ್ಕಮ್ಮ ತನ್ನ ಒಂದು ವಚನದಲ್ಲಿ ಯಾರು ಯಾರಿಂದ ತಾನು ಶುದ್ಧಗೊಂಡೆ ಎಂದು ಹೇಳುವಾಗ ಶರಣರ ಒಂದು ದೊಡ್ಡ ಪಟ್ಟಿಯನ್ನೇ ಕೊಟ್ಟಿದ್ದಾಳೆ. ಮುಕ್ತಾಯಕ್ಕ, ಅಕ್ಕ ನಾಗಮ್ಮ ಇವರಿಗೆ ಅದರಲ್ಲಿ ಸ್ಥಾನ ಸಿಕ್ಕಿದೆಯೇ ಹೊರತು ಅಕ್ಕನಿಗಿಲ್ಲ! ಇದು ನಿಜವಾಗಿ ವಿಚಾರಯೋಗ್ಯ ಸಂಗತಿ.

ಶರಣ ಚಳವಳಿ ಒಟ್ಟು ಸಮಾಜದ ಮೇಲೆ ಬೀರಿದ ಪ್ರಭಾವ, ಅದರಿಂದ ಉಂಟಾದ ಸುಧಾರಣೆ ಇವುಗಳ ಬಗ್ಗೆ ಸ್ವಲ್ಪ ನೋಡಬಹುದು. ಶರಣರು ಲೌಕಿಕ ಮತ್ತು ಪಾರಮಾರ್ಥಿಕ ಎರಡರಲ್ಲಿಯೂ ಗಂಡಿಗೆ ಸಮಾನವಾದ ಸ್ಥಾನವನ್ನು ಮಹಿಳೆಗೆ ದೊರಕಿಸಿಕೊಟ್ಟ ಕಾರಣ ಕರ್ನಾಟಕದಲ್ಲಿಯಷ್ಟೇ ಅಲ್ಲ ಭಾರತದಲ್ಲಿಯೇ ಶರಣರದು ಸ್ತ್ರೀ ಸ್ವಾತಂತ್ರ್ಯದ ಪ್ರಥಮ ಚಳವಳಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಕಾಲದ ಭಕ್ತ ಕವಯಿತ್ರಿಯರು ತಮ್ಮ ಕಾಲದ ಎಲ್ಲ ಕಟ್ಟುಪಾಡುಗಳನ್ನು ಮೆಟ್ಟಿ ನಿಂತವರು. ಸಂಪ್ರದಾಯದ ಕಟ್ಟುಕಟ್ಟಳೆಗಳನ್ನು ಮೀರಿ ನಡೆದಾಗಲೂ ಆ ಸಮಾಜ ಅವರನ್ನು ಹತ್ತಿಕ್ಕಲಿಲ್ಲ ಎಂಬುದು ಗಮನಾರ್ಹ. ಬದುಕಿದ್ದಾಗಲೇ ಆ ಮಹಿಳೆಯರು ಜನಮನ್ನಣೆ, ಗೌರವ ಪಡೆದರು. ವಿಶೇಷವಾದ ಪ್ರತಿಭೆ, ವಿಶಿಷ್ಟವಾದ ವ್ಯಕ್ತಿತ್ವ, ಅಭಿವ್ಯಕ್ತಿಯ ಸಾಮರ್ಥ್ಯಗಳನ್ನು ಪಡೆದಿದ್ದ ಅವರು ಸಿಕ್ಕ ಸ್ವಾತಂತ್ರ್ಯವನ್ನು ಸ್ವಯಂ ದಕ್ಕಿಸಿಕೊಂಡಿದ್ದಾರೆ.

'ಮೊಲೆ ಮೂಡಿ ಬಂದರೆ ಹೆಣ್ಣೆಂಬರು, ಗಡ್ಡ ಮೀಸೆ ಬಂದಡೆ ಗಂಡೆಂಬರು ಒಳಗೆ ಸುಳಿವ ಆತ್ಮನು ಹೆಣ್ಣೂ ಅಲ್ಲ ಗಂಡೂ ಅಲ್ಲ' 'ಪರಿಪೂರ್ಣ ಭಕ್ತನಾಗಬೇಕಾದರೆ ಗಂಡು-ಹೆಣ್ಣೆಂಬ ಉಭಯ ಕಳೆಯಬೇಕು' ಹೀಗೆ ಆತ್ಮತತ್ವದ ಸಮಾನತೆಯನ್ನು ಶರಣರು ಸಾರಿದರು. ಹೆಣ್ಣು ಮಾಯೆಯಲ್ಲ ಮನದ ಮುಂದಣ ಆಸೆಯೇ ಮಾಯೆ ಎಂಬುದನ್ನು ತಿಳಿಯ ಹೇಳಿದರು. ಹೆಣ್ಣು ಅಸ್ಪೃಶ್ಯತೆಯಿಂದ ಕಳಚಿ ಕೊಂಡದ್ದು ಈ ಕಾಲದಲ್ಲೇ. ಹೆಣ್ಣು ಪ್ರತ್ಯಕ್ಷ ದೇವತೆ, ಪರಸ್ತ್ರೀ ಪಾರ್ವತಿಗೆ ಸಮಾನ ಎಂಬಂತಹ ವಿಚಾರಗಳೊಂದಿಗೆ ಶರಣರು ದೈವವನ್ನು ಸತಿಯನ್ನಾಗಿ ಕಂಡವರು. 'ಕೂಡಲಸಂಗನ ನಿಲುವು ಕನ್ನೆಯ ಸ್ನೇಹದಂತಿದ್ದಿತು' (ಮಹಾರಾಷ್ಟ್ರದ ಸಂತರು ವಿಠ್ಠಲನನ್ನು ವಿಠೂಬಾಯಿ ಮಾಡಿದ್ದಾರೆ) ಹೆಣ್ಣನ್ನು, ಸಂಸಾರವನ್ನು ತಿರಸ್ಕರಿಸಿ ಸಂನ್ಯಾಸಿಯಾಗಿ ಸಾಧನೆ ಮಾಡುವುದೇ ಶ್ರೇಷ್ಠ ಎಂಬ ಅಭಿಪ್ರಾಯಕ್ಕೆ ಶರಣರು ಮಾನ್ಯತೆ ನೀಡಲಿಲ್ಲ. 'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎಂದೇ ನಂಬಿದವರು ಅವರು. ಆದ್ದರಿಂದಲೇ ದಾಂಪತ್ಯಕ್ಕೆ ಹೆಚ್ಚಿನ ಮಹತ್ವ ನೀಡಿದ್ದಾರೆ. ಗಂಡಹೆಂಡತಿಯರು ಒಂದಂಗದ ಎರಡು ಕಣ್ಣಿದ್ದ ಹಾಗೆ. 'ಪತಿಯಿಂದ ಬಂದ ಸೋಂಕು ಸತಿಗೆ ಕೇಡು, ಸತಿಯಿಂದ ಬಂದ ಸೋಂಕು ಪತಿಗೆ ಕೇಡು' 'ಎನ್ನ ಭಕ್ತಿಗೆ ನಿಃಶಕ್ತಿಯಾದ ಕಾರಣ, ಎನ್ನ ಸತ್ಯಕ್ಕೆ ನೀ ಸತಿಯಾದ ಕಾರಣ ಎನ್ನ ಸುಖದುಃಖ, ನಿನ್ನ ಸುಖದುಃಖ ಅನ್ಯವಿಲ್ಲ. ಇದಕ್ಕೆ ಭಿನ್ನ ಭೇದವೇನು ಹೇಳಾ' ಎನ್ನುವ ಅನ್ಯೋನ್ಯ ದಾಂಪತ್ಯವನ್ನು ಕಂಡವರು ಶರಣರು. ಗಂಡಂದಿರು ತಪ್ಪೆಸಗಿದಾಗ ನೀಲಲೋಚನೆ, ಮಹಾದೇವಿ, ಆಯ್ದಕ್ಕಿ ಲಕ್ಕಮ್ಮ ಮೊದಲಾದವರು ಅವರ ತಪ್ಪನ್ನು ತೋರಿಸಿ ತಿದ್ದಿದ್ದಾರೆ. ವೈಚಾರಿಕತೆ, ಕಾಯಕನಿಷ್ಠೆ, ಶೀಲ, ಕೆಚ್ಚು ಮುಂತಾದ ಕಡೆಗಳಲ್ಲಿ ಶರಣರನ್ನೇ ಶರಣಾಗತ ರಾಗಿಸಿಕೊಂಡ ಶರಣೆಯರು ವಚನ ಚಳವಳಿಯ ಇತಿಹಾಸದಲ್ಲಿ ಉನ್ನತ

ಸ್ಥಾನ ಪಡೆದಿದ್ದಾರೆ. ಅನುಭವಮಂಟಪದಲ್ಲಿ ಸಮಸ್ತ ಶರಣರು 'ಮಹಾದೇವಿಯಕ್ಕನ ಶ್ರೀಪಾದಕ್ಕೆ ನಮೋ ನಮೋ' ಎಂದು ಸ್ತುತಿಸಿದ್ದನ್ನು ನೋಡಿದರೆ ಮಹಿಳೆ ಗಳಿಸಿಕೊಂಡ ಸ್ಥಾನದ ಬಗೆಗೆ ಅಭಿಮಾನ ಮೂಡುತ್ತದೆ.



ಶರಣ ಚಳವಳಿಯಲ್ಲಿ ಅವರಿವರೆನ್ನದೆ ವಿಭಿನ್ನ ಜಾತಿ, ವರ್ಗ, ವೃತ್ತಿ, ಸಂಸ್ಕೃತಿ, ಶ್ರೇಣಿಯವರೆಲ್ಲಾ ಒಟ್ಟು ಸೇರಿ ಒಂದು ಸಮುದಾಯವಾಗಿ ಭಾವನಾತ್ಮಕವಾಗಿ ಒಂದು ಗೂಡಿದ್ದರಿಂದ, ಅಲ್ಲಿಂದ ಹೊರಹೊಮ್ಮಿದ ಸಾಹಿತ್ಯದ ಕ್ಷಿತಿಜ ವಿಸ್ತಾರವಾಗಿ, ವಿಭಿನ್ನವಾಗಿ ಅಪೂರ್ವವಾದ ಕೊಡುಗೆಯಾಗಿದೆ.

ಶರಣ ಚಳವಳಿಯ ಕಾಲದಲ್ಲಿ ಮೂರು ಬಗೆಯ ಸ್ತ್ರೀ ಸಮುದಾಯವನ್ನು ಕಾಣಬಹುದು. 1) ಶರಣರ ಜೊತೆಯಲ್ಲಿದ್ದು ಅವರ ಆಚಾರ ವಿಚಾರಗಳಿಗೆ ಸ್ಪಂದಿಸುತ್ತಾ, ವೈಯಕ್ತಿಕ ಬೆಳವಣಿಗೆ ಯನ್ನು ಹೊಂದುತ್ತಾ, ತಮ್ಮದೇ ಆದ ಅಭಿವ್ಯಕ್ತಿಯ ಮಾರ್ಗವನ್ನು ಕಂಡುಕೊಂಡು ವಚನಕಾರ್ತಿಯರಾಗಿ ಸಾಹಿತ್ಯ ಕ್ಷೇತ್ರದಲ್ಲೂ ಹೆಸರು ಮಾಡಿದವರು. 2) ಶರಣ ಚಳವಳಿಯಲ್ಲಿ ಭಾಗಿಯಾಗಿದ್ದು ಸಾಹಿತ್ಯ ರಚನೆ ಮಾಡಲಾಗದ ಮಹಿಳಾ ಗುಂಪು. 3) ಈ ಚಳವಳಿಯ ತೆಕ್ಕೆಯೊಳಗೆ ಬರದೆ, ಹೊರಗೆ ಉಳಿದಿದ್ದ ಕರ್ನಾಟಕದ ಬಹುದೊಡ್ಡ ಮಹಿಳಾ ಸಮುದಾಯ.

ಶರಣ ಚಳವಳಿಯ ಸ್ತ್ರೀಲೋಕದ ಬಗ್ಗೆ ನಾವು ಆಡುವ ಮಾತುಗಳೆಲ್ಲವೂ ನಮಗೆ ದೊರೆತಿರುವ ಶರಣರ ಹಾಗೂ ಸುಮಾರು 30-40 ವಚನಕಾರ್ತಿಯರ ವಚನಗಳ ಆಧಾರದಿಂದ ಎಂಬುದನ್ನು ಮರೆಯುವಂತಿಲ್ಲ. ಹಾಗಾಗಿ ಅಲ್ಲಮ ಬಸವಣ್ಣ ಇವರ ಸಂಪರ್ಕಕ್ಕೆ ಬಂದ, ಆ ಚಳವಳಿಯ ಮುಖ್ಯ ಧಾರೆಯಲ್ಲಿ ಭಾಗವಹಿಸಿದ್ದ ಮಹಿಳೆಯರ ಬದುಕಿಗೆ ಮಾತ್ರ ಸಮಾನತೆ, ಸ್ವಾತಂತ್ರ್ಯ ಇತ್ಯಾದಿಗಳು ಅನ್ವಯಿಸುತ್ತವೆಯೇ ಹೊರತು ಸಮಸ್ತ ಮಹಿಳಾ ಜಗತ್ತಿಗೆ ಅಲ್ಲ.

ಶಿವಶರಣೆಯರ ಬಗೆಗೆ ಬರೆಯುವಾಗ ಸಾಮಾನ್ಯವಾಗಿ 'ಶರಣರು ಸ್ತ್ರೀಯರಿಗೆ ಮುಕ್ತ ಅವಕಾಶಕೊಟ್ಟರು.' 'ಶರಣರು ಮಹಿಳೆಯ ಉದ್ಧಾರಕಾರ್ಯವನ್ನು ಪ್ರಾರಂಭಿಸಿದರು.' 'ಮಹಿಳೆಯರ ಬಗ್ಗೆ ಶರಣರ ಧೋರಣೆ ಉದಾರವಾಗಿತ್ತು' 'ಸ್ತ್ರೀಗೆ ಸಮಾನ ಸ್ಥಾನ ಕಲ್ಪಿಸಿಕೊಟ್ಟದ್ದು ಶರಣರ ವಿಶಾಲ ಮನಸ್ಸಿನ ಪ್ರತೀಕ' 'ವಚನಕಾರರು ಮಹಿಳೆಗೆ ದುಡಿಯುವ ಹಕ್ಕನ್ನು ಕೊಟ್ಟರು' 'ಮಹಿಳೆಗೆ ಸ್ಥಾನ ನೀಡಿದರು' ಎಂಬಂತಹ ಮಾತುಗಳೂ ಪದೇ ಪದೇ ಕೇಳಿಬರುತ್ತವೆ. ಎಲ್ಲೋ ಒಂದು ಕಡೆ ಪುರುಷಪ್ರಜ್ಞೆ ತಾನು ನೀಡುವ ಸ್ಥಾನದಲ್ಲಿ ನಿಂತು, ಮಹಿಳೆಯನ್ನು ಪಡೆಯುವ ಸ್ಥಾನದಲ್ಲಿಯೇ ನಿಲ್ಲಿಸುತ್ತದೆ. ಅವಕಾಶ ನೀಡಿದವರು ನಾವು ಎಂಬ ಅಹಂ ಕೆಲಸ ಮಾಡುತ್ತಲೇ ಇರುತ್ತದೆ ಎಂದು ಕಾಣುತ್ತದೆ. ಮಹಿಳೆ ತಾನೇ ಗಳಿಸಿಕೊಳ್ಳುವ, ಪಡೆದುಕೊಳ್ಳುವ, ದಕ್ಕಿಸಿಕೊಳ್ಳುವ, ಉಳಿಸಿಕೊಳ್ಳುವ ಸಾಮರ್ಥ್ಯ ಪಡೆದಿದ್ದಾಳೆ ಎಂಬುದನ್ನು ಈಗಲೂ ಒಪ್ಪಿಕೊಳ್ಳುವುದು ಅವರಿಗೆ ಕಷ್ಟವಾಗಿದೆ.

ವಚನಕಾರ್ತಿಯರಲ್ಲಿ ಹೆಚ್ಚಿನವರು ಪುರುಷ ಒಪ್ಪಿತ ಮಾರ್ಗದಲ್ಲಿಯೇ ನಡೆದು, ತಮಗೆ ದೊರೆತ ಅಭಿವ್ಯಕ್ತಿಮಾರ್ಗದಲ್ಲಿ ವಚನಗಳನ್ನು ರಚಿಸಿದ್ದರೂ ಅವುಗಳಲ್ಲಿ ಸ್ವಂತಿಕೆ ಇಲ್ಲ. ಅಕ್ಕಮಹಾದೇವಿ, ನೀಲಲೋಚನೆ, ಮುಕ್ತಾಯಕ್ಕ, ದಲಿತವರ್ಗದಿಂದ ಬಂದ ಗೊಗ್ಗವ್ವೆ, ಕಾಳವ್ವೆ ಮುಂತಾದವರು ಮಾತ್ರ ತಮ್ಮ ವೈಚಾರಿಕತೆ, ಸ್ವಾಭಿಮಾನ, ಕಾಯಕ ನಿಷ್ಠೆ ಇತ್ಯಾದಿಗಳನ್ನು ಮೆರೆದಿದ್ದಾರೆ ಸ್ವಂತಿಕೆಯ ಛಾಪನ್ನು ಮೂಡಿಸಿದ್ದಾರೆ. ಪತಿತ್ವದ ಪ್ರಭುತ್ವದ ನಿರ್ಬಂಧ, ಅಧಿಕಾರಗಳನ್ನು ಅಕ್ಕ ತಿರಸ್ಕರಿಸಿದ್ದಾಳೆ. ಸ್ವಾಭಿಮಾನವನ್ನು ಬಿಟ್ಟುಕೊಡದೆ, ಎಂತಹ ಸಮಯದಲ್ಲೂ ಪರಿಸ್ಥಿತಿಯೊಂದಿಗೆ ರಾಜಿಮಾಡಿಕೊಳ್ಳದೆ, ಎದುರಾದ ಸವಾಲುಗಳಿಗೆಲ್ಲಾ ತನ್ನನ್ನು ಒಡ್ಡಿಕೊಂಡು ಗೆಲುವು ಸಾಧಿಸುತ್ತಾ ಅಕ್ಕ ತೋರಿದ ಬಂಡಾಯ ಪ್ರವೃತ್ತಿ ಬೆರಗುಗೊಳಿಸುವಂತಹುದು. ಅಲ್ಲಿಯವರೆಗೆ ಇದ್ದ ಮಹಿಳೆಯ ಸಿದ್ಧ ಮಾದರಿ ಎಂದರೆ ಆಕೆ ಹೆಂಡತಿಯಾಗಿ, ತಾಯಿಯಾಗಿ, ಕುಟುಂಬದ ಜವಾಬ್ದಾರಿಗಳಿಗೆ ಹೆಗಲುಕೊಟ್ಟು, ಆಧ್ಯಾತ್ಮದಿಂದ ದೂರವಾಗಿ, ಒಂದಲ್ಲ ಒಂದು ರೀತಿಯ ಯಾಜಮಾನ್ಯದ ಅಧೀನದಲ್ಲಿ ಬದುಕುವುದು. ಅಕ್ಕ ಈ ಎಲ್ಲ ವ್ಯವಸ್ಥೆಗಳನ್ನು ಮುರಿದು ಹೊರನಡೆದಳು. ತನ್ನದೇ ಬದುಕನ್ನು ದಿಟ್ಟತನದಿಂದ ಕಟ್ಟಿಕೊಂಡಳು. ಉಡುತಡಿಯಿಂದ ಒಂಟಿಯಾಗಿ ಹೊರಟವಳು ಮುಂದೆ ತನ್ನ ಕೊನೆಯನ್ನು ತಾನೇ ನಿರ್ಧರಿಸಿ ಶ್ರೀಶೈಲಕ್ಕೆ ನಡೆದಳು. ವಚನಚಳವಳಿಯ ಮಹಿಳೆಯ ಬಗ್ಗೆ ಹೇಳುವಾಗ ನಾವು ಮತ್ತೆ ಮತ್ತೆ ಅಕ್ಕನ ಕಡೆಗೆ ನೋಡಬೇಕಾಗುತ್ತದೆ. ಇದು ಆಕೆಯ ಹಿರಿಮೆ. ಹನ್ನೆರಡನೆಯ ಶತಮಾನದಲ್ಲಿ ಜನಸಾಮಾನ್ಯರ ಸ್ವತ್ತಾಗಿ, ತೀರಾ ಸಾಮಾನ್ಯರಾದ ಕೆಳವರ್ಗದ ಜನರೂ ಸಕ್ರಿಯವಾಗಿ ಕೃಷಿಗೈಯುವಂತೆ ನಿರ್ಮಾಣಗೊಂಡಿದ್ದ ಸಾಹಿತ್ಯಕ್ಷೇತ್ರ ಮುಂದೆ ತೀವ್ರ ಹಿನ್ನಡೆ ಅನುಭವಿಸಿತು. ವಚನಕಾರ್ತಿಯಾರಿಗೆ ದೊರೆತಿದ್ದ ಮುಕ್ತ ವಾತಾವರಣ ಮರೆಯಾಯಿತು. ಮತ್ತೆ ಸಂಪ್ರದಾಯ, ಕಟ್ಟು ಕಟ್ಟಳೆಗಳ ಹಿಡಿತದಲ್ಲಿ ಸಮಾಜ ಸಿಕ್ಕಿಬಿದ್ದಿತು. ಆಗ ಹುಟ್ಟಿಕೊಂಡ ಹರಿದಾಸರ ಭಕ್ತಿ ಪಂಥವೊಂದು ಕರ್ನಾಟಕದಲ್ಲಿ ಶಿವಶರಣರಂತೆಯೇ ಸಾಹಿತ್ಯವನ್ನು ಹರಿಭಕ್ತಿಯನ್ನು ಮನೆ ಮನೆಗೆ ತಲುಪಿಸುವ ಕಾರ್ಯದಲ್ಲಿ ತೊಡಗಿತು. ವೈದಿಕ ಮತತತ್ವದ ಸಂಕೀರ್ಣತೆಗೆ ಪರ್ಯಾಯವಾಗಿ ಹರಿಭಕ್ತಿಯನ್ನು ಸಂಸ್ಕೃತಕ್ಕೆ ಬದಲಾಗಿ ಆಡುನುಡಿ ಕನ್ನಡವನ್ನು, ಮಂತ್ರಕ್ಕೆ ಬದಲಾಗಿ ದೇವರನಾಮಗಳನ್ನು ರೂಢಿಗೆ ತಂದದ್ದು ಹರಿದಾಸ ಆಂದೋಲನದ ಪ್ರಮುಖ ಅಂಶಗಳು. ವೈದಿಕರಿಗೆ ಕನ್ನಡದ ಭಕ್ತಿಮಾರ್ಗದ ಮೂಲಕ ಸಾಮಾನ್ಯ ಜನರಲ್ಲಿ ನಂಬಿಕೆ ಮತ್ತು ವಿಶ್ವಾಸವನ್ನು ಮೂಡಿಸಬೇಕಿತ್ತು. ಯಾವುದೇ ಪಂಥ ಪ್ರಾರಂಭವಾಗಿ ಸಾಕಷ್ಟು ಬಲವಾಗಿ ಸಮಾಜದಲ್ಲಿ ಬೇರೂರಿದ ನಂತರ, ಅದಕ್ಕೊಂದು ಮಾನ್ಯತೆ ದೊರೆತಾಗ ತಡವಾಗಿಯಾದರೂ ಮಹಿಳೆಯರೂ ಅಭಿವ್ಯಕ್ತಿಸುವುದು ಕಾಣುತ್ತದೆ. ಹಾಗೆಯೇ ದಾಸಸಾಹಿತ್ಯದ ಎರಡನೆಯ ಘಟ್ಟದಲ್ಲಿ ಮಹಿಳೆಯರು ದಾಸಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡರು. ಕೀರ್ತನೆ, ಸುಳಾದಿ, ಉಗಾಭೋಗ, ದೀರ್ಘಕೃತಿ ಇತ್ಯಾದಿಗಳನ್ನು ವಿಪುಲವಾಗಿ ರಚಿಸಿದರು. ಗಲಗಲಿ ಅವ್ವನವರಿಂದ ಹಿಡಿದು ಇಂದಿನವರೆಗೆ ಅನೇಕಾನೇಕ ಮಹಿಳೆಯರು ದಾಸಸಾಹಿತ್ಯದ ರಚನೆ ಮತ್ತು ರಕ್ಷಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ದಾಸಸಾಹಿತ್ಯ ಮುಖ್ಯವಾಗಿ ತೋಂಡಿ (ಮೌಖಿಕ ಮೂಲಕ) ಸಂಪ್ರದಾಯದಲ್ಲಿ ಬೆಳೆದು ಬಂದದ್ದು. ಅಧಿಕ ಸಂಖ್ಯೆಯ ಅನಕ್ಷರಸ್ಥರನ್ನು ತಲುಪಲು ಕಣ್ಣಿಗಿಂತ ಕಿವಿಯನ್ನು ಗಮನದಲ್ಲಿಟ್ಟುಕೊಂಡು, ಹಾಡುಗಳ ಮೂಲಕ ಭಕ್ತಿಯನ್ನು ಬಿತ್ತುವ ಕಾರ್ಯವನ್ನು ಯಶಸ್ವಿಯಾಗಿ ಮಾಡಿತು. 'ವೇದ ಓದುವಂತಿಲ್ಲ, ಗಾಯತ್ರೀ ಕೇಳುವಂತಿಲ್ಲ, ಹೆಣ್ಣುಜನ್ಮಕ್ಕೆ ಮುಕ್ತಿಯಿಲ್ಲ' ಎಂಬಂಥ ಭಾವನೆ ಗಾಢವಾಗಿ ಸಮಾಜದಲ್ಲಿ ಬೇರೂರಿದ್ದ ಕಾಲದಲ್ಲಿ ಕೇವಲ 'ನಾಮಸ್ಮರಣೆ ಮುಕ್ತಿಗೆ ಸಾಧನ, ಶಾಸ್ತ್ರಜ್ಞಾನಕ್ಕೆ ಭಕ್ತಿ ಸಮಾನ' ಎಂಬಂತಹ ಮಾತುಗಳು ಜನಸಾಮಾನ್ಯರಿಗೂ, ಹೆಣ್ಣು ಮಕ್ಕಳಿಗೂ ಅತ್ಯಂತ ಆಕರ್ಷಕವಾಗಿ ಕಂಡಿತು. (ಸ್ತ್ರೀಯರನ್ನು, ಸಾಮಾನ್ಯರನ್ನು ಜ್ಞಾನಾರ್ಜನೆಯಿಂದ ದೂರ

ಉಳಿಸುವ ಒಂದು ತಂತ್ರವೂ ಇದಾಗಿರ ಬಹುದು) ತಮ್ಮ ಬದುಕಿನ ಕಷ್ಟಕೋಟಲೆಗಳು, ಸಂಸಾರಿಕ ಜೀವನದ ಬನ್ನ ಬವಣೆಗಳೂ, ಲೌಕಿಕ ಸಂತಸಗಳಿಂದ ವಂಚಿತವಾದ ವೈಧವ್ಯದ ಸಂಕಟಗಳು ಇವೆಲ್ಲದರಿಂದ ಪಾರಾಗುವ ಮಾರ್ಗವೊಂದು ಎದುರಿಗೆ ತೆರೆದುಕೊಂಡಾಗ ಸಹಜವಾಗಿಯೇ ಮಹಿಳೆಯರು ಆ ಕಡೆಗೆ ವಾಲಿದರು. 'ಹೆದರದಿರು ಮನವೆ ಹಿಮ್ಮೆಟ್ಟದಿರು ಮನವೆ... ಜರಿದರೆಂದು ಝುಂಕಿಸಿದರೆಂದು ಶಸ್ತ್ರಸಮಾಧಿ, ನೀರು, ನೇಣು, ವಿಷಔಷದದಲಿ ಘಟವ ಬಿಡದೆ' ಎಂಬ ವಚನದಂತೆ ಬದುಕಿಗೆ ವಿಮುಖರಾಗಿ ಆತ್ಮಹತ್ಯೆಯ ಹಾದಿ ಹಿಡಿಯದಂತೆ ಮಹಿಳೆಯರನ್ನು ತಡೆದದ್ದು ಭಕ್ತಿಮಾರ್ಗವೇ. 'ಈಸಬೇಕು ಇದ್ದು ಜೈಸಬೇಕು' ಎಂಬ ದೃಢತೆಯನ್ನು ಅದು ಅವರಲ್ಲಿ ಮೂಡಿಸಿತು.


ಹರಪನಹಳ್ಳಿ ಭೀಮವ್ವ (ಚಿತ್ರ: ಅಂತರ್ಜಾಲದಿಂದ)

ಭಕ್ತಿಸಾಹಿತ್ಯದ ದೃಷ್ಟಿ ಯಾವಾಗಲೂ ಪರಲೋಕದ ಕಡೆಗೆ ಇರಬೇಕೆಂದಿಲ್ಲ. ಎಷ್ಟೋ ಸಲ ಅದು ಶರೀರದ ನಶ್ವರತೆಯನ್ನು ಬದುಕಿನ ಅರ್ಥಹೀನತೆಯನ್ನು ಹೇಳುತ್ತಿರುವಾಗಲು, ನಿತ್ಯದ ಬದುಕನ್ನೇ ಆಚರಣೆಯಾಗಿಸಿಕೊಂಡು, ಸಾಮಾನ್ಯವನ್ನೇ ದೈವಿಕವಾಗಿಸಿಕೊಂಡು ಬಾಳುವ ಜೀವನದ ಹಿರಿಮೆಯನ್ನೇ ಸೂಚ್ಯವಾಗಿ ಸಾರುತ್ತಿರುತ್ತದೆ.

ದಾಸಸಾಹಿತ್ಯದ ಮಹಿಳೆಯರು ಮುಖ್ಯವಾಗಿ ವೈದಿಕ ಧರ್ಮದ ದ್ವೈತ ಸಿದ್ಧಾಂತದ ಹಿನ್ನೆಲೆಯಿಂದ ಬಂದವರು. ಅದ್ವೈತ, ವಿಶಿಷ್ಟಾದ್ವೈತದ ಹಿನ್ನೆಲೆಯಿಂದ ಬಂದವರು ಕೆಲವರಿದ್ದಾರೆ. ಇವರೆಲ್ಲರಲ್ಲಿರುವ ಸಮಾನ ಅಂಶವೆಂದರೆ ಹರಿಭಕ್ತಿ ಮತ್ತು ಭಾಗವತ ದೃಷ್ಟಿ. ಬಾಲ್ಯವಿವಾಹ, ವಧುವರರ ವಯಸ್ಸಿನ ಅಂತರ, ಅತಿಸಂತಾನ, ಬಂಜೆತನ, ವೈಧವ್ಯ, ದಾರಿದ್ರ್ಯ, ಬಿಟ್ಟಿಚಾಕರಿ ಇತ್ಯಾದಿ ತಾಪತ್ರಯಗಳ ಮಧ್ಯೆಯೂ ಅವುಗಳನ್ನು ಮೆಟ್ಟಿನಿಂತು, ಕ್ರಮಬದ್ಧ ಶಿಕ್ಷಣವಿಲ್ಲದಿದ್ದರೂ, ಕೇವಲ ಶ್ರವಣದ ಮೂಲಕ ಗ್ರಹಿಸಿದ ಪರಂಪರಾಗತ ಜ್ಞಾನವೇ ಇವರ ಆಸ್ತಿ. ತಾತ್ತ್ವಿಕ ವಿಚಾರಗಳು, ಮಂತ್ರ-ಸ್ತೋತ್ರಗಳು, ರಾಮಾಯಣ, ಮಹಾಭಾರತ, ಭಾಗವತ, ಭಗವದ್ಗೀತೆ ಎಲ್ಲವನ್ನು ಕೇಳಿ ಕೇಳಿಯೆ ತಿಳಿದುಕೊಂಡವರು. ನೆನಪಿನಲ್ಲಿ ಉಳಿಸಿಕೊಂಡವರು ಇವರು. ಅಭಿವ್ಯಕ್ತಿಸಬೇಕೆಂಬ ಒತ್ತಡ ಹೆಚ್ಚಾದಾಗ ಅದನ್ನು ಸಾಹಿತ್ಯವಾಗಿಸಿದರು. ಹಾಡಾಗಿಸಿದರು. ಹಾಡಿನ ಸ್ವರೂಪ, ಭಾಷೆಗಳು ಜಾನಪದ ನೆಲೆಯಿಂದ ಒದಗಿದವು.

ದಾಸಸಾಹಿತ್ಯದ ಮಹಿಳೆಯರು ಸಾಹಿತ್ಯ ರಚನೆಯಷ್ಟೇ ಅಲ್ಲದೆ, ಬೇರೆ ಹಲವು ರೀತಿಯ ಕುಶಲಕಲೆಗಳ ಮೂಲಕವು ಅಭಿವ್ಯಕ್ತಿ ನೀಡಿರುವುದು ಕಂಡುಬರುತ್ತದೆ. ಆದರೆ ಪುರುಷ ಪ್ರಧಾನ ಸಮಾಜ ಹೆಣ್ಣಿನ ಈ ಕಲಾವಂತಿಕೆಯನ್ನು ಗುರುತಿಸಿದ್ದು ತೀರ ಕಡಿಮೆ. ಓರೆಬಾಯಿ ಲಕ್ಷ್ಮೀದೇವಮ್ಮ, ಬಳ್ಳಾರಿ ರಾಧಾಬಾಯಿ, ಸರಸ್ವತಿಬಾಯಿ ಮುಂತಾದವರು ಕರಕುಶಲ ವಸ್ತುವಿನ್ಯಾಸ, ಅಲಂಕರಣ ಸಾಮಗ್ರಿ ತಯಾರಿ, ಜೇಡಿಮಣ್ಣಿನಿಂದ ಗೊಂಬೆಗಳ ತಯಾರಿ, ಹತ್ತಿ, ಕಾಗದ, ಬೆಂಡುಗಳಿಂದ ಆಕೃತಿ ನಿರ್ಮಾಣ, ಸಕ್ಕರೆ ಅಚ್ಚಿನಿಂದ ಹಣ್ಣು, ತಿಂಡಿ ಇತ್ಯಾದಿಗಳನ್ನು ಮಾಡುವುದು, ಕಸೂತಿ, ರಂಗೋಲಿ ಹಾಕುವುದು ಹೀಗೆ ಹತ್ತು ಹಲವು ರೀತಿಯಲ್ಲಿ ತಮ್ಮ ಕಲಾನೈಪುಣ್ಯವನ್ನು ತೋರಿದ್ದಾರೆ. ಲಕ್ಷ್ಮೀದೇವಮ್ಮನವರು ಬಳಪದ ಕಲ್ಲಿನಿಂದ ದೇವತಾವಿಗ್ರಹಗಳನ್ನು ನಿರ್ಮಿಸುತ್ತಿದ್ದರಂತೆ. ಇವರಿಗೆಲ್ಲ ಗೃಹವೈದ್ಯ, ನಾಟಿವೈದ್ಯದ ಬಗ್ಗೆ ಒಳ್ಳೆಯ ತಿಳುವಳಿಕೆಯಿದ್ದು ಸುತ್ತುಮುತ್ತಲಿನವರಿಗೆ ಮದ್ದು ನೀಡುತ್ತಿದ್ದರಂತೆ. ಹೆಚ್ಚಿನ ಹರಿದಾಸಿಯರು ಒಳ್ಳೆಯ ಹಾಡುಗಾರ್ತಿಯರಾಗಿದ್ದರು.

ನಾಡಿಗರ ಶಾಂತಿಬಾಯಿ ಭಟಕಳದಲ್ಲಿನ ನಾಡಘರ ದೇವಸ್ಥಾನದ ಜೀರ್ಣೋದ್ಧಾರ ಮಾಡಿಸಿ ಉತ್ಸವದ ಪರಂಪರೆ ಹಾಕಿ ಕೊಟ್ಟಿದ್ದಲ್ಲದೆ, ತಮ್ಮ ಮನೆದೇವರಾದ ಲಕ್ಷ್ಮೀನರಸಿಂಹನ ದೇವಾಲಯವನ್ನು ಬಳ್ಳಾರಿಯಲ್ಲಿ ನಿರ್ಮಿಸಿದರು. ಲಕ್ಷ್ಮೀನರಸಿಂಹ, ಪ್ರಾಣದೇವರು, ರಾಘವೇಂದ್ರ ಸ್ವಾಮಿಗಳು ಹಾಗೂ ಸತ್ಯಧ್ಯಾನ ಸ್ವಾಮಿಗಳ ಮೃತ್ತಿಕಾ ಬೃಂದಾವನಗಳು ಹೀಗೆ ಒಂದೇ ಮಂದಿರದಲ್ಲಿ ಹರಿ, ವಾಯು, ಗುರುಗಳು ನೆಲೆಸುವಂತೆ ಮಾಡಿದ ಸಾಧನೆ ಇವರದು.

ಯದುಗಿರಿಯಮ್ಮ, ಅಂಬಾಬಾಯಿ ಭಾರತದ ಅನೇಕ ಭಾಗಗಳಲ್ಲಿ ತೀರ್ಥಯಾತ್ರೆ ಮಾಡಿದ್ದಾರೆ. ಗಲಗಲಿ ಅವ್ವ ಹದಿನೇಳನೆ ಶತಮಾನದಲ್ಲಿ ವಿದ್ವತ್‌ಗೋಷ್ಠಿಗಳ ಚರ್ಚೆಗಳಲ್ಲಿ ಭಾಗವಹಿಸುವಷ್ಟು ವಿದ್ವತ್ತನ್ನು ಪಡೆದಿದ್ದರು ಎಂಬುದು ಗಮನಾರ್ಹ ಸಂಗತಿ. ಕಾಶಿಯ ವಿದ್ವಾಂಸರ ಪ್ರಶ್ನೆಗಳಿಗೆ ಸಮಂಜಸ ಉತ್ತರ ನೀಡಿ ಪೇಶ್ವೆಯ ಮೆಚ್ಚುಗೆ ಗಳಿಸಿ, ಅವರಿಂದ ಸನ್ನದು, ವಾರ್ಷಿಕ ಅನುದಾನ ಪಡೆದಳೆಂದು ತಿಳಿಯುತ್ತದೆ. ಇವರಿಗೆ ನ್ಯಾಯಶಾಸ್ತ್ರ ಕರತಲಾಮಲಕವಾಗಿತ್ತಂತೆ. ಯತಿಗಳಾದ ಸತ್ಯಪೂರ್ಣ ಸ್ವಾಮಿಗಳಿಗೆ ಅಧ್ಯಯನದಲ್ಲಿ ಸಮಸ್ಯೆ ಯೊಂದು ಎದುರಾದಾಗ ವಿದ್ವಾಂಸರಿಂದ ಪರಿಹಾರ ದೊರಕದೆ ಅವ್ವನವರನ್ನು ವಿಚಾರಿಸಿದಾಗ ಪರಿಹಾರ ದೊರೆಯಿತಂತೆ.

12ನೇ ಪ್ರಾಯದಲ್ಲಿ 95 ವರ್ಷದ ಮುದುಕನನ್ನು ಮದುವೆಯಾಗಿ, ಕೇವಲ 8 ದಿನಗಳಲ್ಲೇ ವಿಧವೆಯಾದ ಗಲಗಲಿ ಅವ್ವ ತನ್ನ ಸ್ಥಿತಿಗಾಗಿ ಕಣ್ಣೀರು ಸುರಿಸುವುದಾಗಲಿ, ಬದುಕು ಮುಗಿಯಿತೆಂದು ಮೂಲೆ ಹಿಡಿಯುವುದಾಗಲಿ ಮಾಡದೆ, ಬಂದ ಬದುಕನ್ನು ಸ್ವೀಕರಿಸಿ ಧೈರ್ಯದಿಂದ ಮುನ್ನಡೆದು, ಹರಿಭಕ್ತಿಯ ನೆಲೆಯಿಂದ ಸಾಹಿತ್ಯಕವಾಗಿ, ಆಧ್ಯಾತ್ಮಿಕವಾಗಿ ಸಾಧನೆ ಮಾಡಿದ್ದು ಮೆಚ್ಚಬೇಕಾದ ಸಂಗತಿ.

ಹೆಳವನಕಟ್ಟೆ ಗಿರಿಯಮ್ಮ ಬಾಲ್ಯದಿಂದಲೇ ವಿರಕ್ತಳೂ ದೈವಭಕ್ತಳೂ ಆಗಿದ್ದು ಹಿರಿಯರ ಒತ್ತಾಯಕ್ಕೆ ಮಣಿದು ಮದುವೆ ಆಗಬೇಕಾಯಿತು. ಅಕ್ಕನಂತೆ ಗಂಡನನ್ನು ತೊರೆದುಹೋಗುವುದು ಆಕೆಗೆ ಸಾಧ್ಯವಿಲ್ಲದ್ದರಿಂದ, ತನಗೆ ಸಂಸಾರದಲ್ಲಿ ಆಸಕ್ತಿ ಇಲ್ಲ ಎಂಬುದನ್ನು ಗಂಡನಿಗೆ ಮನದಟ್ಟು ಮಾಡಿಕೊಟ್ಟು ಆತನಿಗೆ ಇನ್ನೊಂದು ಮದುವೆ ಮಾಡಿಸಿ, ಗಂಡನ ಮನೆಯಲ್ಲಿದ್ದುಕೊಂಡೇ ತನ್ನ ಸಾಧನೆಯನ್ನು ಮುಂದುವರೆಸಿದಳು.

ಮಹಿಳಾದಾಸರು ಕಟ್ಟುನಿಟ್ಟಾದ ಸಂಪ್ರದಾಯಸ್ಥ ಕುಟುಂಬದೊಳಗಿದ್ದುಕೊಂಡೇ ಸಾಧನೆ ಮಾಡಿದ್ದಾರೆ. ತಮ್ಮ ಮಿತಿಗಳಲ್ಲಿಯೇ ಸಾಹಿತ್ಯ ರಚನೆಯೊಂದಿಗೆ, ತಮ್ಮ ಬೇರೆ ಆಸಕ್ತಿ ಕಲಾವಂತಿಕೆಗೂ ಅವಕಾಶ ಮಾಡಿಕೊಂಡಿದ್ದಾರೆ. ಗೃಹಕೃತ್ಯದ ಮಹಿಮೆಯನ್ನು ನಿರಾಕರಿಸದೆ, ಕರ್ತವ್ಯಗಳನ್ನು ಪಾಲಿಸುತ್ತ ಜೀವನ್ಮುಖಿಗಳಾಗಿ ಹಬ್ಬ ಹರಿದಿನ, ಯಾತ್ರೆ, ಜಾತ್ರೆ ಎಂದೆಲ್ಲ ಸಂಭ್ರಮಿಸಿದ್ದಾರೆ. ತಮ್ಮ ಕಥನ ಕಾವ್ಯಗಳಲ್ಲಿ ಅವುಗಳನ್ನೆಲ್ಲ ವರ್ಣಿಸಿದ್ದಾರೆ. ಮಹಿಳಾ ದಾಸಸಾಹಿತ್ಯ ಹರಿದಾಸರ ಹಾಡುಗಳಂತೆ ಊರೂರಲ್ಲಿ ತಿರುಗಿ ಹಾಡಿ ಕುಣಿದು ಕಟ್ಟಿದವುಗಳಲ್ಲ. (ಇದಕ್ಕೊಂದು ಅಪವಾದವೆಂದರೆ ಅಂಬಾಬಾಯಿಯವರು. ಇವರು ತಾಳ ತಂಬೂರಿ ಹಿಡಿದು ಜೋಳಿಗೆ ಹಾಕಿಕೊಂಡು ಹರಿದಾಸ ವೃತ್ತಿಯನ್ನು ಪ್ರೀತಿಯಿಂದ ಸ್ವೀಕರಿಸಿದ್ದರು.) ತಮ್ಮ ವೈಯಕ್ತಿಕ ಬದುಕಿನ ದುಃಖ, ದುಮ್ಮಾನ, ನೋವು, ನಲಿವುಗಳನ್ನು ಭಕ್ತಿಯ ಹೆಸರಿನಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. ಭಗವಂತನ ಮಹಿಮೆಯನ್ನು ಸಾರುವ ಸಿದ್ಧವಸ್ತುಗಳು ಬೇಕಾದಷ್ಟು ಇದ್ದುದರಿಂದ ಅವನ್ನೇ ಆಯ್ಕೆ

ಮಾಡಿಕೊಂಡು ಅದರಲ್ಲಿಯೇ ತಮ್ಮ ಸ್ತ್ರೀಪರದೃಷ್ಟಿ, ಜಾನಪದ ಸೊಗಡು, ತಾವು ಬಂದ ಹಿನ್ನೆಲೆಯ ಆಚಾರ-ವಿಚಾರ ಇತ್ಯಾದಿಗಳನ್ನು ನಿರೂಪಿಸಿದ್ದಾರೆ. ಇದನ್ನು ಕೆಲ ವಿಮರ್ಶಕರು ಮಹಿಳಾ ದಾಸಸಾಹಿತ್ಯದಲ್ಲಿ ಏನಿದೆ? ಬರೀ ಊಟ ತಿಂಡಿ, ಒಡವೆ ವಸ್ತ್ರ, ಹಬ್ಬ ಹುಣ್ಣಿಮೆ ಎಂದು ಲಘುವಾಗಿ ಪರಿಗಣಿಸಿದ್ದಾರೆ. (ಅಡುಗೆಮನೆ ಸಾಹಿತ್ಯ ಎಂಬಂತೆ) ಆದರೆ ಇವು ಕೂಡ ಬದುಕಿಗೆ ಬಣ್ಣ ತುಂಬುವ ಸಂಭ್ರಮ, ಉಲ್ಲಾಸಗಳನ್ನು ಹಂಚುವ ಉದ್ದೇಶದಿಂದಲೇ ಹುಟ್ಟಿದುವಲ್ಲವೇ? ದಾಸಸಾಹಿತ್ಯ ರಚಿಸಿದ ಹೆಣ್ಣುಮಕ್ಕಳಲ್ಲಿ ಅನೇಕರು ಬದುಕಿನ ಬಣ್ಣ ಕಳೆದುಕೊಂಡು, ಕತ್ತಲಲ್ಲಿ ಕೂರಬೇಕಾದ ಸ್ಥಿತಿಯಲ್ಲಿದ್ದವರು. ಅವರ ಕೃತಿಗಳಲ್ಲಿ ಇವುಗಳ ವರ್ಣನೆ ಸ್ವಲ್ಪ ಹೆಚ್ಚೇ ಇದ್ದರೂ ಅದೊಂದು ಅಪರಾಧವಾಗಬೇಕಿಲ್ಲ. ಹೆಣ್ಣುಮಕ್ಕಳ ಮನಸ್ಸು ಅರಳುವುದು, ಅವರ ಸಂಬಂಧಗಳು ಚಿಗುರುವುದು ಅಥವಾ ಮುರುಟುವುದು, ಅವರ ನೋವು ನಲಿವು ಪ್ರಕಟವಾಗುವುದು, ಪರಸ್ಪರರಲ್ಲಿ ತಿಳುವಳಿಕೆ ಹಂಚಲ್ಪಡುವುದು ಹೆಂಗಸರೆಲ್ಲಾ ಒಟ್ಟಾಗಿ ಸೇರುವ ಜಾತ್ರೆ, ಹಬ್ಬ-ಹರಿದಿನ, ಮದುವೆ, ಸೀಮಂತ ಮುಂತಾದ ಆಚರಣೆಗಳಲ್ಲಿಯೇ. ನಿರಂತರವಾದ ದುಡಿಮೆ, ಏಕತಾನತೆಯ ಬದುಕಿನಿಂದ ಬಿಡುಗಡೆಗೂ ಇದೊಂದು ದಾರಿ. ವೈದಿಕ ಧರ್ಮದ ಹಿನ್ನೆಲೆಯಿಂದ ಬಂದ ಈ ಸಾಹಿತ್ಯದಲ್ಲಿ ದೊರೆಯುವ ಒಂದು ವರ್ಗದ ಈ ವಿವರಗಳು ಸಾಮಾಜಿಕ, ಸಾಂಸ್ಕೃತಿಕ ಅಧ್ಯಯನಗಳ ದೃಷ್ಟಿಯಿಂದ ಮಹತ್ತ್ವದ್ದೇ ಆಗಿದೆ.

ಇಂದಿಗೂ ದಾಸಸಾಹಿತ್ಯ ಈ ಮಟ್ಟದಲ್ಲಿ ಜೀವಂತವಾಗಿ ಉಳಿದು ಬಂದಿರುವುದು ಮಹಿಳೆಯರ ಸಂಗೋಪನ ಕಾರ್ಯದಿಂದ ಈ ಪರಂಪರೆಯ ವಾಹಕರಾಗಿ ಅವರು ಕೆಲಸ ಮಾಡುತ್ತಾ ಬಂದಿದ್ದಾರೆ. ಇವತ್ತಿಗೂ ಈ ಪರಂಪರೆಯ ಮಹಿಳೆಯರ ಬೆಳಗು ಹರಿಯುವುದೇ ಉದಯರಾಗಗಳಿಂದ. ಸಂಜೆ ಕುಟುಂಬದ ಸದಸ್ಯರೆಲ್ಲಾ ಸೇರಿ, ಮುಖ್ಯವಾಗಿ ಹೆಂಗಸರು ಮಕ್ಕಳು ಹಾಡುವ ಭಜನೆಗಳು, ತಮಗೆ ಗೊತ್ತಿರುವ ಹಾಡುಗಳು, ದೇವರ ನಾಮಗಳನ್ನು ಮಕ್ಕಳಿಗೆ, ಸೊಸೆಯಂದಿರಿಗೆ, ಅಕ್ಕಪಕ್ಕದವರಿಗೆ ಹೇಳಿಕೊಡುವುದು, ಆಸಕ್ತರಿಗೆ ಬರೆದುಕೊಡುವುದೂ ಇವುಗಳ ಮೂಲಕ ದಾಸ ಸಾಹಿತ್ಯವನ್ನು ಕಾಪಾಡಿಕೊಂಡು ಬಂದ ಶ್ರದ್ಧಾಸಕ್ತಿಗಳಲ್ಲಿ ಸಿಂಹಪಾಲು ಮಹಿಳೆಯರದು.

ಹರಿದಾಸರು ಮಹಿಳೆಯರ ಬಗ್ಗೆ ತಮ್ಮ ಕೃತಿಗಳಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳು ರೂಢಿಗತವಾದ ಅಂದಿನ ಸಮಾಜದ ಅಭಿಪ್ರಾಯಗಳೇ ಆಗಿವೆ. ಎಲ್ಲ ಕೆಡುಕಿನ ಮೂಲವಾಗಿ, ಆಧ್ಯಾತ್ಮ ಸಾಧನೆಯ ಮಾರ್ಗಕ್ಕೆ ಅಡ್ಡಿಯಾಗಿ ಆಕೆ ಕಂಡುಬಂದಿದ್ದಾಳೆ. ಹೊನ್ನು, ಮಣ್ಣುಗಳಂತಹ ಜಡವಸ್ತುಗಳ ಜೊತೆ ಹೆಣ್ಣು ಸೇರಿದ್ದಾಳೆ. ಪುರಂದರದಾಸರನ್ನು ಬಿಟ್ಟರೆ ಬೇರಾವ ದಾಸರು ಹೆಣ್ಣಿನ ಸ್ಥಿತಿಗತಿಗಳ ಬಗ್ಗೆ ಅಷ್ಟಾಗಿ ತಲೆಕೆಡಿಸಿ ಕೊಂಡಿಲ್ಲ. ತಮಗೆ ಜ್ಞಾನೋದಯ ಮಾಡಿಸಿದ ಹೆಂಡತಿಯ ಬಗ್ಗೆ ಪುರಂದರದಾಸರು ಗೌರವ ವ್ಯಕ್ತಪಡಿಸಿದ್ದಾರೆ. ಹೆಣ್ಣಿಗೆ ಸಾಕಷ್ಟು ಬುದ್ಧಿವಾದ ಹೇಳಿದ್ದಾರೆ. ಗಂಡನಾಜ್ಞೆಯ ಮೀರುವ ಹೆಣ್ಣಿಗೆ ಉಗ್ರಶಿಕ್ಷೆ ಗಳನ್ನು ಹೇಳಿದ್ದಾರೆ! ಒಲ್ಲದ ವೈದಿಕನನ್ನು, ಮುದುಕನನ್ನು, ಮಾಯಾ ವಾದಿಯನ್ನು, ರೋಗಿಯನ್ನು ಮದುವೆಯಾಗಿ ಪಾಡುಪಡುವ ಹೆಣ್ಣುಮಕ್ಕಳ ಬಗ್ಗೆ ದಾಸರ ಮನ ಮಿಡಿದಿದೆ. 'ಮಂಡೆ ಬೋಳಾದರೆ ಮನ ಬೋಳಾಯಿತೆ' ಎಂದು ವಿಧವೆಯರ ಬಗ್ಗೆ ಅನುಕಂಪ ವ್ಯಕ್ತವಾಗಿದೆ. ಇಷ್ಟನ್ನು ಬಿಟ್ಟರೆ ಹೆಣ್ಣಿನ ಬಗ್ಗೆ ಯಾವ ಕಾಳಜಿಯು ವ್ಯಕ್ತವಾಗಿಲ್ಲ. ಆದರೆ ಯತಿಗಳು, ದಾಸರು, ಮಹಿಳಾ ಹರಿದಾಸರಿಗೆ ಅಂಕಿತಗಳನ್ನು ನೀಡುವ ಮೂಲಕ, ಅವರಿಂದ ಹಾಡಿಸುವ ಮೂಲಕ, ಅವರ ಕೃತಿಗಳನ್ನು ಕೇಳಿ ಚೆನ್ನಾಗಿದೆ ಮುಂದುವರಿಸಿ ಎಂದು ಪ್ರೋತ್ಸಾಹಿಸುವ ಮೂಲಕ ಅವರಲ್ಲಿ ಸ್ಫೂರ್ತಿ ತುಂಬಿದ್ದಾರೆ. ಸರಸ್ವತಿಬಾಯಿಯವರು ಧ್ಯಾನದಲ್ಲಿ ತಲ್ಲೀನರಾಗಿ ತನ್ಮಯತೆಯಿಂದ ಹಾಡುತ್ತಿದ್ದಾಗ ಅವರ ಪತಿ ವ್ಯಾಸಾಚಾರ್ಯರು ಬರೆದಿಡುತ್ತಿದ್ದರಂತೆ. ಜೀವುಬಾಯಿ ಅವರ ಕೃತಿಗಳನ್ನು ಅವರ ಸೋದರರು ಸುಂದರವಾಗಿ ಪ್ರತಿಮಾಡಿ ಇಟ್ಟಿದ್ದಾರೆ. ಮಠಗಳಿಂದಾಗಲಿ, ಮನೆಯವರಿಂದಾಗಲಿ ಈ ಮಹಿಳೆಯರ ಸಾಹಿತ್ಯಕೃಷಿಗೆ ನಿರ್ಬಂಧವಿರಲಿಲ್ಲ. ಪ್ರಾಯಶಃ ಇವರ ಕೃತಿಗಳ ಮುಖ್ಯ ತತ್ತ್ವ ಭಕ್ತಿ. ಮೂಲ ಸತ್ಯ ಶ್ರೀಹರಿ ಆಗಿದ್ದುದೇ ಇದಕ್ಕೆ ಕಾರಣವಿರಬಹುದು.

ಸಾಮಾನ್ಯವಾಗಿ ಮಹಿಳಾ ದಾಸಸಾಹಿತ್ಯವನ್ನು ವಿಶ್ಲೇಷಿಸುವಾಗೆಲ್ಲ ಅದನ್ನು ವಚನಕಾರ್ತಿಯರ ರಚನೆಗಳೊಂದಿಗೆ ಹೋಲಿಸಲಾಗಿದೆ. ಯಾವ ಕಾಲ, ದೇಶಗಳ ವಿಮರ್ಶೆಯ ಅಳತೆಗೋಲಿನಿಂದ ಅಳೆದರೂ ವಚನಸಾಹಿತ್ಯವೇ ಮೇಲು ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಸಂಖ್ಯೆಯ ದೃಷ್ಟಿಯಿಂದ ಗಮನಿಸಿದರೆ ಇತ್ತೀಚೆಗೆ ಪ್ರಕಟವಾಗಿರುವ ಮಹಿಳಾ ದಾಸಸಾಹಿತ್ಯದ ಆರು ಸಂಪುಟಗಳು ಆ ಸಾಹಿತ್ಯದ ವಿಸ್ತಾರವನ್ನು ತಿಳಿಸುತ್ತವೆ. ವಚವನಕಾರ್ತಿಯರು ಮತ್ತು ಮಹಿಳಾ ದಾಸಸಾಹಿತ್ಯ ರಚಕರಲ್ಲಿರುವ ಸಾಮಾನ್ಯ ಅಂಶವೆಂದರೆ ಇಬ್ಬರೂ ಸ್ತ್ರೀಯರು ಮತ್ತು ಭಕ್ತೆಯರು ಎಂಬುದು. ಈ ಎರಡು ಆಂದೋಲನಗಳ ಉದ್ದೇಶ, ಪರಿಸರ, ಸ್ವರೂಪ ಎಲ್ಲವೂ ಭಿನ್ನ. ವಚನಕಾರ್ತಿಯರಿಗೆ ಬಹುದೊಡ್ಡ ಚಳವಳದ ಗುಂಪಿನ ಬೆಂಬಲವಿತ್ತು. ಅನುಭವ ಮಂಟಪದ ಅನುಭಾವಿಗಳ ಮಾತು ಚರ್ಚೆಗಳ ಮೂಲಕ ವೈಚಾರಿಕವಾಗಿಯೂ ವಚನ ಸಾಹಿತ್ಯ ರೂಪು ಪಡೆಯಿತು. ವಿವಿಧ ಜಾತಿಯ ವಿವಿಧ ವರ್ಗದ, ವಿವಿಧ ಕಾಯಕದ ಬಹುಜನರನ್ನು ಒಳಗೊಂಡ ಆ ಸಮೂಹ ತನ್ನ ಅಭಿವ್ಯಕ್ತಿಯಲ್ಲಿ ವೈವಿಧ್ಯವನ್ನು, ವೈಚಾರಿಕತೆಯನ್ನು, ಬಂಡಾಯವನ್ನು ಮೆರೆಯಿತು. ಹರಿದಾಸ ಆಂದೋಲನದಲ್ಲಿ ಈ ವ್ಯಾಪಕತೆ ಇಲ್ಲ. ಬಹುತೇಕ ಸಾಂಪ್ರದಾಯಿಕ ಕೌಟುಂಬಿಕ ಚೌಕಟ್ಟಿನೊಳಗೆ ಮಹಿಳೆ ತನ್ನ ಕಾವ್ಯಶಕ್ತಿಯನ್ನು ಪ್ರಕಟಗೊಳಿಸಿದ್ದಾಳೆ. ಭಕ್ತಿಪಂಥದ ಕವಯಿತ್ರಿಯರ ನೋಟ ಪಾರಮಾರ್ಥಿಕದ ಕಡೆಗೇ ಇದ್ದು ಪ್ರಾಪಂಚಿಕದ ಕಡೆಗೆ ಹೆಚ್ಚು ಇರಲಿಲ್ಲವಾದ್ದರಿಂದ ಒಂದು ರೀತಿಯ ಮಿತಿಗೆ ಒಳಪಟ್ಟಿದೆ. ವೈದಿಕ ಸಂಸ್ಕೃತಿಯ ಪ್ರಚಾರ, ಮತೀಯ ತತ್ತ್ವಗಳು ಸಾಹಿತ್ಯದಲ್ಲಿ ಸೇರ್ಪಡೆ ಯಾಗಿವೆ. ಪುರುಷರ ಒಪ್ಪಿತ ಮೌಲ್ಯಗಳನ್ನೇ ಸ್ವೀಕರಿಸಲಾಗಿದೆ. ಸಮಾಜದ, ಕುಟುಂಬದ ಕಟ್ಟುಪಾಡುಗಳನ್ನು ವಿರೋಧಿಸುವ ಬದಲು ಅದನ್ನು ಒಪ್ಪಿಕೊಂಡು ಅನುಸರಿಸಿಕೊಂಡು ಅದರೊಳಗೆ ತಮ್ಮ ಅಸ್ತಿತ್ವವನ್ನು ಹುಡುಕಿಕೊಂಡು ಸ್ವಂತಿಕೆಯ ನೆಲೆಯಿಂದ ಅಭಿವ್ಯಕ್ತಿಸುವ ಪ್ರಯತ್ನವನ್ನೂ ಮಾಡಲಾಗಿದೆ. ಪುರುಷರು ನೀಡಿದ ಮಹಿಳೆಯರ ಸಿದ್ಧ ಮಾದರಿಗಳೇ ವಿಜೃಂಭಿಸಿದೆ. ಭಕ್ತಿಯ ಚೌಕಟ್ಟಿನೊಳಗೆ ತಮ್ಮ ಸ್ವಾತಂತ್ರ್ಯವನ್ನು ಗಳಿಸಿಕೊಂಡು, ಸೃಜನಶೀಲ ಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡದ್ದೇ ಚರಿತ್ರಾರ್ಹ ಘಟನೆಯಾಗಿದೆ. ❑

ನಾನು ನನ್ನನ್ನು ಬದಲಾಗುತ್ತಿರುವ ಅಸ್ಮಿತೆಗಳ ಸಂಕೀರ್ಣ ಎಂದು ನೋಡುತ್ತೇನೆ. ಒಬ್ಬ ಲೇಖಕಿ, ನಾಗರಿಕ ಪ್ರಜೆ, ಸ್ತ್ರೀವಾದಿ, ತಾಯಿ ಮುಂತಾಗಿ ನನ್ನ ಜೀವನವನ್ನು ಪ್ರತ್ಯೇಕವಾಗಿಸುವುದು ನನಗೆ ಸಾಧ್ಯವಾಗದು. ಅಸ್ಮಿತೆ ಎಂಬುದನ್ನು ದಿನದಿನವೂ ನಾವು ಮತ್ತೆ ಮತ್ತೆ ಸೃಷ್ಟಿಸಿಕೊಳ್ಳುತ್ತಿರುತ್ತೇವೆ. ಪತ್ನಿಯಾಗಿ, ತಾಯಂದಿರಾಗಿ, ದುಡಿಯುವ ಮಹಿಳೆಯರಾಗಿ, ಬಸ್ ಹಿಡಿದು, ಕಾರು ನಡೆಸುತ್ತಾ ನಾವು ಸಾಗುವಾಗ ಎಲ್ಲಾ ಬೇರೆಯವರು ನಮ್ಮನ್ನು ಓವರ್‌ಟೇಕ್ ಮಾಡುತ್ತಿರುತ್ತಾರೆ.

–ಗೀತಾ ಹರಿಹರನ್

(ಸ್ತ್ರೀವಾದಿ ಆಂಗ್ಲ ಲೇಖಕಿ ಹಾಗೂ ಪತ್ರಕರ್ತೆ)

Registered with Registrar of Newspapers of India under No. KARKAN/2007/22289
'NAMMA MANASA', REGD. No. : MAG(3) NPP/399(A) / 2006-07 KA/BGS/2074/2010-12

ನಮ್ಮ ಮಾನಸ

- ಮಹಿಳೆಯರಿಗೆ ಸಂಬಂಧಿಸಿದ ಲೇಖನಗಳು, ವರದಿಗಳು ವಿಶ್ಲೇಷಣೆಗಳು, ವಿಮರ್ಶೆಗಳು, ಅನುಭವಗಳು, ಕತೆ-ಕವನಗಳನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.
- ಪತ್ರಿಕೆಯು ವಿಷಯಾಧರಿತವಾಗಿದ್ದು, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಮಹಿಳೆಯರ ಬದುಕಿನ ಮೇಲೆ ಪರಿಣಾಮ ಬೀರುವ ಸಾಮಾಜಿಕ, ರಾಜಕೀಯ, ಆರ್ಥಿಕ ವಿಚಾರಗಳನ್ನು ಚರ್ಚಿಸಲಾಗಿದೆ.
- ವಿವಾಹ, ಕುಟುಂಬದಂತಹ ಸಾಮಾಜಿಕ ಸಂಸ್ಥೆಗಳು, ಮನೆಗೆಲಸ, ಸಂಬಳರಹಿತ ದುಡಿಮೆ, ಆರ್ಥಿಕ ನೀತಿ, ಜಾತಿ, ವರ್ಗ, ಸೌಂದರ್ಯ, ಲಿಂಗ, ಹೆಣ್ತನ ಮುಂತಾದ ವಿಷಯಗಳನ್ನು ಚರ್ಚೆಗೊಳಪಡಿಸಿ ಪ್ರಕಟಿಸಲಾಗಿದೆ. ಗುತ್ತಿಗೆ ಪೌರಕಾರ್ಮಿಕರ ಹೋರಾಟಗಳಿಗೆ ಸ್ಪಂದಿಸಿ ಲೇಖನಗಳನ್ನು ಪ್ರಕಟಿಸಿದೆ.
- ಆರೋಗ್ಯ, ಲೈಂಗಿಕತೆ, ಅಪಾಯಕಾರೀ ಗರ್ಭ ನಿರೋಧಕಗಳು, ಆರ್ಥಿಕತೆ ಮತ್ತು ಅಭಿವೃದ್ಧಿ, ಅಭಿವೃದ್ಧಿ ಯೋಜನೆಗಳು ಮುಂತಾದ ವಿಚಾರಗಳನ್ನು ವಿಮರ್ಶೆಗೊಳಪಡಿಸಲಾಗಿದೆ.
- ಅಣ್ವಸ್ತ್ರೀಕರಣ, ಮಿಲಿಟರೀಕರಣ, ಜಾಗತೀಕರಣದಂಥ ಬೆಳವಣಿಗೆಗಳನ್ನು ಮಹಿಳಾ ದೃಷ್ಟಿಕೋನದಿಂದ ಪ್ರಶ್ನಿಸಲಾಗಿದೆ.
- ಇತರ ಪ್ರಜಾಸತ್ತಾತ್ಮಕವಾದ ಸಂಘಟನೆಗಳೊಡನೆ ಕೋಮುವಾದ, ಸಮಾನ ನಾಗರಿಕ ಸಂಹಿತೆ, ಮೀಸಲಾತಿ, ಲೈಂಗಿಕತೆ, ಪರಿಸರ, ಸ್ಥಳಾಂತರ ಮುಂತಾದ ವಿವಾದಗಳನ್ನು ಕುರಿತ ಚರ್ಚೆಗಳಲ್ಲಿ, ಆಂದೋಲನಗಳಲ್ಲಿ ಪಾಲ್ಗೊಳ್ಳಲಾಗಿದೆ.
- ಸ್ವಸಹಾಯ ಸಂಘಗಳನ್ನು ರಚಿಸುವ ಮೂಲಕ ಮಹಿಳೆಯರ ಸಬಲತೆಗೆ ಪ್ರೋತ್ಸಾಹ ನೀಡಲಾಗಿದೆ.
- ನಮ್ಮದೇ ಮಿತಿಯಲ್ಲಿ ತೊಂದರೆಗೊಳಗಾದ ಮಹಿಳೆಯರಿಗೆ ಸಲಹೆ, ನೈತಿಕ ಬೆಂಬಲಗಳಲ್ಲದೆ ಕಾನೂನಿನ ನೆರವನ್ನು ನೀಡುತ್ತಿದ್ದೇವೆ.
- ಮಹಿಳೆಯರು ತಾವಿದ್ದೆಡೆಯಲ್ಲಿ ಮಹಿಳಾ ಪತ್ರಿಕೆಗಳನ್ನು ಹೊರತರಲು ಪ್ರಯತ್ನಿಸಿದಲ್ಲಿ, ಗುಂಪುಗಳನ್ನು ರಚಿಸಬೇಕಾದಲ್ಲಿ ಸಹಕರಿಸಲು ಉದ್ದೇಶಿಸಿದ್ದೇವೆ.

Registered Magazine

Posted on 9th of every month at MBC, Bangalore GPO
Total No. of Pages: 24

ವಿಳಾಸ :
ನಮ್ಮ ಮಾನಸ
114/5, 9ನೇ ಕಿರುರಸ್ತೆ, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ
ಬೆಂಗಳೂರು - 560 018